# ಕರ್ನಾಟಕ "ನಾಡಗೀತೆ"

# ಒಂದು ವಿಶ್ಲೇಷಣೆ

**ಡಾ. ಎಂ. ಚಿದಾನಂದ ಮೂರ್ತಿ**

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೧

KARNATAKA 'NADAGEETE': ONDU VISHLESHANE- A book written by Dr. M. CHIDNANDA MURTHY, Bangalore. Published by Ashok N. Chalawadi, Administrative Officer. Karinada Pustaka Pradhikara, Kannada Bhavana, J.C. Road, Bangalore-560 002.

© ಈ' ಆವೃತ್ತಿಯ ಗ್ರಂಥಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು :

ಪ್ರಥಮ ಮುದ್ರಣ : ೨೦೧೦

ಪುಟಗಳು : viii + ೪೮ = ೫೬

ಪ್ರತಿಗಳು : ೫,೦೦೦

ಬೆಲೆ : ರೂ. ೧೦/- (ಹತ್ತು ರೂಪಾಯಿ ಮಾತ್ರ)

First Print : ೨೦೧೦

Pages : viii + 48=56

Copies : 5,000

Price : Rs 10/.

ISBN : 81-7713-293-8

**ಪ್ರಕಾಶಕರು:**

ಅಶೋಕ ಎಸ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨

**ಕರಡು ತಿದ್ದಿದವರು** : ಲೇಖಕರು

**ಮುದ್ರಕರು :**

ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.,
ನಂ. ೧೬/೧, ೨ನೇ ಮುಖ್ಯರಸ್ತೆ, ३ನೇ ಅಡ್ಡರಸ್ತೆ
ಕಸ್ತೂರಿಬಾ ನಗರ, ಮೈಸೂರು ರಸ್ತೆ,
ಬೆಂಗಳೂರು-೫೬೦ ೦೨೬
ದೂರವಾಣಿ : ೦೮೦-೨೬೭೪೮೮೧೧; ಮೊ : ೯೩೪೨೮೬೪೭೬೧

# ಅಧ್ಯಕ್ಷರ ನುಡಿ

ರಾಷ್ಟ್ರಕವಿ ಕುವೆಂಪು ಅವರ **'ಜಯಭಾರತ ಜನನಿಯ ತನುಜಾತೆ'** ಪದ್ಯ ಜನಮಾನಸದಲ್ಲಿ ನಾಡಗೀತೆಯಾಗಿ ಹಲವಾರು ವರ್ಷದಿಂದ ನೆಲೆಸಿದೆ. ಆದಾಗ್ಯೂ ೨೦೦೪ರಲ್ಲಿ ಕರ್ನಾಟಕ ಸರ್ಕಾರ ಅಧಿಕೃತವಾಗಿ ಈ ಗೀತೆಯನ್ನು **'ನಾಡಗೀತೆ'**ಯಾಗಿ ಘೋಷಿಸಿ ಕನ್ನಡಿಗರ ಅಭಿಮಾನಕ್ಕೆ ಪಾತ್ರವಾಯಿತು. ಈ ಗೀತೆಯಲ್ಲಿ ಬರುವ ಅನೇಕ ವ್ಯಕ್ತಿ, ವಿಷಯಗಳ ಬಗ್ಗೆ ಜನಸಾಮಾನ್ಯರಿಗೆ ಮಾಹಿತಿ ಇಲ್ಲದೆ ಇದ್ದುದು ಒಂದು ಕೊರತೆಯಾಗಿತ್ತು. ನಾಡಗೀತೆಯನ್ನು ಮೆಚ್ಚುವ ಅನೇಕರಿಗೆ ಅಲ್ಲಿ ಬರುವ ಋಷಿಗಳು, ರಾಜರುಗಳ ಬಗ್ಗೆ ತಿಳುವಳಿಕೆ ಇರಲಿಲ್ಲ. ನನ್ನ ಪೂಜ್ಯ ಗುರುಗಳು, ನಾಡಿನ ಹಿರಿಯ ವಿದ್ವಾಂಸರೂ ಡಾ. ಎಂ.ಚಿದಾನಂದಮೂರ್ತಿಯವರು ಈ ಬಗ್ಗೆ ವಿವರಣಾತ್ಮಕವಾಗಿ ಕಿರುಹೊತ್ತಿಗೆಯನ್ನು ಸಿದ್ಧಪಡಿಸಿ ನಾಡಗೀತೆಯಲ್ಲಿ ಬರುವ ಅನೇಕ ಸಂಗತಿಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ನಾಡಗೀತೆಯನ್ನು ಸಂಪೂರ್ಣವಾಗಿ ಗ್ರಹಿಸಲು ಇದರಿಂದ ಸಹಾಯಕವಾಗಿದೆ. ಈ ಕಿರುಹೊತ್ತಿಗೆಯನ್ನು ಪ್ರಾಧಿಕಾರದಿಂದ ಪ್ರಕಟಿಸಲು ತಮ್ಮ ಸಮ್ಮತಿಯನ್ನು ನೀಡಿ ಕನ್ನಡಿಗರಿಗೆ ಅವರು ಮಹದುಪಕಾರವನ್ನು ಮಾಡಿದ್ದಾರೆ. ಪೂಜ್ಯ ಡಾ. ಎಂ.ಚಿದಾನಂದಮೂರ್ತಿಯವರಿಗೆ ನಾನು ಋಣಿಯಾಗಿದ್ದೇನೆ.

ಈ ಪುಸ್ತಕವನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್.ಚಲವಾದಿ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ.ಮುಕುಂದನ್, ಸಹಾಯಕ ನಿರ್ದೇಶಕರಾದ ಶ್ರೀ ಜಿ.ಎನ್.ಬಸವರಾಜು, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಾರಿಯಾಗಿದ್ದೇನೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

# ಪ್ರಸ್ತಾವನೆ

**"ನಾಡಗೀತೆ**"ಯ (State Anthem) ಬಗ್ಗೆ ಒಂದು ಸಂಕ್ಷಿಪ್ತ ವಿವರಣಾತ್ಮಕವಾದ ಲೇಖನವನ್ನು ಬರೆಯುವ ಆಲೋಚನೆ ಹೊಳೆದದ್ದು ಹೀಗೆ. ಕೆಲವು ವಾರಗಳ ಹಿಂದೆ ಅದರ ಬಗ್ಗೆ ಯೋಚಿಸುತ್ತಿರುವಾಗ ಅದರಲ್ಲಿ ಬಂದಿರುವ ಕವಿಗಳು, ಋಷಿಗಳು, ಸಾಧಕವರೇಣ್ಯರ ಪರಿಚಯವು ಎಲ್ಲರಿಗೂ ಇರಲಿ, ನನಗೇ ಕಪಿಲ, ಪತಂಜಲಿ, ಗೌತಮರ ಹೆಸರುಗಳನ್ನು ನಾನು ಓದಿದ್ದರೂ ಅವರ ಕೊಡುಗೆ ಏನು ಎಂಬುದು ಗೊತ್ತಿರಲಿಲ್ಲ. ಎಷ್ಟೋ ಜನ ವಿದ್ಯಾವಂತರು ಪಂಪ, ರನ್ನ, ಮಧ್ವರ ಹೆಸರುಗಳನ್ನು ಓದಿದ್ದರೂ ಅವರು ಯಾವ ಕಾಲದವರು ಅವರು ಏನು ಬರೆದಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಅರಿಯರು. ಆಗ ನನಗೆ ಕನ್ನಡಿಗರ ಅಭಿಮಾನವನ್ನು ಹೆಚ್ಚಿಸುವಂತಹ ಕುವೆಂಪು ಅವರ (೧೯೦೪-೯೪) "ನಾಡಗೀತೆ" ಬಗ್ಗೆ ಒಂದು ವಿಸ್ತೃತ ಲೇಖನ ಬರೆಯುವ ಯೋಚನೆ ಬಂದಿತು. ಬೇರೆ ಬೇರೆ ವಿಷಯಗಳ ಬಗ್ಗೆ ಟಿಪ್ಪಣಿ ಮಾಡಿಕೊಳ್ಳುತ್ತಾ ಹೋದಂತೆ, ಅದೊಂದು ಪುಸ್ತಿಕೆಯಾಗುವಷ್ಟು ಬೆಳೆಯುತ್ತದೆ ಎಂಬ ಭಾವನೆ ಬಂದಿತು. ಒಂದೊಂದು ಸಾಲಿಗೂ ಪದ್ಯಖಂಡಕ್ಕೂ ಪದಶಃ ಅರ್ಥ ಬರೆಯುವ ಅಗತ್ಯವಿಲ್ಲವಾದರೂ, "ರಸ ಋಷಿ", "ಗೇಹ"ದಂತಹ ಸ್ವಲ್ಪ ಅಪರಿಚಿತ ಪದಗಳ ಅರ್ಥವನ್ನು ತಿಳಿಸಬೇಕಾಗಿತ್ತು. "ಜಯಭಾರತ ಜನನಿಯ ತನುಜಾತೆ" ಗೀತವು ಬರೀ ಸಂತೋಷವನ್ನು ಕೊಡುವ ರಚನೆ ಅಲ್ಲ: ನಾಡ ಬಗ್ಗೆ ಒಂದು ಅರಿವನ್ನು ಪ್ರೀತಿ ಅಭಿಮಾನಗಳನ್ನು ಮೂಡಿಸುವುದು ಅದರ ಗುರಿ. ಕನ್ನಡಿಗರಲ್ಲಿ ಒಂದು ಸ್ಫೂರ್ತಿಯನ್ನು ಮೂಡಿಸುವುದು ಅದರ ಧ್ಯೇಯ. ಅಲ್ಲಿರುವ ಹಲವು ವಿಷಯಗಳು ಸ್ಪಷ್ಟವಾದಾಗ ಆ ಸ್ಫೂರ್ತಿ ಇನ್ನೂ ಹೆಚ್ಚು ಅರ್ಥಪೂರ್ಣವೂ ಕ್ರಿಯಾತ್ಮಕವೂ ಆಗುತ್ತದೆ.

ಇಲ್ಲಿಯ ವಿಶ್ಲೇಷಣೆಯು "ನಾಡಗೀತೆ"ಗೆ ಪರ್ಯಾಯ ಅಲ್ಲ. ಅದರಲ್ಲಿನ ಹಲವು ವಿಷಯಗಳನ್ನು ತಿಳಿಯದಿದ್ದರೂ ಅದರ ಮೂಲ ಆಶಯ ಕೇಳುಗರ ಮನಸ್ಸನ್ನು ಮುಟ್ಟುತ್ತದೆ. ಈ ವಿಶ್ಲೇಷಣೆ ಓದಿದ ಮೇಲೂ, ಮತ್ತೆ ಆ ಕವನವನ್ನೇ ಓದಬೇಕು ಅಥವಾ ಹಾಡಬೇಕು ಅಥವಾ ಕೇಳಬೇಕು. "ನಾಡಗೀತೆ"ಗೆ ಪರ್ಯಾಯವೆಂದರೆ ಆ "ನಾಡಗೀತೆ"ಯೇ.

ಆಂಧ್ರಪ್ರದೇಶವು "ರಾಷ್ಟ್ರಗೀತಮು" ಆಗಿ (State Anthem) ಶಂಕರಂಬಾಡಿ ಸುಂದರಾಚಾರಿಯವರ "ಮಾ ತೆಲುಗು ತಲ್ಲಿಕಿ ಮಲ್ಲೆಪೂ ದಂಡ" (=ನನ್ನ ತೆಲುಗು ತಾಯಿಗೆ ಮಲ್ಲಿಗೆ ಹೂವಿನ ಹಾರ)-ಎಂಬುದನ್ನು ಆಯ್ಕೆ ಮಾಡಿದೆ. ತಮಿಳುನಾಡು ಮನೋನ್ಮಣಿಯನ್ ಪಿ.ಸುಂದರಂ ಪಿಳ್ಳೆಯವರ "ತಮಿಳ್ ತಾಯ್ ವಾಳ್ತು" (ತಮಿಳು ತಾಯಿಗೆ ಶುಭಾಶಯ) ಕವನಕ್ಕೂ ಅದೇ ಸ್ಥಾನವನ್ನು ನೀಡಿದೆ.

ಈ ಕಿರುಕೃತಿ ರಚನೆಗೆ ಕೆಳಕಂಡ ಕೃತಿಗಳಿಂದ ಸಹಾಯ ಆಗಿರುವುದನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ- Manorama Year Book, 2009; Swami Harshanandaji: A Concise

Encyclopaedia of Hinduisam, Vol. I, II and III; ಮೈಸೂರು ವಿಶ್ವವಿದ್ಯಾಲಯದ ಕರ್ನಾಟಕ ವಿಷಯ ವಿಶ್ವಕೋಶ; ಬೆನಗಲ್ ರಾಮರಾವ್ ಮತ್ತು ಪಾನ್ಯಂ ಸುಂದರ ಶಾಸ್ತ್ರಿ; ಪುರಾಣನಾಮ ಚೂಡಾಮಣಿ; ಯಜ್ಞನಾರಾಯಣ ಉಡುಪ: ಪುರಾಣ ಭಾರತ ಕೋಶ -ಇತ್ಯಾದಿ. ಒಂದಿಬ್ಬರು ಗೆಳೆಯರು ನನಗೆ ದೂರವಾಣಿ ಮೂಲಕ ಬೇಕಾದ ಮಾಹಿತಿ ತಿಳಿಸಿ ಸಹಾಯ ಮಾಡಿದ್ದಾರೆ.

ಈ ಪುಸ್ತಿಕೆಯನ್ನು ಪ್ರಕಟಿಸಿರುವ ಕನ್ನಡ ಪುಸ್ತಕ ಪ್ರಾಧಿಕಾರಕ್ಕೂ ಅದರ ಅಧ್ಯಕ್ಷರಾದ ಡಾ. ಸಿದ್ದಲಿಂಗಯ್ಯನವರಿಗೂ, ಆಡಳಿತಾಧಿಕಾರಿಗಳಾದ ಶ್ರೀ ಅಶೋಕ್ ಚಲವಾದಿ ಅವರಿಗೂ ಸುಂದರವಾಗಿ ಅಚ್ಚು ಮಾಡಿರುವ ಸತ್ಯಶ್ರೀ ಮುದ್ರಣಾಲಯಕ್ಕೂ ನಾನು ಕೃತಜ್ಞನಾಗಿದ್ದೇನೆ. ಇದು ಆದಷ್ಟು ಜನರ ಕೈ ಮೂಲಕ ಮನದ ಮನೆಯನ್ನು ಪ್ರವೇಶಿಸಲಿ ಎಂಬುದು ನನ್ನ ಬಯಕೆಯಾಗಿದೆ.

೧೭.೦೨.೨೦೧೦ - ಡಾ. ಎಂ. ಚಿದಾನಂದ ಮೂರ್ತಿ

(೦೮೦-೨೩೩೦೦೬೮೭)

* * * *

# ವಿಷಯಾನುಕ್ರಮಣಿಕೆ


“ಜಯ ಹೇ ಕರ್ನಾಟಕ ಮಾತೆ” ............................................ ೧-೨

“ರಾಷ್ಟ್ರಗೀತೆ” ........................................................................ ೩-೪

“ರಾಷ್ಟ್ರಗಾಥೆ”........................................................................ ೪-೫

“ಭಾರತ” ........................................................................... ೫-೬

“ಕರ್ನಾಟಕ ನಾಡಗೀತೆ”...................................................... ೬-೭

ಪಲ್ಲವಿ ........................................................................... ೭-೮

“ಭೂದೇವಿಯ ಮಕುಟದ...” ............................................ ೯-೧೧

“ಜನನಿಯ ಜೋಗುಳ ವೇದದ..” ..................................... ೧೧-೧೫

“ಶಂಕರ ರಾಮಾನುಜ ವಿದ್ಯಾರಣ್ಯ...” .............................. ೧೬-೨೮

“ತೈಲಪ ಹೊಯ್ಸಳರಾಳಿದ...” ......................................... ೨೮-೩೭

“ಸರ್ವ ಜನಾಂಗದ ಶಾಂತಿಯ...” .................................. ೩೭-೪೧

ಸರ್ಕಾರಕ್ಕೆ ಒಂದು ಸಲಹೆ ........................................... ೪೧

ಕರ್ನಾಟಕ ಸರ್ಕಾರದ ನಡವಳಿಕೆಗಳು ............................. ೪೨-೪೪

(೧೭.೦೧.೨೦೦೪)

ಕರ್ನಾಟಕ ಸರ್ಕಾರದ ನಡವಳಿಕೆಗಳು .................................. ೪೨-೪೪

(೨೩.೦೨.೨೦೦೪)


* * * *

# ಜಯ ಹೇ ಕರ್ನಾಟಕ ಮಾತೆ

- ಕುವೆಂಪು

ಜೈ ಭಾರತ ಜನನಿಯ ತನುಜಾತೆ |

ಜಯ ಹೇ ಕರ್ನಾಟಕ ಮಾತೆ!

ಜೈ ಸುಂದರ ನದಿವನಗಳ ನಾಡೆ

ಜಯ ಹೇ ರಸಋಷಿಗಳ ಬೀಡೆ !

ಭೂದೇವಿಯ ಮಕುಟದ ನವಮಣಿಯೆ

ಗಂಧದ ಚಂದದ ಹೊನ್ನಿನ ಗಣಿಯೆ;

ರಾಘವ ಮಧುಸೂಧನರವತರಿಸಿದ

ಭಾರತ ಜನನಿಯ ತನುಜಾತೆ,

ಜಯ ಹೇ ಕರ್ನಾಟಕ ಮಾತೆ !

ಜನನಿಯ ಜೋಗುಳ ವೇದದ ಘೋಷ

ಜನನಿಗೆ ಜೀವವು ನಿನ್ನಾವೇಶ

ಹಸುರಿನ ಗಿರಿಗಳ ಸಾಲೆ

ನಿನ್ನಯ ಕೊರಳಿನ ಮಾಲೆ;

ಕಪಿಲ ಪತಂಜಲ ಗೌತಮ ಜಿನನುತ

ಭಾರತ ಜನನಿಯ ತನುಜಾತೆ,

ಜಯ ಹೇ ಕರ್ನಾಟಕ ಮಾತೆ!

ಶಂಕರ ರಾಮಾನುಜ ವಿದ್ಯಾರಣ್ಯ,

ಬಸವೇಶ್ವರ ಮಧ್ವರ ದಿವ್ಯಾರಣ್ಯ,

ರನ್ನ ಷಡಕ್ಷರಿ ಪೊನ್ನ

ಪಂಪ ಲಕುಮಿಪತಿ ಜನ್ನ

ಕಬ್ಬಿಗರುದಿಸಿದ ಮಂಗಳಧಾಮ

ಕವಿಕೋಗಿಲೆಗಳ ಪುಣ್ಯಾರಾಮ!

ನಾನಕ ರಾಮಾನಂದ ಕಬೀರರ

ಭಾರತ ಜನನಿಯ ತನುಜಾತೆ,

ಜಯ ಹೇ ಕರ್ನಾಟಕ ಮಾತೆ!

ತೈಲಪ ಹೊಯ್ಸಳರಾಳಿದ ನಾಡೆ.

ಡಂಕಣ ಜಕಣರ ನೆಚ್ಚಿನ ಬೀಡೆ;

ಕೃಷ್ಣ ಶರಾವತಿ ತುಂಗಾ

ಕಾವೇರಿಯ ವರರಂಗ!

ಚೈತನ್ಯ ಪರಮಹಂಸ ವಿವೇಕರ

ಭಾರತ ಜನನಿಯ ತನುಜಾತೆ,

ಜಯ ಹೇ ಕರ್ನಾಟಕ ಮಾತೆ!

ಸರ್ವಜನಾಂಗದ ಶಾಂತಿಯ ತೋಟ,

ರಸಿಕರ ಕಂಗಳ ಸೆಳೆಯುವ ನೋಟ

ಹಿಂದೂ ಕ್ರೈಸ್ತ ಮುಸಲ್ಮಾನ

ಪಾರಸಿಕ ಜೈನರುದ್ಯಾನ

ಜನಕನ ಹೋಲುವ ದೊರೆಗಳ ಧಾಮ,

ಗಾಯಕ ವೈಣಿಕರಾರಾಮ!

ಕನ್ನಡ ನುಡಿ ಕುಣಿದಾಡುವ ಗೇಹ!

ಕನ್ನಡ ತಾಯಿಯ ಮಕ್ಕಳ ದೇಹ!

ಜೈ! ಭಾರತ ಜನನಿಯ ತನುಜಾತೆ,

ಜಯ ಹೇ ಕರ್ನಾಟಕ ಮಾತೆ!

ಜೈ! ಸುಂದರ ನದಿವನಗಳ ನಾಡೆ,

ಜಯ ಹೇ ರಸಋಷಿಗಳ ಬೀಡೆ

* * * *

## ಕರ್ನಾಟಕ "ನಾಡಗೀತೆ" : ಒಂದು ವಿಶ್ಲೇಷಣೆ

ಭಾರತಕ್ಕೆ ಸ್ವಾತಂತ್ರ್ಯ ಬಂದ (೧೫.೦೮.೧೯೪೭) ಬಳಿಕ ಅಧಿಕೃತವಾಗಿ ರವೀಂದ್ರನಾಥ ಠಾಕೂರರ "ಜನಗಣ ಮನ ಅಧಿನಾಯಕ......" ಕವನವನ್ನು "ರಾಷ್ಟ್ರಗೀತೆ" (National Anthem) ಎಂದು, ಬಂಕಿಂಚಂದ್ರ ಚಟರ್ಜಿಯವರ "ವಂದೇ ಮಾತರಂ" ಕವನವನ್ನು "ರಾಷ್ಟ್ರಗಾಥೆ" (National Song) ಎಂದು ಒಮ್ಮತದಿಂದ ತೀರ್ಮಾನಿಸಿ ಸಂವಿಧಾನದಲ್ಲಿ ಎರಡಕ್ಕೂ ಸಮಾನವಾದ ಗೌರವಸ್ಥಾನ ನೀಡಲಾಯ್ತು. ಠಾಕೂರರ ಕವನದ ಐದು ಪದ್ಯಖಂಡಗಳಲ್ಲಿ ಮೊದಲನೆಯದನ್ನು, ಬಂಕಿಮರ ಕವನದ ಐದು ಪದ್ಯಖಂಡಗಳಲ್ಲಿ ಮೊದಲನೆಯದನ್ನು ಮಾತ್ರ ರಾಷ್ಟ್ರಗೀತೆ, ರಾಷಗಾಥೆ ಎಂದು ಗುರುತಿಸಲಾಗಿದೆ. ಒಂದನ್ನು ಹಾಡಲು ೫೮ ಸೆಕೆಂಡುಗಳು, ಇನ್ನೊಂದನ್ನು ಹಾಡಲು ೪೦ ಸೆಕೆಂಡುಗಳು ಬೇಕಾಗುತ್ತವೆ. ರಾಷ್ಟ್ರಗೀತೆ, ರಾಷ್ಟಗಾಥೆಗಳ ಪಾಠವನ್ನು ಅವುಗಳ ಅನುವಾದವನ್ನು ಕೆಳಗೆ ಕೊಡಲಾಗಿದೆ:

### "ರಾಷ್ಟ್ರಗೀತೆ"

ಜನಗಣಮನ ಅಧಿನಾಯಕ ಜಯ ಹೇ

ಭಾರತ ಭಾಗ್ಯವಿಧಾತ

ಪಂಜಾಬ ಸಿಂಧು ಗುಜರಾತ ಮರಾಠ

ದ್ರಾವಿಡ ಉತ್ಕಲ ಬಂಗ

ವಿಂಧ್ಯ ಹಿಮಾಚಲ ಯಮುನಾ ಗಂಗಾ

ಉಚ್ಚಲ ಜಲಧಿ ತರಂಗ

ತವ ಶುಭ ನಾಮೇ ಜಾಗೇ

ತವ ಶುಭ ಆಶಿಷ ಮಾಗೇ

ಗಾಹೇ ತವಶುಭಗಾಥಾ

ಜನಗಣ ಮಂಗಲದಾಯಕ ಜಯ ಹೇ

ಭಾರತ ಭಾಗ್ಯವಿಧಾತ

ಜಯ ಹೇ ಜಯ ಹೇ ಜಯ ಹೇ

ಜಯ ಜಯ ಜಯ ಜಯ ಹೇ ||

[ಭಾರತದ ಜನ ಸಮೂಹದ ಅಧಿನಾಯಕನೇ, ಭಾರತಕ್ಕೆ ಭಾಗ್ಯವನ್ನು ದಯಪಾಲಿಸುವವನೇ ನಿನಗೆ ಜಯವಾಗಲಿ. ನಿನ್ನ ಹೆಸರು ಪಂಜಾಬ್, ಸಿಂಧು, ಗುಜರಾತು, ಮಹಾರಾಷ್ಟ್ರ, ದ್ರಾವಿಡ, ಉತ್ಕಲಗಳ ಹೃದಯವನ್ನು ಬಡಿದೆಬ್ಬಿಸುತ್ತದೆ. ಅದು- ಆ ಹೆಸರಿನ ಘೋಷ- ವಿಂಧ್ಯ ಹಿಮಾಲಯ ಪರ್ವತಗಳಲ್ಲಿ ಅನುರಣಿಸಿ ಯಮುನಾ ಗಂಗಾ ನದಿಗಳ ಸಂಗೀತದಲ್ಲಿ ಮಿಶ್ರಗೊಳ್ಳುತ್ತದೆ; ಸಮುದ್ರದ ದೊಡ್ಡ ತೆರೆಗಳಿಂದ ಅದು ಹಾಡಲ್ಪಡುತ್ತದೆ. ಅವು ನಿನ್ನ ಆಶೀರ್ವಾದಕ್ಕಾಗಿ ಪ್ರಾರ್ಥಿಸುತ್ತ ನಿನ್ನ ಕೀರ್ತಿಯನ್ನು ಹಾಡುತ್ತವೆ. ಭಾರತಕ್ಕೆ ಮಂಗಲವನ್ನು ದಯಪಾಲಿಸುವವನೇ, ಜನರನ್ನು ರಕ್ಷಿಸುವುದು ನಿನ್ನ ಕೈಯಲ್ಲಿದೆ. ಓ ಭಾರತ ಭಾಗ್ಯವಿಧಾತನೇ, ನಿನಗೆ ಜಯವಾಗಲಿ, ಜಯವಾಗಲಿ, ಜಯವಾಗಲಿ.]

## “ರಾಷ್ಟ್ರಗಾಥೆ”

ವಂದೇ ಮಾತರಂ,

ಸುಜಲಾಂ ಸುಫಲಾಂ ಮಲಯಜ ಶೀತಲಾಂ

ಸಸ್ಯಶಾಮಲಾಂ ಮಾತರಂ ||

ಶುಭ್ರ ಜ್ಯೋತ್ಸ್ನಾ ಪುಲಕಿತ ಯಾಮಿನೀಂ

ಫುಲ್ಲ ಕುಸುಮಿತ ದ್ರುಮದಲ ಶೋಭಿನೀಂ

ಸುಹಾಸಿನೀಂ ಸುಮಧುರ ಭಾಷಿಣೀಂ

ಸುಖದಾಂ ವರದಾಂ ಮಾತರಂ

ವಂದೇ ಮಾತರಂ ||

[ಓ ಮಾತೆಯೇ, ನಿನಗೆ ವಂದಿಸುತ್ತೇನೆ. ಜಲ ಸಂಪತ್ತಿನವಳು, ಫಲಭರಿತಳು, ಮಲಯ ಪರ್ವತದ ಗಾಳಿಯಿಂದ ತಂಪಾಗಿರುವವಳು, ಗಿಡಗಳಿಂದ ಹಸಿರಾಗಿರುವವಳು ನೀನು. ಓ ಮಾತೆಯೇ ನಿನಗೆ ವಂದಿಸುತ್ತೇನೆ. ಅವಳ ರಾತ್ರಿಗಳು ಶುಭ್ರವಾದ ಬೆಳದಿಂಗಳಿಂದ ನಲಿಯುತ್ತಿವೆ; ಅವಳ ಭೂಮಿ ಸಮೃದ್ಧ ಹೂಗಳಿಂದ ತುಂಬಿ ತುಳುಕುವ ಮರಗಳಿಂದ ಶೋಭಿಸುತ್ತಿದೆ; ಅವಳ ನಗು ಪ್ರಿಯ, ಅವಳ ಮಾತು ಅತಿ ಮಧುರ -ಸುಖ ಸಂತೋಷ ನೀಡುವವಳು, ವರವನ್ನು ನೀಡುವವಳು -ಅಂತಹ ಮಾತೆಗೆ ನಾನು ವಂದಿಸುತ್ತೇನೆ.]

[ಮೇಲಿನ ಮಾಹಿತಿಗೆ ಆಕರ: Manorama Year Book : 2009]

[ಟಿಪ್ಪಣಿ : "National Anthem" ಎಂಬುದಕ್ಕೆ ಹಿಂದಿಯಲ್ಲಿ "ರಾಷ್ಟ್ರಗೀತ್" ಎಂದೇ ಕರೆದಿದೆ. ತೆಲುಗಲ್ಲಿ ಅದೇ "ಜಾತೀಯ ಗೀತಂ" ಅಥವಾ "ಜಾತೀಯ ಗೀತಮು" ಆಗಿದೆ. "National Song" ಎಂಬುದಕ್ಕೆ ಬೇರೆ ಬೇರೆ ಭಾಷೆಗಳಲ್ಲಿ ಯಾವ ಪದಗಳಿವೆಯೋ ತಿಳಿಯದು. "ರಾಷ್ಟ್ರಗಾಥೆ" ಎಂಬುದು ನಾನು ಹೊಸದಾಗಿ ಟಂಕಿಸಿರುವ ಪದ.]

ಸ್ವಾತಂತ್ರ್ಯಕ್ಕೆ ಮುನ್ನ ಭಾರತೀಯರಲ್ಲಿ ದೇಶ ಪ್ರೇಮದ ಕಿಚ್ಚನ್ನು ಹಚ್ಚಿ ಅವರನ್ನು ಹೋರಾಟಕ್ಕೆ ಹುರಿದುಂಬಿಸಿದ ಘೋಷವೆಂದರೆ "ವಂದೇ ಮಾತರಂ." ನಾವು ಪ್ರೌಢಶಾಲಾ ವಿದ್ಯಾರ್ಥಿಗಳಾಗಿದ್ದಾಗ (೧೯೪೫-೪೭) "ಜನಗಣಮನ" ಹಾಡನ್ನು ಕೇಳಿಯೇ ಇರಲಿಲ್ಲ: "ವಂದೇ ಮಾತರಂ" ಘೋಷ ದಾವಣಗೆರೆ ನಗರದ ಬೀದಿ ಬೀದಿಗಳಲ್ಲಿ ಅನುರಣಿತವಾಗುತ್ತಿದ್ದುದು ಮಾತ್ರವಲ್ಲ, ಅನಕ್ಷರಸ್ಥ ಹಳ್ಳಿಜನರ ಬಾಯಲ್ಲೂ ಅದು ಕೇಳಿ ಬರುತ್ತಿತ್ತು. ಹಳ್ಳಿಗಳ ಗೋಡೆಗಳ ಮೇಲೆ ಅಕ್ಷರಸ್ಥರು "ವಂದೇ ಮಾತರಂ" ಎಂದು ಬರೆದರೆ, ಬ್ರಿಟಿಷರ ಪರವಾಗಿದ್ದ ಕೆಲವರು ಅದನ್ನು ಅಳಿಸಿ ಹಾಕುತ್ತಿದ್ದರು. ಆದರೆ ಬಹುತೇಕ ಜನರ ಹೃದಯದಲ್ಲಿ ಅಚ್ಚೊತ್ತಿದ್ದ ಆ ಘೋಷಣೆಯ ಪದಗಳನ್ನು ಯಾರಿಂದಲೂ ಅಳಿಸಲಾಗುತ್ತಿರಲಿಲ್ಲ.

## ಭಾರತ

"Bharat, that is India" ಎಂದು ಸಂವಿಧಾನವು ಎರಡು ಹೆಸರುಗಳಿಂದ ಭಾರತವನ್ನು ನಾಮಕರಣ ಮಾಡಿ ಒಂದು ಅಪಚಾರವನ್ನು ಎಸಗಿದೆ. ಆ ಎರಡು ಹೆಸರುಗಳಲ್ಲಿ "ಇಂಡಿಯಾ" ಎಂಬುದೇ ವಿದೇಶಗಳಲ್ಲಿ ಮಾತ್ರವಲ್ಲ, ಭಾರತದಲ್ಲೇ ಹೆಚ್ಚು ಪ್ರಚಾರದಲ್ಲಿದೆ. ಪಾಠಗಳಲ್ಲಿ ನಕ್ಷೆಗಳಲ್ಲಿ "ಇಂಡಿಯಾ" ಎಂದೇ ಅಚ್ಚಾಗಿರುತ್ತದೆ. ವಿದ್ಯಾರ್ಥಿಗಳಿಗಂತೂ ಆ ಹೆಸರೇ ಚೆನ್ನಾಗಿ ಗೊತ್ತಿರುವುದು; "ಭಾರತ"ವನ್ನು ಅವರು ಬಳಸುವುದು ಅಪೂರ್ವ. ಇಂಗ್ಲಿಷ್‌ನಲ್ಲಂತೂ "ಭಾರತ" ಪದ ಬಳಕೆ ಆಗುವುದಿಲ್ಲ. ಉದಾ : "State Bank of India", "Indian Bank". "Indian Railways", "I am an Indian" ಇತ್ಯಾದಿ ಕೆಲವು ಉದಾಹರಣೆಗಳು. ಗಮನಿಸಬೇಕಾದ, ಆದರೆ ಬಹುತೇಕ ಯಾರೂ ಗಮನಿಸಿರದ ಒಂದು ಮುಖ್ಯ ಸಂಗತಿಯೆಂದರೆ "ಇಂಡಿಯ" ಹೆಸರಲ್ಲಿ ಯಾವುದೋ ವಿದೇಶೀ ವಾಸನೆ ಇದೆ. ಆದರೆ ನಮ್ಮ ಸಂಸ್ಕೃತಿಯ ಅರ್ಥಛಾಯೆ ಹೊಂದಿರುವ ಪದವೆಂದರೆ ಭಾರತ. ನಮ್ಮ ರಾಷ್ಟ್ರಕ್ಕೆ ಒಂದು ದೊಡ್ಡ ಇತಿಹಾಸವಿದೆ; ನಮ್ಮ ಶ್ರೇಷ್ಠ ಸಾಂಸ್ಕೃತಿಕ ಪರಂಪರೆಯನ್ನು ಧ್ವನಿಸುವ ಪದವೆಂದರೆ "ಭಾರತ" (ಋಷಭದೇವ, ಜಯಂತಿಯರ ಹಿರಿಯ ಮಗ ಭರತ- ಇವನು ಹಿಮಾಲಯದಿಂದ ಕನ್ಯಾಕುಮಾರಿಯವರೆಗಿನ ಭೂಪ್ರದೇಶವನ್ನು ಆಳಿದ್ದರಿಂದ "ಭರತ ವರ್ಷ" ಅಥವಾ ಭಾರತ ಎಂಬ ಹೆಸರು ಬಂದಿದೆ.) ವಾಕ್ಯಾರ್ಥದ ದೃಷ್ಟಿಯಿಂದ ನೋಡಿದಾಗ, "I am an Indian", "ನಾನೊಬ್ಬ ಭಾರತೀಯ", ಎಂಬ ಉಕ್ತಿಗಳು ಒಂದೇ ಎಂಬಂತೆ ಕಂಡರೂ, ಅರ್ಥ ಶ್ರೀಮಂತಿಕೆಯ ದೃಷ್ಟಿಯಿಂದ "ನಾನೊಬ್ಬ ಭಾರತೀಯ" ಅಥವಾ "I am a Bharatiya" ಎಂಬುದು ಹೆಚ್ಚು ಪುಷ್ಟವಾದುದು: ನಮ್ಮ ದೇಶ ಅಥವಾ ರಾಷ್ಟ್ರದ ಮೂಲ ಸೊಗಡನ್ನು ತುಂಬಿಕೊಂಡಿರುವಂತಹುದು. ಈ ಹಿನ್ನೆಲೆಯಲ್ಲಿ "India that is Bharat" ಎಂಬುದನ್ನು ತೆಗೆದುಹಾಕಿ, ನಮ್ಮ ರಾಷ್ಟ್ರದ ಹೆಸರನ್ನು "ಭಾರತ" ("Bharata") ಎಂದು ಸಂವಿಧಾನವು ತಿದ್ದುಪಡಿಗೊಳ್ಳಬೇಕು. ಆಗ ಇಂಗ್ಲೀಷಿನಲ್ಲಿ State Bank of Bharat (Bharata) ಎಂದೇ ವ್ಯವಹರಿಸಬೇಕು. ಈಗಲೇನೋ ಭಾರತೀಯ ಸ್ಟೇಟ್ ಬ್ಯಾಂಕ್ ಎಂದು ಕನ್ನಡದಲ್ಲಿ ಹೇಳಿದರೂ ಅದು ಬರೀ ನಾಮಫಲಕಗಳಿಗೆ ಸೀಮಿತವಾಗಿದೆಯೇ ಹೊರತು ಬಳಕೆಯಲ್ಲಿಲ್ಲ.

## ಕರ್ನಾಟಕ : "ನಾಡಗೀತೆ"

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಇಪ್ಪತ್ತು ಆಡಳಿತಗಳಲ್ಲಿ ಹರಿದು ಹಂಚಾಗಿ ಹೋಗಿದ್ದ ಕರ್ನಾಟಕವು ೧೯೪೭ರಲ್ಲಿ ಐದು ಆಡಳಿತಗಳಲ್ಲಿ ವಿಭಾಗಗೊಂಡಿತ್ತು (ಮದ್ರಾಸ್, ಮುಂಬೈ, ಕೊಡಗು, ಮೈಸೂರು, ಹೈದರಾಬಾದ್). ಫಜಲ್ ಆಲಿ ನೇತೃತ್ವದ ರಾಜ್ಯ ಪುನರ್ವಿಂಗಡಣಾ ಆಯೋಗದ ಶಿಫಾರಸಿನನ್ವಯ ಕರ್ನಾಟಕವು ೧೯೫೬ ನವೆಂಬರ್‌ನಲ್ಲಿ "ಮೈಸೂರು ರಾಜ್ಯ" ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದು ೧೯೭೩ರಲ್ಲಿ

"ಕರ್ನಾಟಕ" ಎಂಬ ನಾಮಕರಣವನ್ನು ಪಡೆಯಿತು. ಹಿಂದೆ ಈ ನಾಡಿಗೆ "ಕನ್ನಡ ನಾಡು" ಎಂಬ ಹೆಸರಿದ್ದರೂ ("ನಾಡದಾ ಕನ್ನಡದೊಳ್" ಕವಿರಾಜಮಾರ್ಗ), ಅದು ಭಾಷೆಯ ಆಧಾರದ ಮೇಲೆ ಹುಟ್ಟಿಕೊಂಡ ಹೆಸರು. ಅಷ್ಟೇ ಮುಖ್ಯವಾಗಿ "ಕರ್ನಾಟಕ" ಎಂಬ ಹೆಸರೂ ಪ್ರಚಲಿತವಾಗಿದ್ದಿತು (ಇದು ಸಂಸ್ಕೃತ ಮಹಾಭಾರತದಲ್ಲೇ ಪ್ರಯೋಗವಾಗಿದೆ). ಮತ್ತು ಅದು ಬಹು ಉಚಿತವೂ ಆದ ಹೆಸರು. ಕನ್ನಡ ನಾಡು ಎಂಬ ಹೆಸರೂ ಅಷ್ಟೇ- ಆದರೆ ಸಂವಿಧಾನವು ನಮ್ಮ ನಾಡನ್ನು "ಕರ್ನಾಟಕ" ಎಂದು ಗುರುತಿಸಿದೆ. (ಭಾರತ ರಾಷ್ಟ್ರದಂತೆಯೇ ಕನ್ನಡನಾಡೂ ಹಲವು ಕನ್ನಡ ಪ್ರದೇಶಗಳನ್ನು ಕಳೆದುಕೊಂಡಿರುವುದು ಒಂದು ನೋವಿನ ಸಂಗತಿ.)

ರಾಷ್ಟ್ರಕವಿ ಕುವೆಂಪು ಅವರು (ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ.) ಹಿಂದೆಯೇ ಬರೆದ "ಜಯ ಹೇ ಕರ್ನಾಟಕ ಮಾತೆ" ಕವನವು ಪ್ರಕಟವಾದ ಆರಂಭದಿಂದ (೧೯೩೦) ಮುಂದೆ ಅವರ ಕೈಯಲ್ಲಿ ಹಲವು ಸಣ್ಣ ಪುಟ್ಟ ಮಾರ್ಪಾಟುಗಳನ್ನು ಪಡೆಯಿತು. ಅವರಿಂದ ಅಂತಿಮವಾಗಿ ಪರಿಷ್ಕೃತಗೊಂಡ ಕವನವನ್ನು ಕರ್ನಾಟಕ ಸರ್ಕಾರವು ೧೩.೦೨.೨೦೦೪ ರಂದು ಅದನ್ನು "ನಾಡಗೀತೆ"ಯಾಗಿ ಗುರುತಿಸಿ ಘೋಷಿಸಲಾಯ್ತು. ಆ "ನಾಡಗೀತೆ"ಯು ಸರಳ, ಆದರೆ ಅರ್ಥಪೂರ್ಣ. ಭಾರತದ ಪರಂಪರೆಯ ಹಿನ್ನೆಲೆಯಲ್ಲಿ ಕರ್ನಾಟಕದ ಸಾಹಿತ್ಯಕ, ಐತಿಹಾಸಿಕ, ಸಾಂಸ್ಕೃತಿಕ ಸಂಪತ್ತನ್ನು ಬಹು ಸೂಕ್ಷ್ಮವಾಗಿ ಹಿಡಿದಿಟ್ಟಿದೆ. ಅದರ ನಿಜವಾದ ಅರ್ಥವನ್ನು ಗ್ರಹಿಸಿದರೆ ಕರ್ನಾಟಕದ ಮೇಲ್ಮೈ ಪ್ರಕೃತಿ ಸಂಪತ್ತು, ಖನಿಜ ಸಂಪತ್ತು, ಸಾಂಸ್ಕೃತಿಕ ಸಂಪತ್ತುಗಳ ಸಮಗ್ರ ಅನುಭವವಾಗುತ್ತದೆ. "ಜನಗಣಮನ", "ವಂದೇ ಮಾತರಂ" ರಾಷ್ಟ್ರಗೀತೆಗಳು ನಮ್ಮಲ್ಲಿನ ರಾಷ್ಟ್ರಪ್ರೇಮವನ್ನು ಎಚ್ಚರಿಸಿ ನಮ್ಮಲ್ಲಿ ಸ್ಫೂರ್ತಿಯನ್ನು ತುಂಬಿದರೆ, "ಜಯ ಹೇ ಕರ್ನಾಟಕ ಮಾತೆ" ನಾಡಗೀತೆಯು ನಮ್ಮಲ್ಲಿನ ರಾಷ್ಟ್ರಪ್ರೇಮ- ನಾಡ ಪ್ರೇಮ ಮತ್ತು ಅಭಿಮಾನವನ್ನು ಉದ್ದೀಪನಗೊಳಿಸುತ್ತದೆ. ರಾಷ್ಟ್ರಗೀತೆ, ನಾಡಗೀತೆಗಳು ನಮ್ಮ ರಾಷ್ಟ್ರದ ನಾಡಿನ ಸಂಕೇತಗಳು. ಅವುಗಳನ್ನು ಹಾಡುವಾಗ ಎದ್ದು ನಿಂತು ಗೌರವಿಸುವುದು ನಮ್ಮ ರಾಷ್ಟ್ರಕ್ಕೆ, ನಾಡಿಗೆ ತೋರುವ ಭಕ್ತಿಯ ಸಂಕೇತ.

ಅಂತಹ ನಾಡಗೀತೆಯನ್ನು ಎಲ್ಲರೂ ಬಲ್ಲರು; ಹಾಡುವಾಗ ಎಲ್ಲರೂ ನಿಂತು ಗೌರವಿಸುತ್ತಾರೆ. ಆ ನಾಡಗೀತೆಯಲ್ಲಿನ ಸಂಗತಿಗಳನ್ನು ತಿಳಿದಾಗ, ಕರ್ನಾಟಕದ ಬಗೆಗಿನ ನಮ್ಮ ಪ್ರೀತಿ, ಅಭಿಮಾನ ಇನ್ನೂ ವೃದ್ಧಿಯಾಗುತ್ತದೆ. ಈ ಪುಸ್ತಿಕೆಯ ಮುಖ್ಯ ಧ್ಯೇಯವಂತೂ ಅದೇ ಆಗಿದೆ. ಇದರಲ್ಲಿ ಪಲ್ಲವಿಯ ಜೊತೆ ಐದು ಪದ್ಯ ಖಂಡಗಳಿವೆ. ಒಂದೊಂದನ್ನೇ ಕ್ರಮವಾಗಿ ಪರಿಶೀಲಿಸೋಣ.

## ಪಲ್ಲವಿ

ಕರ್ನಾಟಕವು ಕನ್ನಡಿಗರ ತಾಯಿ; ಅಂತಹ ತಾಯಿಯ ತಾಯಿ ಭಾರತ. ಕರ್ನಾಟಕಕ್ಕೆ ಸ್ವತಂತ್ರ ಅಸ್ತಿತ್ವವಿದೆ. ಆದರೆ ಅದು ಭಾರತದ ಅವಿಭಾಜ್ಯ ಅಂಗ. ಭಾರತಕ್ಕೂ ಸ್ವತಂತ್ರ ಅಸ್ತಿತ್ವವಿದೆ. ಆದರೆ ಅದು

'ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಕಾಶ್ಮೀರ, ಬಂಗಾಳಗಳಂತಹ ಹಲವು ನಾಡುಗಳ ಒಕ್ಕೂಟ. ಎರಡೂ ನಮಗೆ ತಾಯಂದಿರೇ- ಎರಡೂ ಪೂಜ್ಯ ಪವಿತ್ರ, ಒಂದು ಸ್ಪಷ್ಟವಾಗಿ ಇನ್ನೊಂದನ್ನು ಅವಲಂಬಿಸಿದೆ. ಕವಿ ಕುವೆಂಪು ಕರ್ನಾಟಕವನ್ನು ಭಾರತ ರಾಷ್ಟ್ರದ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವೆಂದೇ ಗುರುತಿಸಿರುವುದು ಬಹು ಉಚಿತವಾಗಿದೆ. ಭಾರತವನ್ನು ಬಿಟ್ಟು ಕರ್ನಾಟಕ ಇಲ್ಲ. ಕರ್ನಾಟಕ ಬಿಟ್ಟು ಭಾರತವಿಲ್ಲ. ಎರಡಕ್ಕೂ ಜಯವಾಗಲಿ ಎಂದರೆ ಭಾರತೀಯರು, ಕನ್ನಡಿಗರು ಸುಖ ಸಂತೋಷದಿಂದ ಇರಲಿ, ಪ್ರಗತಿ ಹೊಂದಲಿ, ಎಲ್ಲೆಲ್ಲೂ ಜಾತಿಯ ಆರ್ಥಿಕತೆಯ ಅಸಮಾನತೆ ಅಳಿದು ತೃಪ್ತಿ ನೆಲಸಲಿ ಎಂದೇ ಅರ್ಥ. ರಾಷ್ಟ್ರ ಅಥವಾ ನಾಡು ಎಂದರೆ ಅಲ್ಲಿನ ಜನ ಸಂಪತ್ತು, ಜೀವಿ ಸಂಪತ್ತು, ಸಸ್ಯ ಸಂಪತ್ತು; ಎಲ್ಲವೂ ಬೆಳೆಯಲಿ, ಸಮೃದ್ಧವಾಗಲಿ ಎಂದು ಕವಿ ಎದೆತುಂಬಿ ಹಾರೈಸಿದ್ದಾರೆ.

ಕರ್ನಾಟಕದಲ್ಲಿ ಕಾಳಿ, ಶರಾವತಿ, ನೇತ್ರಾವತಿ, ಕೃಷ್ಣಾ, ತುಂಗಭದ್ರ, ಕಾವೇರಿ, ಘಟಪ್ರಭಾ, ಮಲಪ್ರಭಾ, ಕಪಿಲಾ, ವೇದಾವತಿ ಇವೇ ಮೊದಲಾದ ನದಿಗಳು ಹರಿಯುತ್ತವೆ. ೯೦೦ ಅಡಿಗಳ ಎತ್ತರದಿಂದ ನೀರು ಬೀಳುವ ಶರಾವತಿಯ ಜೋಗದ ಜಲಪಾತ, ೩೩೦ ಅಡಿ ಎತ್ತರದ ಕಾವೇರಿಯ ಶಿವನಸಮುದ್ರ, ೧೭೦ ಅಡಿಗಳ ಎತ್ತರದ ಘಟಪ್ರಭಾದ ಗೋಕಾಕ ಜಲಪಾತ ಇಂತಹ ರಮ್ಯ ಪ್ರೇಕ್ಷಣೀಯ ಸ್ಥಳಗಳು ಕರ್ನಾಟಕದಲ್ಲಿವೆ. ಪಶ್ಚಿಮ ಘಟ್ಟದ ಸುತ್ತಮುತ್ತ ದಟ್ಟವಾದ ಕಾಡು ಇದೆ. ಮೈಸೂರು ಜಿಲ್ಲೆಯ ಬಂಡೀಪುರ, ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ, ಬೆಂಗಳೂರು ಜಿಲ್ಲೆಯ ಬನ್ನೇರುಘಟ್ಟ ಇವೇ ಮೊದಲಾದ ಕಡೆ ವನ್ಯಮೃಗಗಳನ್ನು ಸಂರಕ್ಷಿಸುವ ಅಭಯಾರಣ್ಯಗಳಿವೆ. ಕರ್ನಾಟಕ ಬಹು ಸುಂದರ ನದಿ, ಕಾಡುಗಳು ಇರುವ ಪ್ರದೇಶ. ತುಂಗಭದ್ರಾ ಜಲಾಶಯ, ಕೃಷ್ಣರಾಜಸಾಗರ, ವಾಣಿವಿಲಾಸಸಾಗರ, ಹಾರಂಗಿ ಜಲಾಶಯ, ನಾರಾಯಣಪುರ ಜಲಾಶಯ ಇವೇ ಮೊದಲಾದ ಅಣೆಕಟ್ಟುಗಳಿಂದ ಬಿಡುವ ನೀರಿನಿಂದ ಲಕ್ಷಾಂತರ ಎಕರೆ ಪ್ರದೇಶ ನೀರಾವರಿಯಿಂದ ಕಂಗೊಳಿಸುತ್ತಿದೆ. ಅರಣ್ಯ ಸಂಪತ್ತು, ವನ್ಯಜೀವಿ ಸಂಪತ್ತು, ಜಲಸಂಪತ್ತುಗಳಿಂದ ಕಂಗೊಳಿಸುವ ನಾಡು ಕರ್ನಾಟಕ.

ಕುವೆಂಪು ಅವರ ಪ್ರಕಾರ ನಿರಂತರ ಆಧ್ಯಾತ್ಮಿಕ ಸಾಧನೆಮಾಡಿ ಸಿದ್ಧಿಯನ್ನು ಪಡೆದವರು ಋಷಿಗಳಾದರೆ ಸಾಹಿತ್ಯ ಕ್ಷೇತ್ರದಲ್ಲಿ ನಿರಂತರ ಸಾಧನೆ ಮಾಡಿ ಉನ್ನತ ಕಾವ್ಯಗಳನ್ನು ರಚಿಸಿದವರೂ ಇನ್ನೊಂದರ್ಥದಲ್ಲಿ ಋಷಿಗಳೇ; ಅವರು ರಸಋಷಿಗಳು. "ರಸ" ಎಂಬುದು ನಿಜವಾದ ಕಾವ್ಯಾನುಭವ; ಅದು ಮನುಷ್ಯನಿಗೆ 'ಸುಖವನ್ನು ಮಾತ್ರವಲ್ಲ, ಮುದವನ್ನು ಸಂತೋಷವನ್ನು ತೃಪ್ತಿಯನ್ನು ಇತ್ತು ಬದುಕಿನ ವಿವಿಧ ಮುಖಗಳ ಪರಿಚಯವನ್ನು ಮಾಡಿಕೊಡುತ್ತಲೇ ಅವನನ್ನು ಮಾನಸಿಕವಾಗಿ ಉನ್ನತ ಮಟ್ಟಕ್ಕೆ ಕೊಂಡೊಯ್ಯುತ್ತದೆ. ಅಂತಹ ರಸನಿಬಿಡ ಕಾವ್ಯಗಳನ್ನು ಬರೆದವರು ರಸಋಷಿಗಳು, ಮಹಾಕವಿಗಳು.

ಕರ್ನಾಟಕವು ಆ ಬಗೆಯ ರಸಋಷಿಗಳ ಮಹಾಕವಿಗಳ ಬೀಡು. ಪಂಪ, ರನ್ನ, ಬಸವ ಇತ್ಯಾದಿ ಹಲವು ರಸಋಷಿಗಳನ್ನು ಮತ್ತೆ ಮುಂದೆ ಸ್ಮರಿಸಿದ್ದಾರೆ.

## "ಭೂದೇವಿಯ ಮಕುಟದ......"

ಕರ್ನಾಟಕ ಒಂದು ನಿತ್ಯ ನೂತನ ನಾಡು- ಅದರ ಹೊಳಪು ಎಂದೂ ಕುಂದಿಲ್ಲ: ಕುಂದಲು ಸಾಧ್ಯವಿಲ್ಲ; ಭೂದೇವಿ ಧರಿಸಿರುವ ಕಿರೀಟದ ನವಮಣಿ ಅದು ಎಂದೆಂದೂ ನಿತ್ಯನೂತನ. ಅವರ ಸಮಕಾಲೀನ ಎಂತೋ ಅದರ ಪರಂಪರೆಯೂ ಅಷ್ಟೇ. ಬನವಾಸಿ ಪ್ರದೇಶದ ಸಮೀಪದ ಅಣ್ಣಿಗೇರಿಯಲ್ಲಿ ಹುಟ್ಟಿ ಬೆಳೆದ ಪಂಪನು ಆಂಧ್ರದಲ್ಲಿದ್ದು ಕಾವ್ಯರಚನೆ ಮಾಡಿದರೂ ಅವನು ಬಾಲ್ಯದಲ್ಲೋ ಯೌವನದಲ್ಲೋ ತಿರುಗಾಡಿದ ಬನವಾಸಿ ನಾಡನ್ನು ತಾನು ಎಂದೆಂದೂ ಮರೆಯಲು ಸಾಧ್ಯವಿಲ್ಲ ಎಂದು ಉದ್ಗಾರ ತೆಗೆದಿದ್ದಾನೆ - "ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" -ಯಾರು ಅಂಕುಶ ಹಾಕಿ ನನ್ನ ಮನಸ್ಸನ್ನು ನಿಯಂತ್ರಿಸಲು ಯತ್ನಿಸಿದರೂ ಅದು ಬನವಾಸಿ ದೇಶವನ್ನು ಮರೆಯುವಂತೆ ಎಂದೂ ಮಾಡಲಾರದು. ಅಂತಹ ಬನವಾಸಿ ದೇಶದಲ್ಲಿ ಮನುಷ್ಯನಾಗಿ ಹುಟ್ಟುವುದೇ ಒಂದು ಸೌಭಾಗ್ಯ; ಮನುಷ್ಯನಾಗಿ ಹುಟ್ಟಲು ಸಾಧ್ಯವಿಲ್ಲದಿದ್ದರೂ ಕೊನೆಯ ಪಕ್ಷ ಮರಿದುಂಬಿಯಾಗಿಯೋ ಕೋಗಿಲೆಯಾಗಿಯೋ "ನಂದನವನ" ಬನವಾಸಿ ದೇಶದಲ್ಲಿ ಹುಟ್ಟಿದರೂ ಸಾಕು. ಅದೇ ಸೌಭಾಗ್ಯ ಎಂದಿದ್ದಾನೆ. ಅದು ಶ್ರೀಗಂಧ ವೃಕ್ಷಗಳ ತೌರು, ಶುದ್ಧ ಚಿನ್ನದ ಗಣಿ. ಶಿವಮೊಗ್ಗ ಜಿಲ್ಲೆ, ಧಾರವಾಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ -ಇವು ಶ್ರೀಗಂಧದ ಮರಗಳು ಇರುವ ಪ್ರದೇಶ: "ಮೈಸೂರು ಸ್ಯಾಂಡಲ್ ಸೋಪ್" ಒಂದು ಕಾಲದಲ್ಲಿ ವಿಶ್ವಖ್ಯಾತಿಯನ್ನು ಗಳಿಸಿತ್ತು. ಇಡೀ ಭಾರತದಲ್ಲಿ ಚಿನ್ನವನ್ನು ಉತ್ಪಾದಿಸುವ ರಾಜ್ಯಗಳಲ್ಲಿ ಕರ್ನಾಟಕವು ಅಗ್ರಸ್ಥಾನದಲ್ಲಿದೆ. ಕೋಲಾರ ಜಿಲ್ಲೆಯ ಚಿನ್ನದ ಗಣಿಗಳು (ಕೆ.ಜಿ.ಎಫ್.) ಲಿಂಗಸೂಗೂರು ತಾಲೂಕಿನ ಹಟ್ಟಿ ಗಣಿಗಳು ಬಹು ಪ್ರಸಿದ್ಧ. ಹಾಗೆಯೇ ದೇವದುರ್ಗ ಸುರಪುರ ಹೊನ್ನಾಳಿ ತಾಲೂಕುಗಳು ಚಿನ್ನ ದೊರಕುವ ಇತರ ಪ್ರದೇಶಗಳು. ಕರ್ನಾಟಕ ಎಂದರೆ ಶ್ರೀಗಂಧದ ಸುವಾಸನೆ ಬೀರುವ ನಾಡು; ಕರ್ನಾಟಕ ಎಂದರೆ ಅಪ್ಪಟ ಚಿನ್ನದ ಬೀಡು.

ಇಂತಹ ಮಹಿಳಾ ಮಣಿಯನ್ನು ಹೆತ್ತ ಭಾರತ ಮಾತೆ ಧನ್ಯೆ. ಭಾರತವೆಂದರೆ ರಾಮ, ಕೃಷ್ಣರು ಅವತರಿಸಿದ ಪುಣ್ಯಭೂಮಿ. ಪರಪತ್ನಿಯನ್ನು ಅಪಹರಿಸಿದ ರಾವಣನನ್ನು ಸಂಹರಿಸಿದ ರಾಮ (ರಾಘವ), ಮಧು ಕೈಟಭರೆಂಬ ದುಷ್ಟರಾಕ್ಷಸರನ್ನು ಸಂಹರಿಸಿದ್ದು ಮಾತ್ರವಲ್ಲದೆ ಸೋದರ ವಂಚಕ ಮತ್ತು ಸೋದರರ ಪತ್ನಿ ದೌಪದಿಯ ಬಹಿರಂಗ ಮಾನಾಪಹರಣ ಮಾಡಿದ ದುರ್ಯೋಧನನನ್ನು ಕೊಲ್ಲಲು ಪಾಂಡವರಿಗೆ ದಿಗ್ದರ್ಶನ ಮಾಡಿದ ಕೃಷ್ಣ (ಮಧುಸೂದನ) ಇಂತಹ ದೈವೀ ಪುರುಷರು ಅವತರಿಸಿದ ಪುಣ್ಯಭೂಮಿ ಭಾರತ. ರಾಮ ಕೃಷ್ಣರು ಸಜ್ಜನರಿಗೆ ಸಜ್ಜನರು, ದುರುಳರ ಸಂಹಾರಕರು. ಅಂತಹ ಭಾರತದ ಸುಪುತ್ರಿ ಕರ್ನಾಟಕವು

ಭಾರತದ ಅದೇ ಆದರ್ಶವನ್ನು ನಿಜಜೀವನದಲ್ಲಿ ಮುಂದುವರಿಸಿತು. ಕ್ರಿ.ಶ. ೭೦೦ರ ಬಾದಾಮಿ ಕಪ್ಪೆ ಅರಭಟ್ಟನ ಕನ್ನಡ ತ್ರಿಪದಿಯೊಂದು ಹೀಗಿದೆ-

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯನ್

ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್

ಮಾಧವನೀತನ್ ಪೆರನಲ್ಲ ||

ಕಪ್ಪೆ ಅರಭಟ್ಟ ಸಜ್ಜನರಿಗೆ ಸಜ್ಜನ; ಮಧುರ ಸ್ವಭಾವದವರಿಗೆ ಮಧುರ ಸ್ವಭಾವದವನು. ಆದರೆ ತೊಂದರೆ ಕೊಡುವ ದುಷ್ಟನಿಗೆ ವಿಪರೀತ ದುಷ್ಟ. "ಕಲಿ"ಗೆ ಎಂದರೆ ಕಲಿಯುಗದ ಸಾಂಕೇತಿಕ ಪುರುಷನಾದ ಕಲಿಪುರುಷನ ವಿಷಯದಲ್ಲಿ ಅವನಿಗಿಂತ ಹೆಚ್ಚು 'ದುಷ್ಟ.' "ಕಲಿ" ಎಂದರೆ ಶೂರನೂ ಆಗಬಹುದು, ಕಲಿಪುರುಷನೂ ಆಗಬಹುದು. ಸಜ್ಜನರಿಗೆ ತೊಂದರೆ ಕೊಡುವವನಿಗೆ ಬರೀ ತೊಂದರೆ ಕೊಡುತ್ತಿರಲಿಲ್ಲ; ಅವನನ್ನು ನಿರ್ದಯವಾಗಿ ಕೊಂದು ಹಾಕುತ್ತಿದ್ದ. ಅವನು ಆಧುನಿಕ ಕಾಲದ ಮಾಧವ ಅಥವಾ ಶ್ರೀಕೃಷ್ಣ. ಭಾರತದ ಅವತಾರ ಪುರುಷ ಕೃಷ್ಣನ ಅದೇ ಗುಣಗಳನ್ನು ಅಳವಡಿಸಿಕೊಂಡಿದ್ದ ಧೀರ ಮಾನುಷ ವ್ಯಕ್ತಿ ಕನ್ನಡಿಗ ಕಪ್ಪೆ ಅರಭಟ್ಟ. ವಿಲ್ ಡುರಾಂಟ್ ಒಂದೆಡೆ ಹೇಳುತ್ತಾನೆ "A Nation most love peace but keep its powder dry" -ಇದಕ್ಕೆ ವ್ಯಾಖ್ಯಾನ ಬೇಕಿಲ್ಲ. ಭಾರತ ಮಾತೆಗೆ ಜಯವಾಗಲಿ: ಭಾರತದ ಸುಪುತ್ರಿ ಕರ್ನಾಟಕ ಮಾತೆಗೆ ಜಯವಾಗಲಿ.

ಮೇಲಿನ ಸಂಗತಿಗೆ ಸಂಬಂಧಿಸಿದ ಇನ್ನಷ್ಟು ಮಾಹಿತಿ ಗಮನಿಸಿ. ಶಿವಮೊಗ್ಗ ಜಿಲ್ಲೆಯ ತಾಳಗುಂದದ ಮಯೂರಶರ್ಮನೆಂಬ ಬ್ರಾಹ್ಮಣನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ತಮಿಳುನಾಡಿನ ಕಂಚಿಗೆ ಹೋಗಿದ್ದಾಗ ಅಲ್ಲಿಯ ಕ್ಷತ್ರಿಯರು ಅವನನ್ನು ಹೇಡಿ ಬ್ರಾಹ್ಮಣ ಎಂದು ಲೇವಡಿ ಮಾಡಿದರು. ಸ್ವಾಭಿಮಾನಿಯಾದ ಅವನು ವಾಪಸ್ ಕರ್ನಾಟಕಕ್ಕೆ ಬಂದು ತಾನೇ ಸೈನ್ಯವನ್ನು ಕಟ್ಟಿ ಆ ಸೈನ್ಯದ ಸಹಾಯದಿಂದ ಕಂಚಿಯ ಪಲ್ಲವರನ್ನು ಸೋಲಿಸಿ, ನಿಜವಾದ 'ಕ್ಷತ್ರಿಯ'ನಾಗಿ ಕದಂಬ ರಾಜ್ಯದ ಉಗಮಕ್ಕೆ ಕಾರಣ ಕರ್ತನಾದ. ಮುಂದಿನ ದೊರೆಗಳೆಲ್ಲ ತಮ್ಮ ಹೆಸರುಗಳ ಕೊನೆಯಲ್ಲಿದ್ದ ಬ್ರಾಹ್ಮಣ್ಯ ಸೂತಕ "ಶರ್ಮ"ವನ್ನು ಬಿಟ್ಟು ಕ್ಷಾತ್ರ ಸೂಚಕ "ವರ್ಮ" ಎಂಬ ವಂಶನಾಮವನ್ನು ಧರಿಸಿದರು. ಆ ಕದಂಬರಿಂದಾಗಿ ಕನ್ನಡಕ್ಕೆ ಒಂದು ಹೆಚ್ಚಿನ ಬೆಲೆ ಬಂದಿತು: ಆಡು ಭಾಷೆಯಾಗಿದ್ದುದು ರಾಜಭಾಷೆಯಾಯ್ತು (೪ನೇ ಶತಮಾನ). ತಮ್ಮ ರಾಜರಿಗಾಗಿ, ಅರ್ಥಾತ್ ರಾಜ್ಯಕ್ಕಾಗಿ ಹೋರಾಡಿ ಮಡಿದ ಸಾವಿರಾರು ವೀರರ ಸ್ಮಾರಕವಾದ ವೀರಗಲ್ಲುಗಳು ಕರ್ನಾಟಕಾದ್ಯಂತ ದೊರಕುತ್ತವೆ. ಅವುಗಳ ಮೇಲಿನ ವೀರರ, ಯುದ್ಧಗಳ ಕೆತ್ತನೆಗಳು ನಮಗೆ ಸ್ಫೂರ್ತಿಯನ್ನು ನೀಡುತ್ತವೆ. ಅನೇಕ ವೀರರು ರಾಜನಿಗಾಗಿ ಅರ್ಥಾತ್ ತಮ್ಮ ರಾಜ್ಯಕ್ಕಾಗಿ ('ರಾಷ್ಟ'ಕ್ಕಾಗಿ) ಯುದ್ಧದಲ್ಲಿ

ಹೋರಾಡುವ ಮುನ್ನ ಹೀಗೆ ಸಂಕಲ್ಪಿಸುತ್ತಿದ್ದರು- “ಯುದ್ದದಲ್ಲಿ ಗೆದ್ದು ಬಂದರೆ 'ಲಕ್ಷ್ಮಿ' (ಐಶ್ವರ್ಯ) ದೊರಕುತ್ತಾಳೆ; ಸತ್ತರೆ ವೀರಸ್ವರ್ಗದಲ್ಲಿ ಸುರಾಂಗನೆಯರು ದೊರಕುತ್ತಾರೆ. ಆ ಕಾರಣ, ರಣದ ಬಗ್ಗೆ ಮರಣದ ಬಗ್ಗೆ ಚಿಂತೆ ಏಕೆ?” -ಅವರು ಎಂದೂ ಪ್ರಾಣ ಭಯದಿಂದ ಹಿಂದಕ್ಕೆ ಬದುಕಿ ಬರುತ್ತಿರಲಿಲ್ಲ. ಇಲ್ಲವೇ ಗೆದ್ದು ಹಿಂದಕ್ಕೆ ಬರಬೇಕು; ಸೋತು ಮಾತ್ರ ಹಿಂದಕ್ಕೆ ಬರುತ್ತಿರಲಿಲ್ಲ. ಕರ್ನಾಟಕದ ಯೋಧರು ಯುದ್ಧಕ್ಕೆ ಹೊರಡುವಾಗ ಅವರ ಪತ್ನಿಯರು ಹೇಳುತ್ತಿದ್ದರಂತೆ- “ನೀವು ಸೋತು ಹಿಂದಕ್ಕೆ ಬರುವುದಾದರೆ ನಿಮಗೆ ದೊರಕುವ ಬಹುಮಾನ ನಮ್ಮ ಕುಂಕುಮ ಮತ್ತು ಬಳೆ” -ಎಂದರೆ ತಮ್ಮ ಗಂಡಂದಿರು ಯುದ್ಧದಲ್ಲಿ ಸಾವಿಗೆ ಹೆದರದೆ ಹೋರಾಡಬೇಕೆಂದೂ ಅನಿವಾರ್ಯವಾದರೆ ಮಡಿಯಲು ಸಿದ್ಧರಾಗಿರಬೇಕೆಂದೂ ಅವರ ಪತ್ನಿಯರು ಬಯಸುತ್ತಿದ್ದರು. ಹದಿನೇಳನೇ ಶತಮಾನದ ಬೆಳವಡಿ ಮಲ್ಲಮ್ಮ ತಾನೇ ತನ್ನ ಯೌವನದಲ್ಲಿ ಸ್ತ್ರೀಯರ ಪಡೆಯನ್ನು ಕಟ್ಟಿ ತನ್ನ ಗಂಡ ಈಶ ಪ್ರಭುವಿನ ಸೈನ್ಯಕ್ಕೆ ಮುಂಚೆ ತನ್ನ ಸ್ತ್ರೀ ಸೈನ್ಯವನ್ನು ತಾನೇ ಯುದ್ಧಕ್ಕೆ ಕೊಂಡೊಯ್ದು ಶತ್ರುಗಳ ದೊಡ್ಡ ಸೈನ್ಯವನ್ನು ಸೋಲಿಸಿದ ಅಪೂರ್ವ ಮಹಿಳೆ -ಇಂತಹ ಮಹಿಳೆ ವಿಶ್ವದಲ್ಲಿ ತೀರ ಅಪೂರ್ವ: ಭಾರತದಲ್ಲಂತೂ ಇಲ್ಲವೇ ಇಲ್ಲ. ಅಂತಹ ಶೂರರ, ಧೀರೆಯರ ಸ್ವಾಭಿಮಾನಿಗಳ ನಾಡು ಕರ್ನಾಟಕ, ಕರ್ನಾಟಕದ ವೀರ ಪರಂಪರೆ ಹೆಮ್ಮೆಯನ್ನು ಉಕ್ಕಿಸುವಂತಹುದು.

## “ಜನನಿಯ ಜೋಗುಳ ವೇದದ.....”

ಭಾರತಮಾತೆ ತನ್ನ ಪ್ರೀತಿಯ ಕಂದಮ್ಮ ಕರ್ನಾಟಕವನ್ನು ತೊಟ್ಟಿಲಲ್ಲಿ ಮಲಗಿಸಿ ತೂಗಿ ಹಾಡಿದ ಜೋಗುಳವೇ ವೇದದ ‘ಘೋಷ,’ ಕುವೆಂಪು ವೇದಗಳ ಮಹತ್ವವನ್ನು ಸರಿಯಾದ ಅರ್ಥದಲ್ಲಿ ಗ್ರಹಿಸಿದ್ದಾರೆ. ವೇದಗಳ ಕಾಲ ಅನಾದಿ; ಅವುಗಳು ಮಾನವ ರಚನೆಗಳಲ್ಲ; ಅವುಗಳು ಸ್ವಯಂ ಸಿದ್ಧವಾಗಿ ರೂಪುಗೊಂಡಂಥವು -ಇಂತಹ ನಂಬಿಕೆ ಶ್ರದ್ಧೆಗಳು ಏನೇ ಇರಲಿ -ಅವು ಜ್ಞಾನಿಗಳಿಂದ ಭಗವದ್ ದರ್ಶನಮಾಡಿದ ಋಷಿಗಳಿಂದ ಮೂಡಿ ಬಂದಂಥವು ಮತ್ತು ಅವುಗಳ ಕಾಲ ಕ್ರಿ.ಪೂ. ೨೫೦೦ಕ್ಕಿಂತ ಹಿಂದಿನದು ಎಂದು ವಿದ್ವಾಂಸರು ಸ್ಥೂಲವಾಗಿ ಊಹಿಸಿದ್ದಾರೆ. ಕರ್ನಾಟಕ ಎಂಬುದು ಆ ಕಾಲದಲ್ಲಿ ಇತ್ತೇ ಇಲ್ಲವೇ ಎಂಬ ಚರ್ಚೆ ಅನಗತ್ಯ. (ಇದ್ದಿತು ಎಂಬುದು ಖಚಿತ.) ಆದರೆ ಭಾರತೀಯರಿಗೆ ಅತ್ಯಂತ ಪ್ರಿಯವಾದ ಹಿಂದೂ ಅಥವಾ ಸನಾತನ ಧರ್ಮವು ವೇದಾಧಾರಿತ ಎಂದು ಬಾಲಗಂಗಾಧರ ತಿಲಕರು ಪ್ರತಿಪಾದಿಸಿದ್ದನ್ನು ಸರ್ವೋಚ್ಚ ನ್ಯಾಯಾಲಯದ ಪೂರ್ಣಪೀಠವು (೧೯೯೫) ಒಪ್ಪಿಕೊಂಡು ಪುರಸ್ಕರಿಸಿದೆ. ವೇದಗಳಲ್ಲಿ ಬಹು ದೇವತಾ ವಾದವಿದೆ; ಆ ದೇವತೆಗಳೆಲ್ಲ ಕೇವಲ ಆಕಾಶ, ಅಗ್ನಿ, ವಾಯು, ಜಲ, ಸಸ್ಯದಂತಹ ಪ್ರಾಕೃತಿಕ ವಸ್ತುಗಳ ಸಂಕೇತ; ಅಲ್ಲಿ ವರ್ಣಭೇದದ ಪ್ರಸ್ತಾಪವಿದೆ; ಅವುಗಳನ್ನು ರಚಿಸಿದವರು ಭಾರತದ ಹೊರಗಿನಿಂದ ಬಂದು ದ್ರಾವಿಡರನ್ನು ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಓಡಿಸಿದವರು; ಆರ್ಯ ಸಂಸ್ಕೃತಿಯು ಮೂಲತಃ ಅಭಾರತೀಯ; ದ್ರಾವಿಡರೇ ಭಾರತದ ಮೂಲನಿವಾಸಿಗಳು ಎಂಬಂತಹ ವಿದೇಶೀ ವಿದ್ವಾಂಸರ ವಾದಗಳು

ಇಂದು ಆಧಾರರಹಿತವೆಂದು ಬಿದ್ದು ಹೋಗಿವೆ. ವಾಸ್ತವವಾಗಿ ವೇದಗಳಲ್ಲಿ ಏನಿದೆ ನೋಡೋಣ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ 'ವರ್ಣ'ಗಳು ಹುಟ್ಟಿನಿಂದ ಬಂದುವಲ್ಲ, ವ್ಯಕ್ತಿಯ ಮನೋಧರ್ಮ ಆಯ್ಕೆಗೆ ಸಂಬಂಧಪಟ್ಟವು. ಜ್ಞಾನ, ಆಡಳಿತ, ವ್ಯವಸಾಯ ಮತ್ತು ವ್ಯಾಪಾರ, ಶ್ರಮಜೀವನ ಇವುಗಳನ್ನು ಆರಿಸಿಕೊಂಡವರೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು. ಬ್ರಾಹ್ಮಣನ ಮಗ ವ್ಯಾಪಾರಿಯಾದರೆ ವೈಶ್ಯ, ಆಡಳಿತ ಕ್ಷೇತ್ರಕ್ಕೆ ಹೋದರೆ ಕ್ಷತ್ರಿಯ ಎನ್ನಿಸಿಕೊಳ್ಳುತ್ತಾನೆ. ಅವರ ಮಕ್ಕಳು ಶ್ರಮ ಜೀವನ ಆರಿಸಿಕೊಂಡರೆ ಶೂದ್ರರಾಗುತ್ತಾರೆ. ಶೂದ್ರನ ಮಗ ಜ್ಞಾನಕ್ಷೇತ್ರಕ್ಕೆ ಹೋದರೆ ಬ್ರಾಹ್ಮಣನಾಗುತ್ತಾನೆ. ಈ ವರ್ಣ ವ್ಯವಸ್ಥೆ ಎಲ್ಲ ಕಾಲ ದೇಶಗಳಲ್ಲಿಯೂ ಇದೆ. ಎಲ್ಲ ಮಾನವರೂ ವೇದಗಳ ಪ್ರಕಾರ ಸಮಾನರು, ಎಲ್ಲರೂ ಸುಜಾತರೇ ("ಜನುಷಾ ಸುಜಾತಾ ಸಃ"). ಸ್ತ್ರೀ ಕೂಡ ಬ್ರಹ್ಮಜ್ಞಾನಕ್ಕೆ ಅರ್ಹಳು. ಅವಳೂ ಪುರುಷರಂತೆ ಯಜ್ಞಯಾಗ ವಿಧಿಗೆ ಅರ್ಹಳು. ಆತ್ಮಕ್ಕೆ ಮರುಷ, ಸ್ತ್ರೀ ಎಂಬ ಭೇದವಿಲ್ಲ; ಆತ ಪುರುಷನೂ ಹೌದು, ಸ್ತ್ರೀ ಕೂಡ ಹೌದು. ವೇದಗಳಲ್ಲಿ ಅಸ್ಪೃಶ್ಯ, ಅಂತ್ಯಜ ಎಂಬ ಕಲ್ಪನೆಯೇ ಇರಲಿಲ್ಲ. "ಏಕಂ ಸತ್, ವಿಪ್ರಾಃ ಬಹುಧಾ ವದಂತಿ" ಇರುವ ಪರವಸ್ತು ಒಂದೇ; ಅದರ ಹೆಸರುಗಳು ಬೇರೆ ಬೇರೆ ಆವಿಷ್ಕಾರಗಳು. 'ಆರ್ಯ' ಎಂದರೆ ಶ್ರೇಷ್ಠ; ಅದಕ್ಕೆ ವಿರುದ್ಧವಾದುದು "ದಸ್ಯು" -ದಸ್ಯು ಎಂದರೆ ದುಷ್ಟ. ಪ್ರತಿಯೊಬ್ಬ ವ್ಯಕ್ತಿಯೂ "ಆರ್ಯ"ನಾಗಿರಬೇಕು; ಆರ್ಯನಾಗಬೇಕು. ವೇದಗಳ ಪರಿಕಲ್ಪನೆ, ಬೋಧನೆ ಅತ್ಯಂತ ಉದಾತ್ತವಾದುದು. ವೇದಗಳನ್ನು ರಚಿಸಿದವರು ಮೂಲತಃ ಭಾರತೀಯರೇ. ಆರಕ್ಕೆ ವಿರುದ್ಧವಾದುದು ದ್ರಾವಿಡ ಅಲ್ಲ; ದ್ರಾವಿಡ ಮಾತು ವೇದಗಳಲ್ಲಿ ಇಲ್ಲ.

ವೇದಗಳ ಒಟ್ಟು ಪರಿಕಲ್ಪನೆ ಅತ್ಯಂತ ಉದಾತ್ತವಾದುದು. ಭಾರತೀಯ ಸಂಸ್ಕತಿಯ ಭದ್ರಬುನಾದಿ ವೇದಗಳು. ಅಂತಹ ವೇದಗಳ ಮುಂದಿನ ಯುಗದಲ್ಲಿ, ಕೆಲವು ಸ್ಮೃತಿಗಳಲ್ಲಿ ಮೇಲು ಕೀಳು ಎಂಬ ವರ್ಣ ವ್ಯವಸ್ಥೆ, ಪುಂ-ಸ್ತ್ರೀ ತಾರತಮ್ಯ, ಅಸ್ಪೃಶ್ಯತೆಯ ಭಾವನೆ ಹುಟ್ಟಿಕೊಂಡು ಭಾರತೀಯ ಸಂಸ್ಕೃತಿಯನ್ನು ಕಲುಷಿತಗೊಳಿಸಿದವು. ಈ ದೋಷದಿಂದ ಮುಕ್ತವಾಗಲು ನಾವು ಮತ್ತೆ ವೇದ ಯುಗಕ್ಕೇ ಹೋಗಬೇಕು; ಅಲ್ಲಿಂದ ಸ್ಫೂರ್ತರಾಗಬೇಕು.

ಇಂತಹ ವೇದ ಘೋಷವನ್ನು ಬಾಲ್ಯದಲ್ಲಿ ಜೋಗುಳ ಹಾಡಾಗಿ ಕೇಳಿ ಬೆಳೆದ ಕರ್ನಾಟಕ ವಾತೆ ಧನ್ಯಳು. ವೇದಗಳ ಆದರ್ಶವನ್ನು ಮೈಗೂಡಿಸಿಕೊಂಡಿರುವ ಕರ್ನಾಟಕ ಮಾತೆ ಧನ್ಯಳು. ಕರ್ನಾಟಕವನ್ನು ಹೆತ್ತ ಭಾರತ ಮಾತೆಗೆ ತನ್ನ ಪ್ರೀತಿಯ ಕಂದಮ್ಮ ಕರ್ನಾಟಕದ ಆವೇಶವೇ ಜೀವ. ಆ ಆವೇಶ ಬರೀ ವ್ಯರ್ಥ ಭಾವಾವೇಶವಲ್ಲ; ಅದೊಂದು ಜೀವಂತ ಸ್ಪಂದನ. ಬದುಕಿನ ಎಲ್ಲ ಆಯಾಮಗಳಿಗೆ ಸಕಾರಣವಾಗಿ ಸ್ಪಂದಿಸುವುದೇ ಆವೇಶ. ಆ ಆವೇಶ ಕನ್ನಡಿಗರ ರಾಷ್ಟ್ರಭಕ್ತಿಯಲ್ಲಿ, ನಾಡಭಕ್ತಿಯಲ್ಲಿ ವ್ಯಕ್ತವಾಗಬೇಕು. ತನ್ನನ್ನೂ ಉಳಿಸಿಕೊಂಡು ಇನ್ನೊಬ್ಬರನ್ನೂ ಉಳಿಸುತ್ತ ಬೆಳೆಯುವ, ಬೆಳೆಸುವ ಜೀವಂತ ಶಕ್ತಿಯೇ ಆವೇಶ. ಕನ್ನಡಿಗರಲ್ಲಿ ಆ ಬಗೆಯ ಆವೇಶ ಸ್ಪಂದನವಾಗುವುದು ಕರ್ನಾಟಕದ ಅಗತ್ಯ ಮಾತ್ರವಲ್ಲ: ಜನನಿ ಭಾರತ ಮಾತೆಯ

ತುಂಬು ಹೃದಯದ ಬಯಕೆಯೂ ಅದೇ. “ವಂದೇ ಮಾತರಂ”, “ಭಾರತ ಮಾತೆಗೆ ಜಯವಾಗಲಿ”. “ಸಿರಿಗನ್ನಡಂ ಗೆಲ್ಗೆ”, “ಜೈ ಕರ್ನಾಟಕ ಮಾತೆ” ಇಂತಹ ಘೋಷಣೆಗಳು ಕನ್ನಡಿಗನಲ್ಲಿ ವೀರರಸವನ್ನು ಉಕ್ಕಿಸಬೇಕು; ಅಗತ್ಯಬಿದ್ದರೆ ಎಂತಹ ತ್ಯಾಗಕ್ಕೂ ಸಿದ್ಧವಾಗಬೇಕು. ಅಂತಹ ಕನ್ನಡ ಮಕ್ಕಳಿಂದಲೇ ಕರ್ನಾಟಕ ಉಳಿಯುವುದು; ಭಾರತವೂ ಉಳಿಯುತ್ತದೆ. ಉತ್ತರ ಕನ್ನಡ ಜಿಲ್ಲೆಯಿಂದ ಶಿವಮೊಗ್ಗ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ಕೊಡಗುಗಳವರೆಗೂ ವ್ಯಾಪಿಸಿರುವ ಪಶ್ಚಿಮ ಘಟ್ಟದ ಗಿರಿಗಳು ಎಂದೆಂದೂ ಹಸಿರಾಗಿರುವ ವನರಾಶಿಯಿಂದ ತುಂಬಿವೆ. ಆ ವನರಾಶಿಯೇ ಕನ್ನಡ ತಾಯಿಯ ಕೊರಳಿನ ಮಾಲೆ. ಕಾಡು ಉಳಿದರೆ ನಾಡು ಉಳಿಯುತ್ತದೆ; ಹಸಿರು ಅಳಿದರೆ ನಾಡಿನ ಅಸುವೂ ಅಳಿಯುತ್ತದೆ. ಕನ್ನಡ ಮಾತೆಯ ನಿಚ್ಚ ಹಸಿರಾಗಿರುವ ಅರಣ್ಯಮಾಲೆಯು ಎಂದೂ ಒಣಗುವುದಿಲ್ಲ. ಅವಳು ಶಾಶ್ವತ ಸುಮಂಗಲೆ. ಆ ಬೆಟ್ಟಗಳ ಸಾಲಿನಿಂದ ಹಲವು ನದಿಗಳು ಹುಟ್ಟಿ ಹರಿದು ನಾಡನ್ನು ಹಸಿರಾಗಿಸುತ್ತವೆ. ಕಾವೇರಿ ಕೊಡಗಿನ ಉನ್ನತ ಗಿರಿಶಿಖರ ಭಾಗಮಂಡಲದಲ್ಲಿ ಹನಿ ಹನಿ ರೂಪದಲ್ಲಿ ಹುಟ್ಟಿ ಸಣ್ಣ ಹಳ್ಳವಾಗಿ ಹರಿದು ಮುಂದೆ ಹಳ್ಳ ಉಪನದಿಗಳು ಸೇರಿ ದೊಡ್ಡ ನದಿಯಾಗಿ ಪರಿಣಮಿಸಿ ಕೃಷ್ಣರಾಜಸಾಗರ ಜಲಾಶಯದ ಮೂಲಕ ಹರಿದು ಬತ್ತವನ್ನು ಬೆಳೆಸುತ್ತದೆ; ಶಿವನ ಸಮುದ್ರದಲ್ಲಿ ಧುಮ್ಮಿಕ್ಕಿ ಹರಿದು ವಿದ್ಯುಚ್ಛಕ್ತಿಯನ್ನು ನಿರ್ಮಿಸುತ್ತದೆ.

ಭಾರತ ಹಲವು ಶ್ರೇಷ್ಠ ಋಷಿವರ್ಯರ ಚಿಂತಕರ ದೇಶ, ಕಪಿಲ ವಿಷ್ಣುವಿನ ಐದನೇ ಅವತಾರವೆಂಬ ಭಾವನೆ ಇದೆ. ಅವನು ಕರ್ದಮ, ದೇವಹೂತಿಯರ ಏಕಮಾತ್ರ ಪುತ್ರ. ಅವನು ಪ್ರಬುದ್ಧನಾದ ಮೇಲೆ ತನ್ನ ತಾಯಿ ದೇವ ಹೂತಿಗೆ ಆಧ್ಯಾತ್ಮಿಕ ಬೋಧನೆ ಮಾಡಿದ ಋಷಿ. ಯೋಗದ ಬಗ್ಗೆ, ಅದರಲ್ಲೂ ಭಕ್ತಿ ಯೋಗದ ಬಗ್ಗೆ ಅಪಾರ ತಿಳಿವಳಿಕೆ ಇತ್ತು; ಅವನು ಭಕ್ತಿಯೋಗದ ಸಾಧಕನೂ ಹೌದು. ವೈದಿಕರು ಕೆಲವರು ಯಜ್ಞದ ಸಮಯದಲ್ಲಿ ಪ್ರಾಣಿ ಬಲಿ ನೀಡುವುದನ್ನು ವಿರೋಧಿಸಿದನು. ಕ್ರಿ.ಪೂ. ೨ನೇ ಶತಮಾನದ ಪತಂಜಲಿಯದು ಲೌಕಿಕ, ಆಧ್ಯಾತ್ಮಿಕ, ಭಾಷಾಕ್ಷೇತ್ರದಲ್ಲಿ ದೊಡ್ಡ ಹೆಸರು. ತಾಯಿ ಗೋಣಿಕಾ; ತಂದೆ ಹೆಸರು ತಿಳಿಯದು. ಭಾರತದ (ಈಗಿನ ಪಾಕಿಸ್ತಾನದ) ತಕ್ಷಶಿಲಾದಲ್ಲಿ ಶಿಕ್ಷಣವನ್ನು ಪಡೆದ ಅವನು ದೇಹ, ಮಾತು, ಮನಸ್ಸುಗಳ ಶುದ್ಧಿಗಳಿಗಾಗಿ ಮೂರು ಕೃತಿಗಳನ್ನು ರಚಿಸಿದನು -ಆಯುರ್ವೇದ, ಮಹಾಭಾಷ್ಯ (ಪಾಣಿನಿ ವ್ಯಾಕರಣ ಸೂತ್ರಗಳಿಗೆ ವ್ಯಾಖ್ಯಾನ) ಮತ್ತು ಯೋಗಸೂತ್ರ. ಅವನ ಯೋಗ ಸೂತ್ರವು ಯೋಗದ ಸಿದ್ಧಾಂತ ಮತ್ತು ಆಚರಣೆಗಳ ಬಗೆಗಿನ ಮೂಲಭೂತ ಗ್ರಂಥ. (ಇದರ ಮೇಲೆ ಮುಂದೆ ಹಲವು ವ್ಯಾಖ್ಯಾನಗಳು ಬಂದಿವೆ.) ಸುಮಾರು ಕ್ರಿ.ಪೂ. ೬೦೦-೪೦೦ ಅವಧಿಯಲ್ಲಿದ್ದ ಗೌತಮ ಅಹಲ್ಯೆಯ ಪತಿ; ಸಪ್ತರ್ಷಿಗಳಲ್ಲಿ ಒಬ್ಬ ಇವನ ಹೆಸರಿನಲ್ಲಿ ಒಂದು ಗೋತ್ರವೇ ಇದೆ. ಅತ್ರಿ, ಅಂಗಿರಸ ಇತ್ಯಾದಿ ಮುನಿಗಳ ಜೊತೆ ಆಧ್ಯಾತ್ಮಿಕ ಚಿಂತನೆಗಳನ್ನು ಹಂಚಿಕೊಂಡುದಲ್ಲದೆ ತನ್ನ ಮಗ ಶತಾನಂದನಿಗೆ ಉಪಕನಂತಹ ಋಷಿಗೆ ಧರ್ಮ ಬೋಧನೆ ಮಾಡಿದ ಘೋರ ಕ್ಷಾಮ ಕಾಲದಲ್ಲಿ ಜನರಿಗೆ ರಕ್ಷಣೆ ನೀಡಿದ. ಇವನಿಂದಲೇ ಗೋದಾವರಿ (“ಗೋತಮೀ

ನದಿ") ಪವಿತ್ರ ನದಿ ಸೃಷ್ಟಿಯಾಯಿತೆಂಬ ನಂಬಿಕೆ ಇದೆ. ಅವನ ಗೌತಮ ಧರ್ಮ ಶಾಸ್ತ್ರವು ಆ ಕ್ಷೇತ್ರದ ಪ್ರಪ್ರಥಮ ಕೃತಿ. ಜಿನ ಎಂದರೆ ತನ್ನನ್ನು ತಾನು ಗೆದ್ದುಕೊಂಡು, ಅರ್ಥಾತ್ ಇಂದ್ರಿಯ ನಿಗ್ರಹ ಮಾಡಿ ತಪಸ್ಸನ್ನು ಆಚರಿಸಿ ಮುಕ್ತನಾದವನು. ಜೈನ ಧರ್ಮದ ಆದಿ ತೀರ್ಥಂಕರ ವೃಷಭ ದೇವನಿಂದ ಮಹಾವೀರರವರೆಗಿನ ಇಪ್ಪತ್ತು ನಾಲ್ಕು ತೀರ್ಥಂಕರರನ್ನು ಜಿನ ಎಂದೇ ಕರೆಯಲಾಗುತ್ತದೆ. ಅವರ ಬಗೆಗಿನ ಪುರಾಣಗಳು ಕನ್ನಡದಲ್ಲಿ ಬಂದಿವೆ. ಉದಾ: ಪಂಪನ ಆದಿಪುರಾಣ ಆದಿ ತೀರ್ಥಂಕರನಿಗೆ ಸಂಬಂಧಿಸಿದ್ದು: ರನ್ನನ ಅಜಿತನಾಥ ಪುರಾಣ ಇನ್ನೊಬ್ಬ ತೀರ್ಥಂಕರನಿಗೆ ಸಂಬಂಧಿಸಿದ್ದು. ಲೋಕದ ದೈಹಿಕ ಸುಖಕ್ಕಿಂತ ಆಧ್ಯಾತ್ಮಿಕ ಮುಕ್ತಿಯೇ ಮನುಷ್ಯನ ಪರಮಧ್ಯೇಯವಾಗಿರಬೇಕು ಎಂದು ಜೈನಧರ್ಮವು ಪ್ರತಿಪಾದಿಸುತ್ತದೆ.

ಅಹಿಂಸೆಯು ಜೈನ ಧರ್ಮದ ಮುಖ್ಯ ಲಕ್ಷಣ. ಬ್ರಾಹ್ಮಣನಾಗಿದ್ದ ಪಂಪನ ತಂದೆ ಭೀಮಪಯ್ಯನು ಜೈನ ಧರ್ಮದ ಉದಾತ್ತ ತತ್ವಕ್ಕೆ ಮಾರುಹೋಗಿ ಜೈನಧರ್ಮವನ್ನು ಅಂಗೀಕರಿಸಿದ ಜೈನಧರ್ಮವು ೬ ರಿಂದ ೧೨ನೇ ಶತಮಾನದವರೆಗೆ ಕರ್ನಾಟಕದ ಪ್ರಬಲ ಧರ್ಮವಾಗಿದ್ದು ಪಂಪ ರನ್ನರಂತಹ ಶ್ರೇಷ್ಠ ಕವಿಗಳನ್ನು ಅತ್ತಿಮಬ್ಬೆಯಂತಹ ತ್ಯಾಗಜೀವಿಗಳನ್ನು ಚಾವುಂಡರಾಯನಂತಹ ಶ್ರೇಷ್ಠ ಕಲಾಪ್ರೇಮಿ ರಾಜನೀತಿ ವಿಶಾರದರನ್ನು ಕರ್ನಾಟಕ ಸಂಸ್ಕೃತಿಗೆ ನೀಡಿದೆ. ಚಾವುಂಡರಾಯ ಹತ್ತನೇ ಶತಮಾನದ ಅಂತ್ಯದಲ್ಲಿ ಶ್ರವಣ ಬೆಳ್ಗೊಳದ ದೊಡ್ಡ ಬೆಟ್ಟದ ತುದಿಯ ಬಂಡೆಯಲ್ಲಿ ಕೆತ್ತಿಸಿದ ೫೭ ಅಡಿ ಎತ್ತರದ ಗೊಮ್ಮಟಮೂರ್ತಿ ಎತ್ತರದಲ್ಲಿ ಮಾತ್ರವಲ್ಲ, ಗಾಂಭೀರ್ಯ ಪ್ರಸನ್ನತೆ ಧ್ಯಾನ ಮುದ್ರೆಗಳಿಂದಲೂ ವಿಶ್ವವಿಖ್ಯಾತ. ವಿನಾಕಾರಣ ತನ್ನ ಮೇಲೆ ಎರಗಿ ಬಂದ ಅಣ್ಣ ಭರತನ ಸೈನ್ಯವನ್ನು ಸೋಲಿಸಿ ಅವನ ವಶದಲ್ಲಿದ್ದ ಇಡೀ ಲೋಕದ ಮೇಲೆ ಪ್ರಭುತ್ವವನ್ನು ಪಡೆದುಕೊಂಡ ಬಾಹುಬಲಿಗೆ ತನ್ನ ಅಧಿಕಾರ, ಧನ, ಪ್ರಭುತ್ವ ಪ್ರಾಪ್ತಿಯೇ ಅವನ ವೈರಾಗ್ಯಕ್ಕೆ ಪ್ರಚೋದನೆಯಾಯ್ತು. ತನ್ನ ವ್ಯಾಪ್ತಿಯ ಇಡೀ ಭೂಮಂಡಲದ ಮೇಲಿನ ಆಳಿಕೆಯ ಅಧಿಕಾರವನ್ನು ಅಣ್ಣ ಭರತನಿಗೆ ಮನಃಪೂರ್ವಕವಾಗಿ ಒಪ್ಪಿಸಿ, ತನ್ಮೂಲಕ ಇಂದ್ರಿಯ ನಿಗ್ರಹ ಮಾಡಿ ಭೋಗಲಾಲಸೆಯನ್ನು ತೊರೆದು ತಪಸ್ವಿಯಾಗಿ, ತನ್ನ ಸರ್ವ ಭೋಗ ಪರಿತ್ಯಾಗದ ಸಂಕೇತವಾಗಿ ಉಟ್ಟ ವಸ್ತ್ರವನ್ನೂ ಸಂಪೂರ್ಣ ತೊರೆದು ತಪಸ್ಸಿಗೆ ನಿಂತ ಬಾಹುಬಲಿಯೇ ಗೊಮ್ಮಟಮೂರ್ತಿ. ಆ ಶಿಲಾ ಮೂರ್ತಿಯ ಎತ್ತರ ಬಾಹುಬಲಿಯ ಮನೋಸ್ಥಿತಿಯ ಔನ್ನತ್ಯದ ಸಂಕೇತ. ಅವನ ನಗ್ನತೆ ಕಾಮ ವಿಕಾರಾದಿಗಳನ್ನು ತೊಡೆದುಹಾಕಿದ ಅವನ ಅಂತರಂಗದ ಸಂಕೇತ. ಆ ಮೂರ್ತಿಯ ದರ್ಶನ ಮಾಡಿದವರ ಮನಸ್ಸು ಉದಾತ್ತಗೊಳ್ಳುತ್ತದೆ; ಅದರ ಭವ್ಯತೆ ಶಾಂತತೆ ಮನುಷ್ಯನ ಮನಸ್ಸನ್ನು ಪ್ರಸನ್ನಗೊಳಿಸುತ್ತವೆ -ಅವನ ಮನೋಃ ಪ್ರಪಂಚವನ್ನು ಬದಲಾಯಿಸುತ್ತದೆ. ಪಂಪ ತನ್ನ ಆದಿಪುರಾಣದಲ್ಲಿ ತಂದಿರುವ ಭರತ ಬಾಹುಬಲಿಯರ ಪ್ರಸಂಗವು ಅದೆಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಬೊಪ್ಪಣ ಕವಿಯ ಗೊಮ್ಮಟ ಸ್ತುತಿಯಲ್ಲಿಯೂ ಆ ಮೂರ್ತಿಯ ಬಗ್ಗೆ ಹೃದಯಸ್ಪರ್ಶಿ ಪ್ರಾರ್ಥನೆ ಇದೆ.

ಕಪಿಲ, ಪತಂಜಲಿ, ಗೌತಮ, ಜಿನರಂತಹ ಶ್ರೇಷ್ಠರಿಂದ ಸ್ತುತಿಸಲ್ಪಟ್ಟ ಭಾರತ ಮಾತೆಗೆ ಅವಳ ಹೆಮ್ಮೆಯ ಸುಪುತ್ರಿ ಕರ್ನಾಟಕಮಾತೆಗೆ ಜಯವಾಗಲಿ.

## "ಶಂಕರ ರಾಮಾನುಜ ವಿದ್ಯಾರಣ್ಯ....."

ಶಂಕರಾಚಾರ್ಯರು ಬದುಕಿದ್ದು ೩೨ ವರ್ಷ ಮಾತ್ರ (೭೮೮-೮೨೦). ಆದರೆ ಸಾಧಿಸಿದ್ದು ಅಸಾಧ್ಯವಾದುದನ್ನು. ಕೇರಳದ ಪೂರ್ಣಾ ನದಿಯ ದಡದ ಕಾಲಡಿಯಲ್ಲಿ ಜನಿಸಿದರು. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು ತಾಯಿಯ ಆಶ್ರಯದಲ್ಲಿ ಬೆಳೆದರು. ಪ್ರತಿಭಾಶಾಲಿ ಬಾಲಕನನ್ನು ನದಿಯಲ್ಲಿ ಮೊಸಳೆ ಹಿಡಿದಾಗ ಮಾನಸಿಕವಾಗಿ ಸನ್ಯಾಸಿಯಾಗಿ ಸಾಯಲು ತಾಯಿಯ ಒಪ್ಪಿಗೆ ಪಡೆದು ಮೊಸಳೆಯಿಂದ ಬಿಡುಗಡೆ ಹೊಂದಿದ ಅವರು ಆಮೇಲೂ ಸನ್ಯಾಸಿಯಾಗಿಯೇ ಉಳಿದು ನರ್ಮದಾ ತೀರದ ಗೋವಿಂದ ಭಗವತ್ಪಾದರ ಶಿಷ್ಯನಾಗಿ ಎಂಟು ವರ್ಷ ಕಳೆದು, ಕಾಡಿಗೆ ಹೋಗಿ ತಪಸ್ಸು ಮಾಡಿ ಅದ್ವೈತ ಪ್ರಚಾರಕ್ಕೆ ಉತ್ತರ ಭಾರತದ ಕಾಶಿಗೆ ಹೋದಾಗ ನಾಲ್ವರು ಶಿಷ್ಯರು ದೊರಕಿದರು. ಹಿಮಾಲಯದ ಬದರೀನಾಥ ಕ್ಷೇತ್ರಕ್ಕೆ ಹೋಗಿ ದಕ್ಷಿಣ ಭಾರತಕ್ಕೆ ಹಿಂದಿರುಗಿ ಹಲವರನ್ನು ಅದ್ವೈತಕ್ಕೆ ಆಕರ್ಷಿಸಿದರು. ತಾಯಿಯ ಅಂತ್ಯ ಸಂಸ್ಕಾರವನ್ನು ತಾವೇ ಮಾಡಿದರು. ಅದ್ವೈತ ಸಿದ್ಧಾಂತಕ್ಕೆ ವಿರೋಧವಾಗಿದ್ದ ಹಲವರನ್ನು ವಾದದಲ್ಲಿ ಸೋಲಿಸಿದರು. ಶೃಂಗೇರಿ, ಪುರಿ, ದ್ವಾರಕೆ, ಜೋಷಿಮಠಗಳಲ್ಲಿ ನಾಲ್ಕು ಮಠಗಳನ್ನು ಭಾರತದ ನಾಲ್ಕೂ ದಿಕ್ಕುಗಳಲ್ಲಿ ಸ್ಥಾಪಿಸಿದರು. ಹಲವಾರು ಕೃತಿ ರಚನೆ ಮಾಡಿದ ಅವರು ಅಪೂರ್ವ ಮೇಧಾವಿ. ಅವರ ಸಿದ್ಧಾಂತದ ಪ್ರಕಾರ ಭಿನ್ನರೂಪವಾಗಿರುವ ವಿಶ್ವದ ಹಿಂದಿನ ಪರಮ ಚೈತನ್ಯ ಒಂದೇ- ಅದೇ ಪರಬ್ರಹ್ಮ ಅಥವಾ ಬ್ರಹ್ಮವಸ್ತು. ವಿಶ್ವವೇ ಬ್ರಹ್ಮ; ದೇಹ ಆತ್ಮ ಅಭಿನ್ನ. ವ್ಯಕ್ತಿಯು ಪರಬ್ರಹ್ಮದಲ್ಲಿ ಲೀನವಾಗುವುದೇ ಅದ್ವೈತ -ಅದೇ ಅಂತಿಮ ಅನುಭವ. "ಸೋಽಹಂ" -ಅವನೇ ಅಥವಾ ಚೈತನ್ಯವೇ ನಾನು ಎಂಬುದನ್ನು ಅನುಭವಿಸುವುದೇ ಜೀವನದ ಪರಮ ಗಂತವ್ಯ. ಅವರ ಕಾಲಕ್ಕೆ ದುರ್ಬಲವಾಗಿದ್ದ ಸನಾತನ ಧರ್ಮವನ್ನು ಉದ್ಧರಿಸಿ, ಅದಕ್ಕೆ ಹೆಚ್ಚಿನ ಚೈತನ್ಯ ತುಂಬಿದರು.

ರಾಮಾನುಜರ (೧೦೧೭-೧೧೩೭) ಕಾಲದಲ್ಲಿ ಅದ್ವೈತದ ತಪ್ಪು ವ್ಯಾಖ್ಯಾನದಿಂದಾಗಿ ಅದರ ಅಪಪ್ರಯೋಗವಾಗಿತ್ತು. ಜ್ಞಾನ, ಭಕ್ತಿಗಳ ಮಧ್ಯೆ ಸಮತೋಲನದ ಅಗತ್ಯದ ಹಿನ್ನೆಲೆಯಲ್ಲಿ ರಾಮಾನುಜರ ಉದಯವಾಯಿತು. ಚೆನ್ನೈ ಸಮೀಪದ ಪೆರಂಬುದೂರಿನಲ್ಲಿ ಜನಿಸಿದ ಅವರು ಬಾಲ್ಯದಲ್ಲೇ ತಂದೆ ಕಳೆದುಕೊಂಡರು. ಪೆರಂಬುದೂರಿನಿಂದ ಕಂಚಿಗೆ ಅವರ ಸಂಸಾರವು ಸ್ಥಳಾಂತರಗೊಂಡಿತು. ಅಲ್ಲಿ ಉನ್ನತ ವ್ಯಾಸಂಗವನ್ನು ಮಾಡಿ ಮಹಾವಿದ್ವಾಂಸರಾದರು. ಗುರು ಯಾದವ ಪ್ರಕಾಶರಿಂದ ವೇದಾಂತದ ಬೋಧನೆ ನಡೆಯಿತು. ಭಕ್ತಿಯಿಲ್ಲದ ಅದ್ವೈತದಿಂದ ಪ್ರಯೋಜನವಿಲ್ಲವೆನ್ನಿಸಿತು. ಯಾಮುನಾಚಾರ್ಯರೆಂಬ ವೈಷ್ಣವ

ಗುರುಗಳ ಶಿಷ್ಯರಾದರು. ಕಾಂಚೀಪೂರ್ಣ ಎಂಬ ಶೂದ್ರವರ್ಗದ ದೈವಭಕ್ತ ವ್ಯಕ್ತಿಯ ಜೊತೆ ಅವರು ಸಂಪರ್ಕ ಬೆಳೆಸಿದ್ದು ಕಾರಣವಾಗಿ ಅವರ ಪತ್ನಿ ಅವರಿಂದ ಬೇರೆಯಾದುದು ಅವರಲ್ಲಿ ವೈರಾಗ್ಯ ಮೂಡಿಸಿತು; ಕಾಂಚೀಪೂರ್ಣನನ್ನು ಶಿಷ್ಯನಾಗಿ ಸ್ವೀಕರಿಸಿದರು. ಶ್ರೀರಂಗದಲ್ಲಿ ವೈಷ್ಣವ ಗ್ರಂಥಾಭ್ಯಾಸ ಮಾಡಿದ ಅವರಿಗೆ ಗೋಷ್ಠಿಪೂರ್ಣ ಗುರುಗಳಿಂದ ನಾರಾಯಣ ಸ್ತೋತ್ರದ ಅಷ್ಟಾಕ್ಷರೀ ಮಂತ್ರ ಬೋಧನೆಯಾಯ್ತು. ಆ ಮಂತ್ರವನ್ನು ಯಾರಿಗೂ ತಿಳಿಸಬಾರದೆಂದು ಗುರುಗಳ ಆಜ್ಞೆ ಇದ್ದರೂ ದೇವಾಲಯದ ಗೋಪುರದಿಂದ ಎಲ್ಲರಿಗೂ ತಿಳಿಯುವಂತೆ ಆ ಮಂತ್ರವನ್ನು ಘೋಷಿಸಿದರು. "ನಾನು ನರಕಕ್ಕೆ ಹೋದರೂ ಚಿಂತೆಯಿಲ್ಲ- ಎಲ್ಲರಿಗೂ ಮುಕ್ತಿ ದೊರೆತರೆ ಸಾಕು" ಎಂದು ಹೇಳಿದರು. ಇದರಿಂದ ಗುರುಗಳು ಕಕ್ಕಾಬಿಕ್ಕಿಯಾದರು. ಅವರು ಬಾದರಾಯಣನ ಬ್ರಹ್ಮಸೂತ್ರದ ಮೇಲೆ "ಶ್ರೀ ಭಾಷ್ಯ" ಬರೆದರು. ಅದರ ಪ್ರತಿಪಾದನೆಗಾಗಿ ದೂರದ ಕಾಶ್ಮೀರಕ್ಕೂ ಹೋಗಿ ಬಂದರು. ಅವರ ಕಾಲದ ಶೈವ ಮತಾಂಧ ಕುಲೋತ್ತುಂಗನಿಂದ ತಪ್ಪಿಸಿಕೊಂಡು ಕರ್ನಾಟಕದ ಮೇಲ್ಕೋಟೆಗೆ ಬಂದರು. ನೆಲದಲ್ಲಿ ಹೂತು ಹೋಗಿದ್ದ ವಿಷ್ಣು ವಿಗ್ರಹ ಪತ್ತೆಗೆ ದಲಿತರು ಸಹಾಯ ಮಾಡಿದ್ದರಿಂದ ಅವರಿಗೆ ಮೇಲ್ಕೋಟೆ ವಿಷ್ಣು ದೇವಾಲಯಕ್ಕೆ ವರ್ಷದಲ್ಲಿ ಮೂರು ದಿನ ಪ್ರವೇಶಾವಕಾಶ ಕಲ್ಪಿಸಿದರು. ಅವರ ಬೋಧನೆಯಲ್ಲಿ ಜ್ಞಾನದಷ್ಟೇ ವಿಷ್ಣುಭಕ್ತಿಗೂ ಪ್ರಾಧಾನ್ಯವಿತ್ತು. ಸಂಸ್ಕೃತ ಗ್ರಂಥಗಳ ತತ್ವ, ಆಳ್ವಾರರ ತಮಿಳು ಸ್ತೋತ್ರಗಳ ಸಮನ್ವಯ, ಅವರ ವಿಷ್ಣುಭಕ್ತಿ ಮತ್ತು ಜ್ಞಾನ ಮಾರ್ಗಗಳ ಸಮನ್ವಯವೇ ವಿಶಿಷ್ಟಾದ್ವೈತ ಸಿದ್ಧಾಂತ.

ಕ್ಷಾತ್ರ ತೇಜಸ್ಸು, ಬ್ರಹ್ಮ ತೇಜಸ್ಸುಗಳ ಸಮನ್ವಯದ ಹರಿಕಾರ ವಿದ್ಯಾರಣ್ಯರು ಒಂದಿಲ್ಲದೆ ಇನ್ನೊಂದು ವ್ಯರ್ಥವೆಂದು ನಂಬಿದ್ದರು. ೧೩-೧೪ನೇ ಶತಮಾನಗಳಲ್ಲಿ ಮುಸ್ಲಿಂ ಧಾಳಿಕೋರರಿಂದ ದಕ್ಷಿಣ ಭಾರತದಲ್ಲಿ ಸನಾತನ ಧರ್ಮಕ್ಕೆ ಅವನತಿ ಪ್ರಾಪ್ತವಾದಾಗ ಅದರ ಉದ್ಧಾರಕ್ಕಾಗಿ ತಪಸ್ಸು ಕೈಗೊಂಡರು; ಹಿಂದೂ ಸಾಮ್ರಾಜ್ಯ ಸ್ಥಾಪನೆಗೆ ಇಬ್ಬರು ಶೂರರು ಅವರಿಗೆ ಲಭ್ಯವಾದರು- ಅವರೇ ಹಕ್ಕ ಬುಕ್ಕ ಸೋದರರು. ಅವರ ಮಾರ್ಗದರ್ಶನದಲ್ಲಿ ಹಕ್ಕ-ಬುಕ್ಕರಿಂದ ಕ್ರಿ.ಶ. ೧೩೩೬ರಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯವಿಲ್ಲದೇ ಇದ್ದಿದ್ದರೆ ಹಿಂದೂಧರ್ಮವು ಸಂಪೂರ್ಣವಾಗಿ ನಾಶವಾಗಿ ಹೋಗುತ್ತಿತ್ತು. (But for Vijayanagar, Hinduism would have been reduced to a shadow and a mockery). ವಿಜಯನಗರ ಸಾಮ್ರಾಜ್ಯದ ರಾಜರನ್ನು "ಕರ್ನಾಟಕ ದೊರೆಗಳು" ಎಂದೇ ಶಾಸನಗಳು ಬಣ್ಣಿಸಿವೆ. ಅದು ಕರ್ನಾಟಕ ಸಾಮ್ರಾಜ್ಯವೂ ಹೌದು. ಹಂಪಿಯು ಆ ಸಾಮ್ರಾಜ್ಯದ ರಾಜಧಾನಿಯಾಯಿತು. ಆ ಕಾಲದಲ್ಲಿ ವಿರೂಪಾಕ್ಷ ದೈವವನ್ನು ಪಂಪಾನಗರದ ನಿಜವಾದ ಒಡೆಯನೆಂದೇ ನಂಬಿದ್ದುದನ್ನು ಮನ್ನಿಸಿದ ಹಕ್ಕ-ಬುಕ್ಕರಾದಿಯಾಗಿ ಮುಂದಿನ ಎಲ್ಲ ರಾಜರೂ ಅವನೇ ನಿಜವಾದ ರಾಜ, ತಾವು ಅವನ ಮನುಷ್ಯ ಪ್ರತಿನಿಧಿಗಳು ಎಂಬಂತೆ

ನಡೆದುಕೊಂಡರು. ವಿದ್ಯಾರಣ್ಯರು ಅದ್ವೈತ ಸಿದ್ಧಾಂತದ ಶ್ರೇಷ್ಠ ಪ್ರತಿಪಾದಕರಾಗಿದ್ದು ಶೃಂಗೇರಿ ಶಾರದಾಪೀಠದ ಗುರುಗಳೂ ಆಗಿದ್ದರು. ಅವರ ಸಮಾಧಿ ವಿರೂಪಾಕ್ಷ ದೇವಾಲಯದ ಹಿಂಬದಿಯಲ್ಲಿದೆ.

ಹನ್ನೆರಡನೆಯ ಶತಮಾನದ ಸಮಾಜೋ ಧಾರ್ಮಿಕ ಆಂದೋಲನದ ಕೇಂದ್ರಬಿಂದು ಬಸವಣ್ಣನವರ (ಕ್ರಿ.ಶ. ೧೧೬೦) ಹೆಸರು ಸುಪ್ರಸಿದ್ಧ. ಬಿಜಾಪುರ ಜಿಲ್ಲೆಯ ಬಾಗೆವಾಡಿಯ (ಈಗಿನ ಬಸವನ ಬಾಗೇವಾಡಿ) ಮಾದರಸ ಮಾದಲಾಂಬಿಕೆಯರ ಪುತ್ರನಾಗಿ ಜನಿಸಿದ ಅವರು ಸ್ಮಾರ್ತ ಬ್ರಾಹ್ಮಣನಾಗಿದ್ದ ತಂದೆ ಉಪನಯನ ವಿಧಿಯ ಮೂಲಕ ಬಲವಂತವಾಗಿ ಧರಿಸುವಂತೆ ಮಾಡಿದ್ದ ಯಜ್ಞೋಪವೀತವನ್ನು ತೆಗೆದುಹಾಕಿ ತಮ್ಮ ತಂಗಿ ಅಕ್ಕನಾಗಮ್ಮನ ಜೊತೆ ಊರನ್ನು ತ್ಯಜಿಸಿ ಕೂಡಲ ಸಂಗಮಕ್ಕೆ ಹೋದರು. ಯಜ್ಞೋಪವೀತವು ಶಾಸ್ತ್ರಗಳ ಜಡ ಸಂಪ್ರದಾಯದ ಸಂಕೇತವಾಗಿತ್ತು ಮತ್ತು ಅದು ಇತರರಿಗಿಂತ ತಾನು ಉತ್ತಮವೆಂಬ ಭಾವನೆಯನ್ನು ಅದನ್ನು ಧರಿಸಿದವನಿಗೆ ತರುತ್ತಿತ್ತು. ಅವರು ಕರ್ಮಕ್ಕಿಂತ ಭಕ್ತಿ ಮುಖ್ಯವೆಂದೂ, ಎಲ್ಲರೂ ಸಮಾನವೆಂದೂ ನಂಬಿದ್ದರಿಂದ ಅವರು ಸಹಜವಾಗಿಯೇ, ಆದರೆ ಧೈರ್ಯದಿಂದ ಯಜ್ಞೋಪವೀತವನ್ನು ತಿರಸ್ಕರಿಸಿ ಸರ್ವಸಮಾನತೆಯನ್ನೂ ಕರ್ಮಕ್ಕಿಂತ (Rituals) ನಿರ್ಮಲ ಭಕ್ತಿಯ ಮಹತ್ವವನ್ನೂ ಪ್ರತಿಪಾದಿಸುತ್ತಿದ್ದ ವೀರಶೈವ ತತ್ವವನ್ನು ಒಪ್ಪಿಕೊಂಡು ಲಿಂಗಧಾರಿಯಾದರು. ಲಿಂಗವು ಒಳಗಿನ ಶಿವಶಕ್ತಿಯ ಸಂಕೇತ -ಅದನ್ನು ಯಾರು ಬೇಕಾದರೂ ಭಕ್ತಿಯಿಂದ ಧರಿಸಬಹುದಿತ್ತು. ಕೂಡಲ ಸಂಗಮದಲ್ಲಿ ಕೆಲವು ಕಾಲವಿದ್ದು ಅಲ್ಲಿಂದ ಕಲ್ಯಾಣಕ್ಕೆ (ಈಗಿನ ಬೀದರ್ ಜಿಲ್ಲೆಯ ಬಸವ ಕಲ್ಯಾಣ) ಹೋಗಿ ಅಲ್ಲಿ ದೊರೆ ಬಿಜ್ಜಳನ ಹತ್ತಿರ ರಾಜಭಂಡಾರಿಯಾದರು. ರಾಜಭಂಡಾರಿಯಾದರೂ ಅದರಿಂದ ಲಭ್ಯವಾದ ಸ್ಥಾನ, ಹಣ ಇವು ಅವರನ್ನು ದಿಕ್ಕು ತಪ್ಪಿಸಲಿಲ್ಲ. ಅವರು ಕಲ್ಯಾಣದ ಹೊರವಲಯದ ಸಂಬೋಳಿ ನಾಗಿದೇವನಂತಹ ಅಸ್ಪೃಶ್ಯನ ಮನೆಗೂ ಹೋಗಿ ಬಂದರು. ಅವರಿಗೆ ಬಡವಬಲ್ಲಿದ, ಸ್ಪಶ್ಯ-ಅಸ್ಪೃಶ್ಯ, ಪುರುಷ-ಸ್ತ್ರೀ ಎಂಬ ಭೇದವಿರಲಿಲ್ಲ. ಎಲ್ಲರೂ ಎಲ್ಲ ದೃಷ್ಟಿಗಳಿಂದಲೂ ಅವರಿಗೆ ಸಮಾನರು. ಶಿವಭಕ್ತರ ಕಿಂಕರ ನಾನು ಎಂದೇ "ಭಾವಿಸುತ್ತ ನಿರ್ಮಲ ಭಕ್ತಿಯಿಂದ ಶಿವಾರಾಧನೆ ಮಾಡುತ್ತಿದ್ದರು. ಅವರ ಹೆಸರು ಕೇಳಿದ ಸಾವಿರಾರು ಜನರು ಕಲ್ಯಾಣಕ್ಕೆ ಬಂದು, ಅಥವಾ ಅವರ ನಡೆ ನುಡಿ ಕೇಳಿ ಪ್ರಭಾವಿತರಾಗಿ ಶಿವಭಕ್ತರಾದರು. ಅವರು ಹರಳಯ್ಯ ಮಧುವಯ್ಯ ಎಂಬ ದಲಿತ ಮತ್ತು ಬ್ರಾಹ್ಮಣ ವರ್ಗಗಳ ಶಿವಭಕ್ತರ ಮಧ್ಯದ ವೈವಾಹಿಕ ಸಂಬಂಧಕ್ಕೆ ಒಪ್ಪಿಗೆ ನೀಡಿದ್ದು ಬಿಜ್ಜಳನ ಕೋಪಕ್ಕೆ ಕಾರಣವಾಯಿತು. ಅವನು ಹರಳಯ್ಯ ಮಧುವಯ್ಯರನ್ನು ನಿರ್ದಯವಾಗಿ ಕೊಲ್ಲಿಸಿದ್ದರಿಂದ ಬೇಸತ್ತು ಬಸವಣ್ಣನವರು ಕಲ್ಯಾಣ ತ್ಯಜಿಸಿ ಕೂಡಲಸಂಗಮಕ್ಕೆ ಹೋಗಿ ಅಲ್ಲಿ ಶಿವೈಕ್ಯರಾದರು. ಅವರ ನಾಯಕತ್ವದ ಶರಣ ಚಳವಳಿ ಅವರ ಕಾಲದಲ್ಲೇ ವ್ಯಾಪಕವಾಗಿ ಹರಡಿತು. ಆ ಚಳವಳಿಯ ಕ್ರಾಂತಿಕಾರಕ ತತ್ವಗಳು ಜನರಿಗೆ ಪ್ರಿಯವಾದವು. ಮೂಲ ಹಿಂದೂಧರ್ಮವು ಕಳೆದುಕೊಂಡಿದ್ದ ಉದಾತ್ತ ತತ್ವಗಳು ಅವರಿಂದ ಪುನರುಜ್ಜೀವನಗೊಂಡುವು. ಅವರು ಕನ್ನಡದಲ್ಲಿ ಬರೆದ ವಚನಗಳು ಅವರ ವ್ಯಕ್ತಿತ್ವವನ್ನು ಅಪ್ಪಟ

ಶಿವಭಕ್ತಿಯನ್ನು ಕ್ರಾಂತಿಕಾರಕ ತತ್ವಗಳನ್ನು ಬಿಂಬಿಸುತ್ತವೆ. ಕೇವಲ ವಿದ್ವಾಂಸರಿಗೆ ಮಾತ್ರ ಮೀಸಲಾಗಿದ್ದ ಸಾಹಿತ್ಯವನ್ನು ಸರಳಗೊಳಿಸಿ ನವೀಕೃತಗೊಳಿಸಿ ಕನ್ನಡ ಭಾಷೆಗೆ ಒಂದು ಹೊಸ ಆಯಾಮವನ್ನು ವಚನಸಾಹಿತ್ಯ ತಂದುಕೊಟ್ಟಿತು. ಅವರಿಂದ ಸ್ಫೂರ್ತರಾದ ರೈತರು, ಅಂಬಿಗರು, ನೇಕಾರರು, ಸ್ತ್ರೀಯರು (ಅವರ ಪತ್ನಿಯರಾದ ಗಂಗಾಂಬಿಕೆ, ನೀಲಾಂಬಿಕೆಯರೂ ವಚನಗಳನ್ನು ಬರೆದಿದ್ದಾರೆ), ದಲಿತರು, ಮಡಿವಾಳರು ಹೀಗೆ ಹಲವು ವೃತ್ತಿ ವರ್ಗಗಳಿಗೆ ಸೇರಿದ ಸಾಮಾನ್ಯರೂ ಸಾಹಿತ್ಯ ರಚನೆ ಮಾಡಿದರು. ಶುದ್ಧ ವಿಜ್ಞಾನದಂತಿದ್ದ (Pure Science) ವೀರಶೈವವು ಆನ್ವಯಿಕ ವಿಜ್ಞಾನವಾಗಿ (Applied Science) ಪರಿಣಮಿಸಿತು. ವಿಶ್ವದ ಆಂದೋಲನಗಳ ಚರಿತ್ರೆಯಲ್ಲಿ ಬಸವಣ್ಣನವರದು ಬಹು ಪ್ರಮುಖ ಹೆಸರು.

ಅತಿಬೌದ್ಧಿಕತೆಯು ಶುಷ್ಕ ಹೃದಯಕ್ಕೆ ದಾರಿಯಾದರೆ ಅತಿ ಭಾವುಕತೆ ಅಂಧಶ್ರದ್ಧೆಗೆ ಕಾರಣವಾಗುತ್ತದೆ. ಭಾರತೀಯ ತತ್ವಶಾಸ್ತ್ರದ ಬೌದ್ಧಿಕತೆ, ಭಾವುಕತೆಗಳಲ್ಲಿ ಸಾಮರಸ್ಯವನ್ನು ತಂದವರು ಮಧ್ವಾಚಾರ್ಯರು (೧೨೩೮-೧೩೧೭). ಮಂಗಳೂರು ಸಮೀಪದ ಪಾಜಕ ಗ್ರಾಮದ ಮಧ್ಯಗೇಹ ಭಟ್ಟರ ಮಗನಾಗಿ ಹುಟ್ಟಿದ ಇವರ ಬಾಲ್ಯದ ಹೆಸರು ವಾಸುದೇವ. ಬಾಲ್ಯದಲ್ಲೇ ಎಷ್ಟು ಬಹು ಪ್ರತಿಭಾಶಾಲಿಗಳಾಗಿದ್ದರೆಂದರೆ ಸಮಯ ಬಂದಾಗ ತಮ್ಮ ಗುರುಗಳನ್ನೇ ತಿದ್ದುತ್ತಿದ್ದರು. ಹದಿನಾರನೇ ವಯಸ್ಸಿನಲ್ಲಿ ಅಚ್ಯುತ ಪ್ರೇಕ್ಷರಿಂದ ಸನ್ಯಾಸವನ್ನು ಸ್ವೀಕರಿಸಿ ಅದ್ವೈತ ಬೋಧನೆ ಮಾಡಿದರು. ಅನಂದತೀರ್ಥ ಎಂಬುದು ಅವರ ಇನ್ನೊಂದು ಹೆಸರು. ಅವರು ಶಂಕರ ರಾಮಾನುಜರು ಅದ್ವೈತ, ವಿಶಿಷ್ಟಾದ್ವೈತಗಳನ್ನು ಆಳವಾಗಿ ಅಭ್ಯಾಸ ಮಾಡಿ ದಕ್ಷಿಣ ಭಾರತದ ತಮ್ಮ ಪ್ರವಾಸದಲ್ಲಿ ಹಲವು ವಿದ್ವಾಂಸರನ್ನು ಸೋಲಿಸಿದರೂ ಬೇರೊಂದು ಸಿದ್ಧಾಂತವು ಅಗತ್ಯವೆನ್ನಿಸಿತು. ಅದೇ ದ್ವೈತ ಸಿದ್ಧಾಂತ. ಉತ್ತರ ಭಾರತದ ಪ್ರವಾಸದ ಸಂದರ್ಭದಲ್ಲಿ ಬದರಿಕಾಶ್ರಮಕ್ಕೂ ಭೇಟಿ ನೀಡಿದ್ದರು. ಅವರ ಸಿದ್ಧಾಂತಕ್ಕೆ ಮಾರುಹೋದ ಅವರ ಗುರು ಅಚ್ಯುತ ಪ್ರೇಕ್ಷರೇ ಅವರ ಶಿಷ್ಯರಾದರು. ದ್ವೈತವು ವಾಸ್ತವ ವಾದವನ್ನು (Realism) ಪ್ರತಿಪಾದಿಸುತ್ತದೆ. ದೇವ, ಜೀವಗಳ ಭೇದವನ್ನು ಒಪ್ಪುತ್ತದೆ. ದೇವನು ಜಡನಾದ ಜೀವದಿಂದ ಬೇರೆ. ನಾರಾಯಣ ಅಥವಾ ವಿಷ್ಣುವೇ ಆತ್ಯಂತಿಕ ಸತ್ಯ; ಉಳಿದ ದೈವಗಳೆಲ್ಲ ನಾರಾಯಣ ಅರ್ಥಾತ್ ವಿಷ್ಣುವಿಗೆ ಅಧೀನರು. ಉಡುಪಿಯಲ್ಲಿ ಗೋಪೀಚಂದನವು ಮಣ್ಣಲ್ಲಿ ಹೂತುಹೋಗಿ ಅವರಿಗೆ ಲಭ್ಯವಾಗಿ ಅದರ ಜಾಗದಲ್ಲಿ ಕೃಷ್ಣಮೂರ್ತಿ ಸ್ಥಾಪಿಸಿದರು. ಅಲ್ಲಿ ಯಜ್ಞ ವಿಧಿಗಳ ಸುಧಾರಣೆ ಆಯ್ತು -ಪ್ರಾಣಿ ಬಲಿಯ ಬದಲು ಹಿಟ್ಟು ತುಪ್ಪದಲ್ಲಿ ಮಾಡಿದ ಪ್ರಾಣಿ ವಿಗ್ರಹಗಳ ಬಲಿ ನಡೆಯುವಂತೆ ಮಾಡಿದರು. ಕೃಷ್ಣ ಪೂಜೆಯು ನಿರಾತಂಕವಾಗಿ ನಡೆಯಲು ತಮ್ಮ ಎಂಟು ಜನರನ್ನು ಎಂಟು ಮಠಗಳಿಗೆ (ಆದಮಾರು, ಕಾಣಿಯೂರು, ಕೃಷ್ಣಾಪುರ, ಫಲಿಮಾರು, ಪೇಜಾವರ, ಪುತ್ತಿಗೆ, ಸಿರೂರು, ಸೋದೆ) ನೇಮಿಸಿ ಅವರಲ್ಲಿ ಪ್ರತಿಯೊಬ್ಬರಿಗೂ ಎರಡೆರಡು ವರ್ಷ ಕೃಷ್ಣ ಪೂಜೆಯ ಜವಾಬ್ದಾರಿ

ಹೊರಿಸಿದರು -ಇದು 'ಪರ್ಯಾಯ' ಹೆಸರಿನಲ್ಲಿ ನಿರಂತರವಾಗಿ ನಡೆಯುತ್ತಿದೆ. ಪುರಂದರ, ಕನಕರು ಮಾಧ್ವ ಪರಂಪರೆಗೆ ಸೇರಿದ ದಾಸರು.

ಕರ್ನಾಟಕ ಇಂತಹ ಶ್ರೇಷ್ಠ ಸಂತರ, ಭಕ್ತರ, ಚಿಂತಕರ ನೆಲೆವೀಡು ಅಥವಾ ಆಶ್ರಯಸ್ಥಾನ. ಇವರಿಂದಾಗಿ ಕರ್ನಾಟಕವು ದಿವ್ಯಾರಣ್ಯವೆನ್ನಿಸಿದೆ. ಇವರಲ್ಲದೆ ಕರ್ನಾಟಕವು ಶ್ರೇಷ್ಠ ಕವಿಗಳಿಗೆ ಜನ್ಮವಿತ್ತ ನಾಡೂ ಹೌದು. ರನ್ನ (೯೯೩) ಬಳೆಗಾರ ವೃತ್ತಿಯ ಜೈನಧರ್ಮದ ಜಿನವಲ್ಲಭ ಮತ್ತು ಅಬ್ಬಣಬ್ಬೆಯರಿಗೆ ಮಗನಾಗಿ ಬಿಜಾಪುರ ಜಿಲ್ಲೆ ಮುಧೋಳದಲ್ಲಿ ಜನಿಸಿದ. ವಿದ್ಯೆ ಪಡೆಯಲು ಅವನು ದಕ್ಷಿಣ ಕರ್ನಾಟಕದ ಗಂಗಮಂಡಲಕ್ಕೆ ಹೋಗಿ ಅಲ್ಲಿ ಗಂಗರ ಬಳಿ ಅಧಿಕಾರಿಯಾಗಿದ್ದ ಚಾವುಂಡರಾಯನ (ಇವನೇ ಗೊಮ್ಮಟ ವಿಗ್ರಹ ಕೆತ್ತಿಸಿದ್ದು) ಆಶ್ರಯ ಪಡೆದ. ಅವನು ಅಂದು ಶ್ರೇಷ್ಠ ಜೈನ ಕೇಂದ್ರವಾಗಿದ್ದ ಶ್ರವಣ ಬೆಳ್ಗೊಳದಲ್ಲಿ ಅಜಿತಸೇನ ಗುರುಗಳ ಮಾರ್ಗದರ್ಶನದಲ್ಲಿ ಲೌಕಿಕ ಧಾರ್ಮಿಕ ಶಿಕ್ಷಣ ಪಡೆದು ಬಳಿಕ ತನ್ನ ಹುಟ್ಟೂರಿಗೆ ಹಿಂದಿರುಗುತ್ತಾನೆ (ಬಹು ಮುಖ್ಯ ಸಂಗತಿಯೆಂದರೆ, ಅವನ ಸ್ವಹಸ್ತಾಕ್ಷರ “ಶ್ರೀ ಕವಿರತ್ನ” ಎಂಬುದು ಶ್ರವಣಬೆಳ್ಗೊಳದ ಚಿಕ್ಕ ಬೆಟ್ಟದ ಮೇಲೆ ಕಲ್ಲಿನಲ್ಲಿ ದಾಖಲಾಗಿದೆ). ತನ್ನ ಧರ್ಮ ಮತ್ತು ಕಾವ್ಯಶಕ್ತಿಗಳ ಬಗ್ಗೆ ಅವನಿಗೆ ಅಪಾರವಾದ ವಿಶ್ವಾಸವಿತ್ತು. ಅವನು ತನ್ನನ್ನು “ಜಿನ ಸಮಯ ದೀಪಕ” (ಸಮಯ= ಮತ, ಧರ್ಮ) ಎಂದು, ವಾಗ್ದೇವಿಯ ಭಂಡಾರದ ಮುದ್ರೆಯನ್ನು ಒಡೆದ “ಸಾರಸ್ವತವೆನಿಪ ಕವಿ ರನ್ನನ್” ಎಂದು ಕರೆದುಕೊಂಡಿದ್ದಾನೆ. ತಾನೊಬ್ಬ ರತ್ನಪರೀಕ್ಷಕ ಎಂದು ತನ್ನ ಕೃತಿರತ್ನಗಳನ್ನು ಪರೀಕ್ಷಿಸುವುದೂ ಒಂದೇ, ಆದಿಶೇಷನ ಹೆಡೆಗಳ ರತ್ನಗಳನ್ನು ಪರೀಕ್ಷಿಸುವುದೂ ಒಂದೇ ಎಂದಿದ್ದಾನೆ. ಅದು ಎಂಥವರಿಗೂ ಅಸಾಧ್ಯ. ಅವನ ಮೂರು ಕೃತಿಗಳು ಲಭ್ಯವಾಗಿವೆ- 'ಸಾಹಸಭೀಮವಿಜಯ' ಅಥವಾ ಗದಾಯುದ್ಧವು ಭೀಮ ದುರ್ಯೋಧನರ ಗದಾಯುದ್ಧವನ್ನು ಕೇಂದ್ರವಸ್ತುವಾಗಿ ಹೊಂದಿದ್ದರೂ ಅವನು ಭಾರತ ಯುದ್ಧದ ಕೊನೆಯ ದಿನದ ವರ್ಣನೆಯ ನೆಪದಲ್ಲಿ ಅದರ ಪೂರ್ಣ ಕಥಾವಸ್ತುವನ್ನು ನೆನಪಿಸುತ್ತಾನೆ (ಇದು “ಸಿಂಹಾವಲೋಕನ ಕ್ರಮ”), ಯುದ್ಧದಲ್ಲಿ ದುರ್ಯೋಧನ ಸೋತು ಸಾವಿಗೆ ಈಡಾದರೂ ಅವನನ್ನು ಒಬ್ಬ “ಮಹಾನುಭಾವ” ಎಂಬಂತೆ ಅವನ ಶೌರ್ಯ ಸ್ವಾಭಿಮಾನಗಳನ್ನು ಚಿತ್ರಿಸಿದ್ದಾನೆ. ಅವನ ಅಂತ್ಯಕಾಲ ಹೃದಯಸ್ಪರ್ಶಿ. ಭೀಮ ಕಥಾನಾಯಕನಾಗಿದ್ದರೂ ದುರ್ಯೋಧನ ಇನ್ನೊಂದು ರೀತಿಯಲ್ಲಿ ನಮ್ಮ ಹೃದಯದಲ್ಲಿ ಉಳಿಯುತ್ತಾನೆ. ಕಲ್ಯಾಣ ಚಾಲುಕ್ಯ ಚಕ್ರವರ್ತಿ ಇಮ್ಮಡಿ ತೈಲಪನ ಮಗ ಇರಿವ ಬೆಡಂಗ ಸತ್ಯಾಶ್ರಯನು ಚೋಳರ ಮೇಲೆ ನಡೆಯಿಸಿದ ದಂಡಯಾತ್ರೆಯ ಶೌರ್ಯಕಾರ್ಯ ಅವನಿಗೆ ಪ್ರಚೋದನೆಯಾಗಿರಬೇಕು. ಇರಿವ ಬೆಡಂಗ ಸತ್ಯಾಶ್ರಯನನ್ನು ಭೀಮನನ್ನು ಅಭಿನ್ನವೆಂಬಂತೆ ಪರೋಕ್ಷವಾಗಿ ಚಿತ್ರಿಸಿರುವ ಈ ಕಾವ್ಯದಲ್ಲಿ ಭೀಮನಿಗೆ ಪಟ್ಟಾಭಿಷೇಕವಾಗುತ್ತದೆ; ಅವನೊಬ್ಬನಿಗೆ ಮಾತ್ರ ಪತ್ನಿಯಾಗಿದ್ದ ದ್ರೌಪದಿಯು ಪಟ್ಟದರಾಣಿ ಆಗುತ್ತಾಳೆ. ಕರ್ನಾಟಕದ ಹತ್ತನೆಯ ಶತಮಾನ ಒಂದು ಶೌರ್ಯದ ಸ್ವಾಭಿಮಾನದ ಯುಗ- ಅದರ ಅಭಿವ್ಯಕ್ತಿ ರನ್ನನ ಈ ಕಾವ್ಯದಲ್ಲಿದೆ. ಅವನ

ಇನ್ನೊಂದು ಕೃತಿ “ಅಜಿತಪುರಾಣ” ಅಥವಾ “ಅಜಿತ ತೀರ್ಥಂಕರ ಪುರಾಣತಿಲಕ.” ಇಮ್ಮಡಿ ತೈಲಪನ ದಂಡನಾಯಕ ನಾಗಿದೇವನ ಅಕಾಲ ಮೃತ್ಯುವಿನಿಂದ ದುಃಖಿತರಾದ ಅವನ ಪತ್ನಿಯರು ಅತ್ತಿಮಬ್ಬೆ ಗುಂಡಮಬ್ಬೆಯರಲ್ಲಿ ಗುಂಡಮಬ್ಬೆಯು ಸಹಗಮನ ಮಾಡಲು ಅಕ್ಕ ಅತ್ತಿಮಬ್ಬೆ ನಿರ್ಧರಿಸಿದ್ದನ್ನು ಬೇಡಿಕೊಂಡು ತಡೆದು ತಾನು ಸಹಗಮನ ಮಾಡುತ್ತಾಳೆ (ಅತ್ತಿಮಬ್ಬೆಗೆ ಒಬ್ಬ ಚಿಕ್ಕ ವಯಸ್ಸಿನ ಮಗ ಇರುತ್ತಾನೆ). ಸಹಗಮನ ಮಾಡದೇ ಉಳಿದ ಅತ್ತಿಮಬ್ಬೆ ಇಡೀ ಜೀವನವನ್ನು ಸ್ವ-ಇಚ್ಛೆಯ ಕಷ್ಟದ ಬೆಂಕಿಯಲ್ಲಿ ಕಳೆಯುತ್ತ ಹಲವು ಬಗೆಯ ದಾನಗಳನ್ನು ಮಾಡಿ “ದಾನ ಚಿಂತಾಮಣಿ” ಎಂಬ ಕೀರ್ತಿಗೂ ಪಾತ್ರಳಾಗುತ್ತಾಳೆ. ಅವಳೇ ರನ್ನನಿಂದ ಅಜಿತ ತೀರ್ಥಂಕರನ ಕತೆಯನ್ನು ಬರೆಯಿಸಿದ್ದು. ಈ ಚಂಪೂ ಕಾವ್ಯದಲ್ಲಿ ಆ ತೀರ್ಥಂಕರನ ಕಾಲದ ಸಗರ ಚಕ್ರವರ್ತಿಯ ಕತೆ ಬಹು ಮಾರ್ಮಿಕವಾಗಿದೆ. ಚಂಪೂ ಕಾವ್ಯದ ಇತಿಹಾಸದಲ್ಲಿ ಪಂಪನಿಗೆ ದ್ವಿತೀಯ ಸ್ಥಾನದಲ್ಲಿ ನಿಲ್ಲುವ ಕವಿ ರನ್ನ.

ಷಡಕ್ಷರಿಯು (೧೫೬೫) ಮಳವಳ್ಳಿ ತಾಲೂಕಿನ ದನುಗೂರಿನ ಪ್ರಸಿದ್ಧ ವೀರಶೈವ ಕವಿ. ಅವನ ಗುರು ಚಿಕವೀರ ದೇಶಿಕನು ಮೈಸೂರು ದೊರೆ ಚಿಕ್ಕದೇವರಾಜ ಒಡೆಯರ ತಾಯಿ ಅಮೃತಾಂಬೆಯ ತೌರಿನವರ ಗುರುವೂ ಆಗಿದ್ದ. ರಾಜಶೇಖರ ವಿಳಾಸ, ಶಬರ ಶಂಕರ ವಿಳಾಸ, ಬಸವರಾಜ ವಿಜಯ ಎಂಬ ಕನ್ನಡ ಚಂಪೂ ಕೃತಿಗಳು, ಸಂಸ್ಕೃತದಲ್ಲಿ ಕವಿ ಕರ್ಣರಸಾಯನ ಎಂಬ ಕಾವ್ಯಗಳಲ್ಲದೆ ಆ ಎರಡೂ ಭಾಷೆಗಳಲ್ಲಿ ಹದಿನೆಂಟು ಕೃತಿ ರಚಿಸಿರುವ ಶ್ರೇಷ್ಠ ಕನ್ನಡ, ಸಂಸ್ಕೃತಗಳ ವಿದ್ವತ್ಕವಿ ಷಡಕ್ಷರಿ. “ಉಭಯ ಕವಿ ವಿಶಾರದ” ಎಂಬ ಬಿರುದಿನ ಅವನು ತನ್ನ ಕಾವ್ಯಗಳಲ್ಲಿ ಹಿಂದಿನ ಹರಿಹರ, ರಾಘವಾಂಕ, ಭೀಮಕವಿ. ಪಾಲ್ಕುರಿಕೆ ಸೋಮನಾಥರನ್ನು ಸ್ಮರಿಸಿದ್ದಾನೆ. ಅವನ ಸಮಾಧಿ ಯಳಂದೂರಿನಲ್ಲಿದೆ. ಅವನ ರಾಜಶೇಖರ ವಿಳಾಸವು ಶಿವಭಕ್ತ ದೊರೆ ಸತ್ಯೇಂದ್ರ ಚೋಳನ ಮಗ ರಾಜಶೇಖರನ ಕತೆ. ರಾಜಶೇಖರನ ಮಿತ್ರನ ಕುದುರೆಗೆ ಶಿವಭಕ್ತೆ ತಿರುಕೊಳವಿನಾಚಿಯ ಮಗ ಸಿಲುಕಿ ಸತ್ತಾಗ ಆ ಶಿವಭಕ್ತೆ ತಾಯಿಯ ಪ್ರಲಾಪ ಕೇಳಿ ಸತ್ಯೇಂದ್ರ ಚೋಳನು ತನ್ನ ಮಗ ರಾಜಶೇಖರನ ಶಿರಚ್ಛೇದನ ಮಾಡಿಸುತ್ತಾನೆ. ಅವನ ತಲೆ ಬುರುಡೆಯ ಶಿವಮಂತ್ರ ಕೇಳಿ ಹಲವರು ತಮ್ಮ ಶಿರ ಕತ್ತರಿಸಿಕೊಳ್ಳುತ್ತಾರೆ. ಸತ್ಯೇಂದ್ರನೂ ಸೇರಿದಂತೆ, ಶಿವಭಕ್ತೆಯ ಮಗನ ಸಾವಿನಿಂದ ಹಲವರು ಪ್ರಾಯಶ್ಚಿತ್ತ ರೂಪವಾಗಿ ಪ್ರಾಣತ್ಯಾಗ ಮಾಡಿದ್ದರಿಂದ ಮೆಚ್ಚಿ ಶಿವ ಪ್ರತ್ಯಕ್ಷನಾಗಿ ಅವರೆಲ್ಲರಿಗೂ ಪ್ರಾಣದಾನ ಮಾಡುತ್ತಾನೆ. ಷಡಕ್ಷರಿಯದು ಸಂಸ್ಕೃತ ಮಿಶ್ರಿತ ಹಳಗನ್ನಡದ ಭಾಷೆ, ಕವಿಕರ್ಣ ರಸಾಯನವು ತಮಿಳುನಾಡಿನ ಸೌಂದರ ಚೋಳ ಎಂಬ ಶಿವಭಕ್ತನ ಕತೆ. ಪಂಪನ ಹತ್ತನೆಯ ಶತಮಾನದ ಗದ್ಯ ಪದ್ಯ ಮಿಶ್ರಿತ ಚಂಪೂ ಕಾವ್ಯದ ಯುಗ ಷಡಕ್ಷರಿಯಲ್ಲಿ ಮತ್ತೆ ಚಿಗುರಿತು.

ಪೊನ್ನ (೯೫೦) ಒಬ್ಬ ಜೈನ ಮಹಾಕವಿ. ರಾಷ್ಟ್ರಕೂಟ ಚಕ್ರವರ್ತಿ ಮೂರನೆಯ ಕಷನ ಆಸ್ಥಾನ ಕವಿಯಾಗಿದ್ದು “ಉಭಯ ಕವಿ ಚಕ್ರವರ್ತಿ” ಎಂಬ ಬಿರುದು ಪಡೆದಿದ್ದ. ಅವನಿಗೆ ರನ್ನನಂತೆಯೇ ತನ್ನ ಧರ್ಮದ

ಬಗ್ಗೆ ಹಾಗೆಯೇ ತನ್ನ ಕವಿತಾ ಸಾಮರ್ಥ್ಯದ ಬಗ್ಗೆ ಆತ್ಮ ವಿಶ್ವಾಸವಿದ್ದಿತು. ಅವನ ಚಂಪೂ "ಶಾಂತಿ ಪುರಾಣ" ಶಾಂತಿನಾಥ ತೀರ್ಥಂಕರನ ಕತೆ. ದಾನಚಿಂತಾಮಣಿ ಅತ್ತಿಮಬ್ಬೆ ಈ ಕೃತಿಯ ಸಾವಿರ ಓಲೆಗರಿ ಪ್ರತಿಗಳನ್ನು ಪ್ರತಿಮಾಡಿಸಿ ಸುವರ್ಣ ಜಿನ ಪ್ರತಿಮೆ ಸಮೇತ ಉಚಿತವಾಗಿ ಹಂಚಿದಳು. ಅದು ಜೈನ ತತ್ವಗರ್ಭಿತವಾಗಿ "ಪುರಾಣ ಚೂಡಾಮಣಿ" ಎಂಬ ಕೀರ್ತಿಯನ್ನು ಪಡೆಯಿತು. ಅವನ "ಭುವನೈಕ ರಾಮಾಭ್ಯುದಯ" ಕಾವ್ಯವು ಅಲಭ್ಯ -ಆದರೆ ಅಲ್ಲಿಯ ಕೆಲವು ಪದ್ಯಗಳು ಮುಂದಿನ ಬೇರೆ ಬೇರೆ ಸಂಗ್ರಹಗಳಲ್ಲಿ ಲಭ್ಯವಿವೆ. ಪಂಪನ "ಪಂಪಭಾರತ'ದಂತೆ ಇದು ಬಹುಶಃ ಲೌಕಿಕ ಕಾವ್ಯ. ಅವನ ಜಿನಾಕ್ಷರ ಮಾಲೆಯ ಜಿನಸ್ತೋತ್ರದ ೩೯ ಕಂದ ಪದ್ಯಗಳಲ್ಲಿ ಪ್ರತಿಯೊಂದೂ ಕಕಾರದಿಂದ ಆಕಾರದವರೆಗಿನ ಅಕ್ಷರದಿಂದ ಆರಂಭವಾಗುತ್ತದೆ.

ಪಂಪ (೯೪೧-೪೨) ಕನ್ನಡದ ಆದಿಕವಿಯೆಂದೇ ಪ್ರಸಿದ್ಧ (ಅವನಿಗಿಂತ ಹಿಂದೆ ಹಲವು ಕಾವ್ಯಗಳು ರಚನೆಯಾಗಿದ್ದರೂ ಅವು ಇಂದು ಅಲಭ್ಯ). ೯೦೨-೦೩ರಲ್ಲಿ ಅವನು ಆಂಧ್ರಪ್ರದೇಶದ ವೆಂಗಿಮಂಡಲದ ಭೀಮಪಯ್ಯ ಮತ್ತು ಅಬ್ಬಣಬ್ಬೆಯರ ಹಿರಿಯ ಮಗನಾಗಿ ಜನಿಸಿದ. ಅವನ ತಾಯಿ ಅಬ್ಬಣಬ್ಬೆ ತಿರುಳ್ಗನ್ನಡದ ನಾಡು ಎಂದೇ ಪ್ರಸಿದ್ಧವಾಗಿದ್ದ ಕರ್ನಾಟಕದ ಅಣ್ಣಿಗೆರೆಯವಳು. ಪಂಪ ತನ್ನ ತಾಯಿಯ ತೌರೂರಿನಲ್ಲಿ ಹುಟ್ಟಿ ಅಲ್ಲೇ ಕೆಲವು ಕಾಲ ಬೆಳೆದು ಅಲ್ಲಿಯ ಆಡುಭಾಷೆ ಮತ್ತು ಬರಹದ ಭಾಷೆ ಕನ್ನಡವನ್ನು ಸಹಜವಾಗಿಯೇ ಕರಗತಗೊಳಿಸಿಕೊಂಡದ್ದರಿಂದ ಅವನು ತೆಲುಗು ಭಾಷೆಯ ನಾಡಲ್ಲಿ ತನ್ನ ಕೃತಿ ರಚನೆ ಮಾಡಿದರೂ ತನ್ನದು "ಸಾಜದ ಪುಲಿಗೆರೆಯ ತಿರುಳ್ಗನ್ನಡ" (ಪುಲಿಗೆರೆ=ಅಣ್ಣಿಗೆರೆ ಸಮೀಪದ ಇಂದಿನ ಲಕ್ಷ್ಮೇಶ್ವರ) ಭಾಷೆ ಎಂದೇ ಹೇಳಿಕೊಂಡಿದ್ದಾನೆ. ಅವನ ತಂದೆ ಹುಟ್ಟಿನಿಂದ ಬ್ರಾಹ್ಮಣನಾಗಿ ಮುಂದೆ ಜೈನಧರ್ಮಕ್ಕೆ ಮನಸೋತು ಮತಾಂತರಗೊಳ್ಳುತ್ತಾನೆ. ಬಹುಶಃ ಪಂಪ ಹುಟ್ಟಿದಾಗ ಅವನ ತಂದೆ ಬ್ರಾಹ್ಮಣನಾಗಿದ್ದು ಅವನ ತಮ್ಮ ಜಿನವಲ್ಲಭ ಹುಟ್ಟುವ ಮೊದಲು ಮತಾಂತರಗೊಂಡಿದ್ದಿರಬಹುದು. ಹೀಗಾಗಿ ಪಂಪನಲ್ಲಿ ಬ್ರಾಹ್ಮಣ, ಜೈನ ಸಂಸ್ಕಾರಗಳೆರಡೂ ಮಿಳಿತವಾಗಿದ್ದುದರಿಂದ ಮಹಾಭಾರತ ಮತ್ತು ಆದಿಪುರಾಣ ಕತೆಗಳನ್ನು ಕಥಾವಸ್ತುವಾಗಿ ಮಾಡಿಕೊಂಡ. ಚಾಳುಕ್ಯ ವಂಶದ ಎರಡನೆಯ ಅರಿಕೇಸರಿ ಇವನಿಗೆ ಆಶ್ರಯ ನೀಡಿದ. (ಇವನೊಬ್ಬ ಸಾಮಂತ ದೊರೆ). ಅವನಿಗೆ "ಗುಣಾರ್ಣವ" ಎಂಬ ಬಿರುದಿದ್ದುದರಿಂದ ಪಂಪನಿಗೆ ಅವನು "ಕವಿತಾ ಗುಣಾರ್ಣವ" ಎಂಬ ಬಿರುದು ನೀಡಿದ್ದ. ಅವನು ಚಕ್ರವರ್ತಿಯಲ್ಲವಾದ್ದರಿಂದ ಕವಿಗೆ "ಕವಿಚಕ್ರವರ್ತಿ" ಎಂಬ ಅನ್ವರ್ಥ ಬಿರುದನ್ನು ಕೊಡುವ ಸ್ಥಾನದಲ್ಲಿರಲಿಲ್ಲ (ಪೊನ್ನ, ರನ್ನ, ಜನ್ನರು ಅಧಿಕೃತವಾಗಿ "ಕವಿ ಚಕ್ರವರ್ತಿ"ಗಳು).

ಪಂಪನ "ಆದಿಪುರಾಣ" ಚಂಪೂ ಕಾವ್ಯವು ಜೈನರ ಇಪ್ಪತ್ತು ನಾಲ್ಕು ತೀರ್ಥಂಕರರಲ್ಲಿ ಮೊದಲನೆಯವನಾದ ಆದಿವೃಷಭ ತೀರ್ಥಂಕರನ ಜೀವನ ಸಾಧನೆಗೆ ಸಂಬಂಧಿಸಿದ್ದು. ಸಂಸಾರವೆಂಬ ಸಾಗರದಲ್ಲಿ ಮುಳುಗಿರುವ ಮನುಷ್ಯನನ್ನು ಮೇಲೆತ್ತಿ ಮುಕ್ತಿಗೆ ಕೊಂಡೊಯ್ಯುವ ಶಕ್ತಿ ಇರುವ "ಧರ್ಮ"

ಮಾತ್ರವೆಂದರೆ ದಯೆ, ದಾನ, ತಪ, ಶೀಲಗಳು- ಎಂಬ ಪಂಪನ ಉಕ್ತಿ "ಧರ್ಮ" ಪದದ ನಿಜವಾದ ಅರ್ಥವನ್ನು ಧ್ವನಿಸುತ್ತದೆ. ಜಿನೇಂದ್ರ ಸ್ತುತಿಯಿಂದ ಕೀರ್ತಿ; ಧನ ದೊರಕದಿದ್ದರೂ ಅದರಿಂದ ತನಗೆ ಮುಕ್ತಿ ಮಾತ್ರ ಖಂಡಿತ ಎಂದಿದ್ದಾನೆ. ಆದಿಪುರಾಣದಲ್ಲಿ ವೃಷಭ ತೀರ್ಥಂಕರನ ಕಾಲದ ಚಕ್ರವರ್ತಿ ಭರತ, ಅವನ ತಮ್ಮ ಬಾಹುಬಲಿಯರ ಕತೆ ಅತ್ಯಂತ ರೋಚಕ "ಆದಿಪುರಾಣ"ದ ಅತ್ಯಂತ ರಸವತ್ತಾದ ಭಾಗಗಳಲ್ಲಿ ಅದೂ ಒಂದು. ಸಕಲ ಭೂಮಂಡಲ ಅಧಿಪತಿಯಾಗಿದ್ದರೂ ಚಕ್ರವರ್ತಿ ಭರತ ತಮ್ಮನಿಗೆ ಒಂದು ಚಿಕ್ಕ ರಾಜ್ಯವನ್ನು ಸ್ವತಂತ್ರವಾಗಿ ಆಳಲು ಅವಕಾಶಕೊಡದೆ ಅದನ್ನು ಸ್ವಾಧೀನಪಡಿಸಿಕೊಳ್ಳಲು ಯತ್ನಿಸಿದಾಗ ಅವನ ತಮ್ಮ ಬಾಹುಬಲಿ ಯುದ್ಧದಲ್ಲಿ ಭರತನನ್ನು ಸೋಲಿಸಿ ತನ್ಮೂಲಕ ಇಡೀ ಭೂಮಂಡಲದ ಅಧಿಪತಿಯಾದರೂ ಭೋಗಾಪೇಕ್ಷೆಯನ್ನು ಕೈಬಿಟ್ಟು ವೈರಾಗ್ಯಪರನಾಗಿ ಆ ಭೂಮಂಡಲವನ್ನು ವಾಪಸ್ ಭರತನಿಗೇ ದಾನಮಾಡಿ ಸನ್ಯಾಸಿಯಾಗುತ್ತಾನೆ; ಭರತನನ್ನು ಗೆದ್ದರೂ ಆ ಗೆಲುವಿಗಿಂತ ತನ್ನ ಮನಸ್ಸನ್ನು ಗೆಲ್ಲುವುದು ಮುಖ್ಯ, ಮನೋ ಪ್ರಪಂಚದ ಮೇಲೆ ಹಿಡಿತ ಸಾಧಿಸಿಕೊಳ್ಳುವುದು ಮುಖ್ಯ ಎಂಬ ಅಪೂರ್ವ ತ್ಯಾಗದ ಕತೆಯಿಂದ ಪ್ರಚೋದಿತನಾಗಿ ಅದೇ ಶತಮಾನದ ಚಾವುಂಡರಾಯ ಶ್ರವಣಬೆಳ್ಗೊಳದಲ್ಲಿ ಬಾಹುಬಲಿಯ ಭವ್ಯ ವಿಗ್ರಹವನ್ನು ಸ್ಥಾಪಿಸಿದನೆಂದು ಕಾಣುತ್ತದೆ. ಶ್ರೇಷ್ಠ ಮಹಾಕಾವ್ಯ ಆದಿಪುರಾಣದ ಶಿಲ್ಪಕ್ಷೇತ್ರದ ಮಹತ್ವದ ಕೊಡುಗೆ ಗೊಮ್ಮಟ ಮೂರ್ತಿ.

ಅವನ ಧಾರ್ಮಿಕ ಕಾವ್ಯ ಆದಿಪುರಾಣವಾದರೆ 'ಲೌಕಿಕ' ಕಾವ್ಯ "ಪಂಪಭಾರತ." ಇಲ್ಲಿ ಎಂದರೆ 'ವಿಕ್ರಮಾರ್ಜುನ ವಿಜಯ'ದಲ್ಲಿ ಲೌಕಿಕವನ್ನು ಅಲ್ಲಿ ಅಂದರೆ ಈಗಾಗಲೇ ರಚಿಸಿರುವ ಆದಿಪುರಾಣದಲ್ಲಿ 'ಜಿನಾಗಮ'ವನ್ನು ಹೊಗಳುತ್ತೇನೆ ಎಂದು ಪಂಪ ಹೇಳಿಕೊಂಡಿದ್ದಾನೆ. ಕತೆಗೆ ಮೂಲ ವ್ಯಾಸರ ಸಂಸ್ಕೃತ ಮಹಾಭಾರತವಾದರೂ, ತನ್ನ ಭಾರತದಲ್ಲಿ ತನ್ನ ಕಾಲದ ಯುಗಧರ್ಮವನ್ನು (Ethos) ಹಿಡಿದಿಟ್ಟಿದ್ದಾನೆ - ಪೌರಾಣಿಕ ಕತೆಯು ಸಮಕಾಲೀನದ ಉಸಿರಾಡುವಂತೆ ಮಾಡುತ್ತಾನೆ. ಪಂಪನ ಕಾಲದ ಜೀವಂತ ಸಾಮಾಜಿಕ ಮೌಲ್ಯಗಳು ಅವನ ಕಾಲದ ಶಾಸನಗಳಲ್ಲಿ ಐತಿಹಾಸಿಕ ವ್ಯಕ್ತಿಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತವೆ. ಆ ಮೌಲ್ಯಗಳು ಚಲ, ನನ್ನಿ (=ಪ್ರಾಮಾಣಿಕತೆ, ನಿಷ್ಠೆ), ಶೌರ್ಯ, ಯುದ್ಧ ಕೌಶಲ, ಚಾಗ (=ತ್ಯಾಗ) ಇವೇ ಮೊದಲಾದ ಗುಣಗಳಿಗೆ ಸಂಕೇತವಾಗಿ ದುರ್ಯೋಧನ, ಕರ್ಣ, ಭೀಮ, ಭೀಷ್ಮ ಇವೇ ಮೊದಲಾದ ಪಾತ್ರಗಳು ಬಂದಿವೆ. ಪಂಪ ಹತ್ತನೆಯ ಶತಮಾನದ ಕರ್ನಾಟಕದ ಸಮಷ್ಟಿ ಮನಸ್ಸಿನ ಸಂಕೇತ -ಅವನೊಬ್ಬ ಮಹಾಕವಿ, ಚಂಪೂಯುಗದ ಆದ್ಯ ಪ್ರವರ್ತಕ. ಅವನು ಎಲ್ಲ ಅರ್ಥಗಳಲ್ಲಿಯೂ ಕರ್ನಾಟಕದ "ನಾಡೊವಜ" (=ನಾಡೋಜ, ನಾಡಿನ ಉಪಾಧ್ಯಾಯ ಅಥವಾ ಬೋಧಕ).

ಲಕುಮಿಪತಿ ಅಥವಾ ಲಕ್ಷ್ಮೀಶ (೧೫೫೦) ಕಡೂರು ತಾಲೂಕಿನ ದೇವನೂರಿನವನು. ವಾರ್ಧಕ ಷಟ್ಪದಿಯ ಅವನ "ಜೈಮಿನಿ ಭಾರತ"ವು ಸಂಸ್ಕೃತ ಜೈಮಿನಿ ಭಾರತವನ್ನು ಬಹುವಾಗಿ ಅನುಸರಿಸಿದೆ. ಈ

ಭಾರತದಲ್ಲಿ ಕೃಷ್ಣನೇ ಪ್ರಧಾನ: ಪಾಂಡವರ ಕತೆ ಆನುಷಂಗಿಕ. ಇದರಲ್ಲಿ ಪಾಂಡವರಲ್ಲದೆ ಕೃಷ್ಣಭಕ್ತರಾದ ವೃಷಕೇತು, ಯೌವನಾಶ್ವ, ನೀಲಧ್ವಜ, ಬಭ್ರುವಾಹನ, ಚಂದ್ರಹಾಸ ಮೊದಲಾದವರ ಕತೆಗಳಿವೆ. ಇದು ಒಂದು ರೀತಿಯಲ್ಲಿ "ಕೃಷ್ಣ ಚರಿತಾಮೃತ". ವಿಷ್ಣುಭಕ್ತಿ ಪಾರಮ್ಯವಿದ್ದರೂ ಶಿವನ ಬಗ್ಗೆಯೂ ಗೌರವ ತೋರಿದ್ದಾನೆ. ಸತ್ಯಭಾಮೆ, ಜ್ವಾಲೆ, ಪ್ರಭಾವತಿ, ಪ್ರಮೀಳೆ, ಸೀತೆ ಇತ್ಯಾದಿ ಸ್ತ್ರೀ ಪಾತ್ರ ಚಿತ್ರಣವೂ ಇದರಲ್ಲಿದೆ. ಉಪಮೆಗಳ ಬಳಕೆಯಲ್ಲಿ ಸಿದ್ಧಹಸ್ತ. ಲೌಕಿಕಕ್ಕಿಂತಲೂ ಆಧ್ಯಾತ್ಮಿಕತೆಯ ಕಡೆ ಅವನ ಒಲವು ಹೆಚ್ಚು. ಆಧುನಿಕ ಪೂರ್ವ ಕಾಲದಲ್ಲಿ ಕುಮಾರವ್ಯಾಸಭಾರತ, ಬಸವಪುರಾಣಗಳಂತೆ ಹಳ್ಳಿ ಹಳ್ಳಿಗಳಲ್ಲಿ ಗಮಕಿಗಳು ಅದನ್ನು ರಾಗವಾಗಿ ಪಠಿಸಿ ವ್ಯಾಖ್ಯಾನ ಮಾಡುತ್ತಿದ್ದರು. ಅದನ್ನು ಸರಿಯಾಗಿ ಓದಿ, ಬಿಡಿಸಿ ಅರ್ಥ ಹೇಳಿ ವ್ಯಾಖ್ಯಾನ ಮಾಡಿದರೆ ಅವನೊಬ್ಬ ವಿದ್ವಾಂಸನೆನ್ನಿಸಿಕೊಳ್ಳುತ್ತಿದ್ದ. ಒಂದು ರೀತಿಯಲ್ಲಿ ಅದು ಹಿಂದೆ ವಿದ್ವತ್ತಿನ ಒರೆಗಲ್ಲಾಗಿತ್ತು. ಜನ್ನ (೧೨೨೫) ಹಳೇಬೀಡು ಭಾಗದ 'ಸುಮನೋಬಾಣ' ಎಂಬ ಬಿರುದಿನ ಶಂಕರನಿಗೆ ಗಂಗಾದೇವಿಗೆ ಮಗನಾಗಿ ಜನಿಸಿದವನು. ಅವನ ಹೆಂಡತಿ ಲಕುಮಾಬಾಯಿ, ಸೋದರಳಿಯ ಹಳಗನ್ನಡದ ಪ್ರಸಿದ್ಧ ವ್ಯಾಕರಣ "ಶಬ್ದಮಣಿ ದರ್ಪಣ"ದ ಕರ್ತೃ ಕೇಶಿರಾಜ. ಗುರು ಇಮ್ಮಡಿ ನಾಗವರ್ಮ. ಬಹುಮುಖ ಪ್ರತಿಭೆಯ ಅವನಿಗೆ ಹೊಯ್ಸಳ ಇಮ್ಮಡಿ ಬಲ್ಲಾಳನಿಂದ "ಕವಿಚಕ್ರವರ್ತಿ" ಬಿರುದು ಸಂಪ್ರಾಪ್ತವಾಯಿತು. ಇಮ್ಮಡಿ ಬಲ್ಲಾಳನು ಚಾಳುಕ್ಯರನ್ನು ಸೋಲಿಸಿ "ಕರ್ನಾಟಕ ಚಕ್ರವರ್ತಿ" ಬಿರುದನ್ನು ಧರಿಸಿದ್ದರಿಂದ ಅವನಿಗೆ "ಕವಿ ಚಕ್ರವರ್ತಿ" ಬಿರುದನ್ನು ಕೊಡುವ ಸಾಮರ್ಥ್ಯವಿದ್ದಿತು. ಅವನ "ಯಶೋಧರ ಚರಿತೆ" ಕೇವಲ ಕಂದಪದ್ಯಗಳಿರುವ ಪುಟ್ಟ ಕಾವ್ಯ ಮತ್ತು ಸಂಸ್ಕೃತ "ಯಶೋಧರ ಚರಿತ" ಅದಕ್ಕೆ ಮೂಲ. ಮೂಲವನ್ನು ಬಹು ಅಚ್ಚುಕಟ್ಟಾಗಿ ಸ್ವತಂತ್ರ ಕಾವ್ಯವೆನ್ನುವಷ್ಟರ ಮಟ್ಟಿಗೆ ಸಹಜ ಕನ್ನಡ ಭಾಷೆಯಲ್ಲಿ ಅನುವಾದಿಸಿದ್ದಾನೆ. ಅವನ ಕಾವ್ಯದಲ್ಲಿ ದೇಸಿಯ ಸೊಬಗಿದೆ. "ಜೀವದಯೆ ಜೈನಧರ್ಮಂ" ಎಂಬ ಆ ಧರ್ಮದ ಪ್ರಧಾನ ತತ್ವದ ಪ್ರತಿಪಾದನೆ ಈ ಕಾವ್ಯದ ಉದ್ದೇಶ. ಯಶೋಧರ ಚಂದ್ರಮತಿಯರು ದೈವಕ್ಕೆ ಹಿಟ್ಟಿನ ಕೋಳಿ ಬಲಿಕೊಟ್ಟು ಪಾಪ ಕೃತ್ಯವನ್ನೆಸಗಿ ಹಲವು ಜನ್ಮಾಂತರಗಳನ್ನು ಪಡೆಯಬೇಕಾಯ್ತು. ಆ ಕಾವ್ಯದಲ್ಲಿ ಧರ್ಮ ವಿರುದ್ಧ ವಿಕೃತ ಪ್ರಣಯದ ಕತೆಯೂ ಇದೆ -ಎಂದರೆ ಸಾಮಾಜಿಕ ಸಮಸ್ಯೆಗಳಿಗೂ ಸ್ಪಂದಿಸಬಲ್ಲ ಕವಿಯಾಗಿದ್ದನು ಜನ್ನ. ಹದಿನಾಲ್ಕನೇ ತೀರ್ಥಂಕರ ಅನಂತನಾಥನ ಕತೆಯೇ ಪದ್ಯ ಗದ್ಯಗಳ ಮಿಶ್ರಣ ಚಂಪೂ ಕಾವ್ಯವಾದ ಅನಂತನಾಥ ಪುರಾಣ. ಇದೊಂದು ಬಹು ಪ್ರೌಢ ವಿದ್ವನ್ಮಾನ್ಯ ಭಾಷೆಯಲ್ಲಿ ರಚಿತವಾಗಿರುವ ಕಾವ್ಯ. ಇದರಲ್ಲಿ ಚಂಡಶಾಸನ ಕತೆಯು ಉಪಾಖ್ಯಾನ ರೂಪದಲ್ಲಿ ಕಾಣಿಸಿಕೊಂಡರೂ ಅದೇ ಪ್ರತ್ಯೇಕ ಖಂಡ ಕಾವ್ಯವಾಗಬಲ್ಲುದು. ಬದುಕಿನ ವಾಸ್ತವತೆಗೆ ಜನ್ನ ಕವಿ ಒಂದು ಹಿಡಿಗನ್ನಡಿ; ಮಧುರ ಕವಿ ಹೇಳುವಂತೆ ಕನ್ನಡ ಕಾವ್ಯದ ಸೀಮಾ ಪುರುಷರಲ್ಲಿ ಒಬ್ಬ.

ಈ ಪದ್ಯ ಖಂಡದಲ್ಲಿ ಎಲ್ಲ ಶ್ರೇಷ್ಠ ಕನ್ನಡ ಕವಿಗಳ ಹೆಸರು ಬರಲಾಗದಿದ್ದರೂ ಕುಮಾರವ್ಯಾಸನಂತಹ ಕವಿಯ ಬಗ್ಗೆ ಕುವೆಂಪು ಬೇರೆ ಗೀತವನ್ನು ಬರೆದು ತಮ್ಮ ಗೌರವವನ್ನು ಸಲ್ಲಿಸಿದ್ದಾರೆ ('ಕುಮಾರವ್ಯಾಸನು

ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು ಭಾರತ ಕಣ್ಣಲಿ ಕುಣಿಯುವುದು| ಮೈಯಲಿ ಮಿಂಚಿನ ಹೊಳೆ ತುಳುಕಾಡುವುದು|'). ಕರ್ನಾಟಕ ಕಂಡಿರುವ ಕವಿಗಳು ಅಥವಾ ರಸಋಷಿಗಳು ಕನ್ನಡ ಭಾಷೆಯ ಸತ್ವವನ್ನು ಹೆಚ್ಚಿಸಿದ್ದಾರೆ. ಕರ್ನಾಟಕದ ಅಭಿಮಾನವನ್ನು ಹಿಗ್ಗಿಸಿದ್ದಾರೆ.

ಮೇಲೆ ನೋಡಿದಂತೆ ಕರ್ನಾಟಕ ಹಲವು ರಸಋಷಿಗಳನ್ನು ಕಂಡಿದ್ದರೆ, ಭಾರತ ಹಲವು ಋಷಿಸದೃಶ ಸಂತರನ್ನು ಕಂಡಿದೆ (ಕರ್ನಾಟಕವೂ ಅಷ್ಟೇ). ನಾನಕ (೧೫೨೦) ಭಾರತದ ತೀರ ಈಚಿನ ಧರ್ಮಗಳಲ್ಲೊಂದಾದ ಸಿಖ್ ಪಂಥದ ಸ್ಥಾಪಕ (ಸಿಖ್ ಪಂಥ ಹಿಂದೂ ಧರ್ಮದಿಂದ ಭಿನ್ನ ಎಂಬ ವಾದವೂ ಇದೆ). ಈಗಿನ ಪಾಕಿಸ್ತಾನದ ಅಂದಿನ ಭಾರತದ ನಾನ್‌ಕಾನ್ ಎಂಬ ಊರಲ್ಲಿ ಜನಿಸಿದ ನಾನಕ್ ಪ್ರತಿಭಾಶಾಲಿಯಾಗಿದ್ದು ಬಾಲ್ಯದಲ್ಲೇ ಹಲವು ವಿದ್ಯಾಪಾರಂಗತನಾದ. ಯಜ್ಞೋಪವೀತ ಧಾರಣೆಯ ಸಮಯದಲ್ಲಿ ಅದರ ಆಧ್ಯಾತ್ಮಿಕ ಅರ್ಥದ ಬಗ್ಗೆ ಪದ್ಯ ಬರೆದ. ಹದಿನಾಲ್ಕನೇ ವಯಸ್ಸಿಗೇ ಮದುವೆ ಆದ ಅವನಿಗೆ ಇಬ್ಬರು ಗಂಡುಮಕ್ಕಳಿದ್ದರು. ದೌಲತ್‌ಖಾನ್ ಕೈಕೆಳಗೆ ಅಂಗಡಿ ನಿರ್ವಾಹಕನಾಗಿದ್ದು ಅವನ ವಿಶ್ವಾಸ ಗಳಿಸಿದ್ದ; ಮತ್ತು ತನ್ನ ಸಂಬಳದ ಬಹು ಭಾಗವನ್ನು ಬಡವರಿಗೆ ವಿತರಿಸುತ್ತಿದ್ದ. ಕಾಡಿನಲ್ಲಿ ಅವನು ಮೂರು ವರ್ಷ ತಪಸ್ಸನ್ನು ಆಚರಿಸಿ ನೊಂದ ಜೀವಿಗಳ ಸಾಂತ್ವನಕ್ಕಾಗಿ ಭಗವಂತನಿಂದ “ಗುರು"ವೆಂದು ನೇಮಕಗೊಂಡ. ಕಾಡಿನಿಂದ ಹಿಂದಿರುಗಿ ಎಲ್ಲವನ್ನೂ ತ್ಯಾಗಮಾಡಿ, ಹಿಂದೂ ಸಂತರ ಮುಸ್ಲಿಂ ಫಕೀರರ ಉಡುಪು ಧರಿಸಿ ಹಾಡುಗಳ ಮೂಲಕ ಭಗವಂತನ ಸಂದೇಶವನ್ನು ಸಾರಿದ. ಮರ್ದನ್ ಶೇಕ್ ಎಂಬ ದರೋಡೆಕೋರನನ್ನು ಮಾರ್ಪಡಿಸಿ ಸಿಖ್‌ನಾಗಿ ಮಾರ್ಪಡಿಸಿದ. (“ಸಿಖ್” ಎಂಬುದು ಸಂಸ್ಕೃತದ “ಶಿಷ್ಯ” ಪದದ ತದ್ಭವ).

ಬಸವಣ್ಣನವರಂತೆ ನಿಷ್ಫಲ ವ್ಯರ್ಥ ಕರ್ಮಾಚರಣೆಗಳನ್ನು ಖಂಡಿಸಿದ್ದಾನೆ. ಅವನು ಪ್ರತಿಪಾದಿಸಿದ ಸಿಖ್ ಧರ್ಮವು ಏಕದೇವೋಪಾಸನೆ ಮತ್ತು ಭಕ್ತಿ ಪಂಥಕ್ಕೆ ಹೆಚ್ಚು ಒಲವು ತೋರುತ್ತದೆ. ಇಸ್ಲಾಮಿನ ಆಕ್ರಮಣದಿಂದ ಹಿಂದೂ ಧರ್ಮವನ್ನು ಸಂರಕ್ಷಿಸುವುದು. ಅದರ ಮುಖ್ಯ ಧ್ಯೇಯವಾಗಿತ್ತು. ನಾನಕ್‌ನಿಂದ ಹಿಡಿದು ಗುರು ಗೋವಿಂದ ಸಿಂಗ್‌ನವರೆಗಿನ (೧೭೦೦) ಹತ್ತು ಗುರುಗಳ ಶಿಷ್ಯರು ತಾವು ಎಂದು ಸಿಖ್ಖರು ನಂಬುತ್ತಾರೆ. ಆ ಧರ್ಮದಲ್ಲಿ ಪುರುಷ ಸ್ತ್ರೀಯರಿಗೆ ಸಮಾನ ಸ್ಥಾನವಿದೆ. ಅವರಲ್ಲಿ ಜಾತಿಭೇದವಿಲ್ಲ. “ಓಂ” ಮಂತ್ರ ಪಠನೆಗೆ ಅಲ್ಲಿ ವಿಶೇಷ ಸ್ಥಾನವಿದೆ. ರಾಮಾನಂದನು (೧೪೮೦) ಮಧ್ಯಯುಗದ ಪ್ರಸಿದ್ಧ ಸಂತ. ಪ್ರಯಾಗದಲ್ಲಿ (ಅಲಹಾಬಾದ್) ಜನಿಸಿದ ಅವನು ವೈಷ್ಣವ ಪಂಥದ ಸನ್ಯಾಸಿ ರಾಘವಾನಂದರಿಂದ ಸನ್ಯಾಸ ದೀಕ್ಷೆ ಪಡೆದು ಕಾಶಿಯಲ್ಲಿ ತನ್ನ ಬದುಕನ್ನು ಕಳೆದ. ಕೃಷ್ಣ, ರಾಮ ಒಂದೇ ಆದರೂ ಅವನಲ್ಲಿ ರಾಮನಾಮ ಜಪಕ್ಕೆ ಹೆಚ್ಚಿನ ಮಹತ್ವ. ರಾಮ ಅವನಿಗೆ ಉಪನಿಷತ್ತಿನ ಬ್ರಹ್ಮನ್, “ಓಂ ನಮೋ ನಾರಾಯಣಾಯ" ಎಂಬ ಅಷ್ಟಾಕ್ಷರೀ ಮಂತ್ರದ ಬದಲು “ರಾಮ್ ರಾಮಾಯ ನಮಃ” ಎಂಬ ಅಷ್ಟಾಕ್ಷರೀ ಮಂತ್ರವನ್ನು ಒಪ್ಪಿದ.

ರಾಮಮಂತ್ರದ ಜಪವೇ ಅವನ ಬದುಕಿನ ಜೀವಾಳ. ಜಾತಿಭೇದ, ಸಾಮಾಜಿಕ ಸ್ಥಾನ ಇವುಗಳನ್ನು ಗಣಿಸದೆ ಎಲ್ಲರನ್ನೂ ಶಿಷ್ಯರನ್ನಾಗಿ ಮಾಡಿಕೊಂಡ. ಹುಟ್ಟು ಮುಸ್ಲಿಂ ಆದ ಕಬೀರ್, ಚಪ್ಪಲಿ ಹೊಲೆಯುವ ವೃತ್ತಿಯ ರಾಮದಾಸ್, ಕ್ಷೌರಿಕ ವೃತ್ತಿಯ ಸೇನಾ, ಪದ್ಮಾವತಿ ಮಹಿಳೆ ಅವನ ಶಿಷ್ಯ ಸಮೂಹದಲ್ಲಿ ಕೆಲವರು. ಸಿಖ್ಖರ ಧಾರ್ಮಿಕ ಗ್ರಂಥ "ಗ್ರಂಥ ಸಾಹೀಬ್"ನಲ್ಲಿ ಅವನ ಒಂದು ಹಿಂದಿ ಭಾಷೆಯ ಗೀತೆ ಸೇರಿದೆ. ಭಕ್ತಿಪಂಥದ ಬಹು ದೊಡ್ಡ ಹೆಸರು ಕಬೀರ; ಹಿಂದೂ ಮುಸ್ಲಿಂ ಸಮನ್ವಯದ ಶ್ರೇಷ್ಠ ಸಂಕೇತ. ಕೆರೆಯ ಬಳಿ ಎಸೆಯಲ್ಪಟ್ಟಿದ್ದ ಶಿಶುವನ್ನು ತಂದು ನೀರು, ನಿಮಾ ಎಂಬ ಮುಸ್ಲಿಂ ನೇಕಾರ ದಂಪತಿಗಳು ಸಾಕಿದರು -ಅವನೇ ಕಬೀರ್. ಬಾಲ್ಯದಿಂದ ಭಕ್ತಿಯನ್ನು ಬೆಳೆಸಿಕೊಂಡು, ರಮಾನಂದನ ಶಿಷ್ಯನಾಗಿ ವೈಷ್ಣವನಾದ. ಅವನ ಹಿಂದೂ ಜೀವನ ವಿಧಾನದಿಂದ ಸಮಕಾಲೀನ ಮುಸ್ಲಿಂ ಸಮುದಾಯಕ್ಕೆ ಬಹಳ ಅಸಮಾಧಾನ ಆಗಿತ್ತು. ಮುಂದೆ ಅವನೊಬ್ಬ ಸಂತ, ಮಹಾಪುರುಷ ಎಂಬ ಅರಿವು ಎಲ್ಲರಿಗೂ ಆಯ್ತು. ಮಹಾದ್ವೈವೀಪುರುಷನಾಗಿದ್ದ ಅವನು ಸಮಾಜ, ಧರ್ಮಗಳ ಎಲ್ಲೆಯನ್ನು ಮೀರಿ ಬೆಳೆದ. ಅವನಿಗೆ ಲೋರಿ ಎಂಬ ಪತ್ನಿಯಲ್ಲಿ ಕಮಾಲ್ ಎಂಬ ಮಗನೂ ಆಗಿ, ಅವನೂ ತಂದೆಯಂತೆ ಸಂತ ಆದ. ಈಗಿನ ಪಾಕಿಸ್ತಾನದ ಮಘರ್ ಎಂಬಲ್ಲಿ ಅವನು ನಿಧನನಾದಾಗ, ಅವನ ಸಮಾಧಿ ಬಗ್ಗೆ ಹಿಂದೂ ಮುಸ್ಲಿಮರ ಮಧ್ಯೆ ಜಗಳ ಆಗಿ, ಅವನ ಶವದ ಮುಸುಕು ತೆಗೆದಾಗ ಅಲ್ಲಿ ಬರೀ ಹೂ ಕಾಣಿಸಿತು. ಹಿಂದೂ ಮುಸ್ಲಿಮರಿಬ್ಬರೂ ಆ ಹೂವುಗಳನ್ನು ಹಂಚಿಕೊಂಡು ಮಂದಿರ, ಮಸೀದಿಗಳನ್ನು ಅಕ್ಕಪಕ್ಕದಲ್ಲಿ ಕಟ್ಟಿದರು. ಅವನ ಅವಧಿ ಭೋಜಪುರಿ ಭಾಷೆಯಲ್ಲಿರುವ ನೂರಾರು ಹಾಡುಗಳಲ್ಲಿ ಸಂತನೊಬ್ಬನ ಭಕ್ತಿಯ ಹೃದಯಧಾರೆ ಹರಿದಿದೆ. ಭಗವಂತ ಒಬ್ಬನೇ; ಅವನನ್ನು ಸಂಕೇತ ಅಥವಾ ಮೂರ್ತಿ ರೂಪವಾಗಿ ಪೂಜಿಸುವ ಅಗತ್ಯವಿಲ್ಲ; ಎಲ್ಲರಿಗೂ ಸಾಕ್ಷಾತ್ಕಾರವಾಗುತ್ತದೆ. ಭಕ್ತಿಯಿಂದ ಅವನನ್ನು ಧ್ಯಾನಿಸಿದರೆ; ಆಧ್ಯಾತ್ಮಿಕ ಸಾಧನೆಯಲ್ಲಿ ಗುರುವಿನ ಮಾರ್ಗದರ್ಶನ ಅಗತ್ಯ; ಹಿಂದೂ ಮುಸ್ಲಿಮರಿಗೆಲ್ಲರಿಗೂ ಭಕ್ತಿಮಾರ್ಗವು ಸಮಾನ; ಎರಡಕ್ಕೂ ಭೇದವಿಲ್ಲ; ಭಕ್ತಿಗೀತಗಳೆಲ್ಲ ಜನರ ಆಡು ಭಾಷೆಯಲ್ಲಿರಬೇಕು: ಇವು ಅವನ ಬೋಧನೆ. "ಸಂಸ್ಕೃತ್ ಕೂಪ್ ಜಲ್, ಭಾಷಾ ಬಹತಾ ನೀರ್" ಈ ಅವನ ಉಕ್ತಿ ಬಹು ಧ್ವನಿಪೂರ್ಣ, ಅರ್ಥಪೂರ್ಣ, ಸಂಸ್ಕೃತವು ಕೂಪಜಲ, ಬಾವಿಯ ನೀರು ಎಲ್ಲರಿಗೂ ಸುಲಭವಾಗಿ ಲಭ್ಯವಲ್ಲ. ಆಡು ಭಾಷೆಗಳು ("ಭಾಷಾ")ಹರಿಯುವ ನೀರು- ಎಲ್ಲರಿಗೂ ಎಲ್ಲ ರೀತಿಯ ಬಳಕೆಗೂ ಸುಲಭವಾಗಿ ಲಭ್ಯ. ಅವನ ಅನುಯಾಯಿಗಳು ಮುಂದೆ ಹಿಂದೂ ಧರ್ಮದ "ಕಬೀರ್ ಪಂಥಿ'ಗಳಾದರು. ಅವನ ಪ್ರಭಾವ ಮುಂದೆ ಗುರುನಾನಕ್ ಮೇಲೆ ಬಹಳ ಆಯ್ತು. ಅವನ ಭಕ್ತಿಗೀತೆಗಳ ಸಂಕಲನವೇ "ಬಿಜಕ್."

ಮೇಲಿನಂತಹ ಹಲವು ಶ್ರೇಷ್ಠ ಸಂತ ಕವಿಗಳನ್ನು, ಕವಿ ಸಂತರನ್ನು ಪಡೆದ ಕರ್ನಾಟಕ, ಭಾರತ ಧನ್ಯ, ಭಾರತ ಮಾತೆಗೆ ಜಯವಾಗಲಿ; ಕರ್ನಾಟಕ ಮಾತೆಗೆ ಜಯವಾಗಲಿ.

## “ತೈಲಪ ಹೊಯ್ಸಳರಾಳಿದ.....”

ತೈಲಪ ಹೆಸರಿನ ಮೂವರು ಕಲ್ಯಾಣ ಚಾಳುಕ್ಯ ದೊರೆಗಳಾಳಿದ್ದಾರೆ - ಅವರಲ್ಲಿ ಅತ್ಯಂತ ಪ್ರಸಿದ್ಧನಾದವನು ಇಮ್ಮಡಿ ತೈಲಪ (೯೯೫). ಅವನು ರನ್ನನಿಗೆ ರಾಜಾಶ್ರಯ ನೀಡಿದ ಇರಿವ ಬೆಡಂಗ ಸತ್ಯಾಶ್ರಯನ ತಂದೆ. “ಅಹವಮಲ್ಲ", “ಮಹಾರಾಜಾಧಿರಾಜ”, “ರಣರಂಗ ಭೀಷಣ”, “ಅಕಲಂಕರಾಮ” ಇತ್ಯಾದಿ ಬಿರುದುಗಳಿವೆ ಅವನಿಗೆ, ಸಾಮಂತನಾಗಿದ್ದ ಅವನು ಅಲ್ಲಿಯವರೆಗೆ ಚಕ್ರವರ್ತಿಗಳಾಗಿದ್ದ ರಾಷ್ಟ್ರಕೂಟರನ್ನು ಸೋಲಿಸಿ, ಸ್ವತಂತ್ರನಾಗಿ ಕಲ್ಯಾಣ ಚಾಲುಕ್ಯ ಸಾಮ್ರಾಜ್ಯವನ್ನು ಕಟ್ಟಿದ ರಾಷ್ಟ್ರಕೂಟರ ಎಲ್ಲ ಸಾಮಂತರೂ ಅವನಿಗೆ ವಿಧೇಯರಾದರು. ಮಾಳವದ ಪರಮಾರರನ್ನು ತಮಿಳುನಾಡಿನ ಚೋಳರನ್ನು ಸೋಲಿಸಿದ. ಗುಜರಾತಿನ ರಾಜನನ್ನು ಸೋಲಿಸಿ “ಗೂರ್ಜರ ಭಯಜ್ವರ” ಎಂಬ ಬಿರುದನ್ನು ಸಂಪಾದಿಸಿದ. ರನ್ನನಿಗೆ ಮೊದಲು ಆಶ್ರಯ ನೀಡಿದವನು. ರನ್ನನು ತನ್ನ “ಸಾಹಸ ಭೀಮವಿಜಯ'ದಲ್ಲಿ ಭೀಮ ಮತ್ತು ಇರಿವಬೆಡಂಗ ಸತ್ಯಾಶ್ರಯರನ್ನು ಅಭೇದವಾಗಿ ಕಲ್ಪಿಸಿ ಕಾವ್ಯ ಬರೆದಿದ್ದರೂ ಅಲ್ಲಿ ತೈಲಪನನ್ನು ಬಹುವಾಗಿ ಪ್ರಶಂಸಿಸಿದ್ದಾನೆ. ರನ್ನನಿಗೆ “ಕವಿಚಕ್ರವರ್ತಿ” ಬಿರುದನ್ನು ನೀಡಿದವನೇ ತೈಲಪ ಎಂಬ ವಾದವೂ ಇದೆ. ರಾಷ್ಟ್ರಕೂಟರ ೨ನೇ ಕೃಷ್ಣನ ಮಗಳು ಇವನ ಪತ್ನಿ. ಕಲ್ಯಾಣ ಚಾಲುಕ್ಯ ಚಕ್ರವರ್ತಿಗಳಲ್ಲಿ ಇವನಿಗೆ ವಿಶೇಷ ಸ್ಥಾನವಿದೆ. “ಹೊಯ್ಸಳ”ರನ್ನು ತೈಲಪನ ಜೊತೆ ಸೇರಿಸಿ ಇಬ್ಬರೂ ಕರ್ನಾಟಕದ ಹೆಮ್ಮೆಯ ರಾಜರು ಎಂದು ಕುವೆಂಪು ಸೂಚಿಸಿದ್ದಾರೆ. “ಹೊಯ್ಸಳ” ಎಂಬುದು ರಾಜಮನೆತನದ ಹೆಸರು. (೧೧ ಶ, -೧೪ ಶ.), ಹುಲಿಯೊಂದು ವಾಸಂತಿಕಾ ದೇವಾಲಯಕ್ಕೆ ನುಗ್ಗಿದಾಗ ಜೈನಯತಿ ಸುದತ್ತಾಚಾರ್ಯರು ತಮ್ಮ ಕೈಲಿದ್ದ ಕೋಲು ಕೊಟ್ಟು “ಪೊಯ್ ಸಳ” ಎಂದು ಆಜ್ಞೆ ಮಾಡಿದಾಗ ಸಳನು ಧೈರ್ಯದಿಂದ ಆ ಕೋಲಿನಿಂದ ಹೊಡೆದು ಹುಲಿಯನ್ನು ಕೊಂದನೆಂದೂ, ಅವನಿಂದ ಪೊಯ್ಸಳ ಅಥವಾ ಹೊಯ್ಸಳ ವಂಶ ಸ್ಥಾಪಿತವಾಯಿತೆಂದೂ ಕತೆಯಿದೆ. ಸಳನು ಹುಲಿಯೊಡನೆ ಹೋರಾಡುತ್ತಿರುವ ಚಿತ್ರವೇ ಹೊಯ್ಸಳರ ರಾಜಲಾಂಛನ. ಆ ವಂಶದ ದೊರೆಗಳಲ್ಲಿ ವಿಷ್ಣುವರ್ಧನ ಪ್ರಸಿದ್ಧ -ಕುವೆಂಪು ಅವರ ಮನಸ್ಸಿನಲ್ಲಿ “ಹೊಯ್ಸಳ” ಎಂದರೆ ಬಹುಶಃ ವಿಷ್ಣುವರ್ಧನ (೧೧೪೦) ಆಗಿರಬೇಕು ಎಂಬುದು ಸಾಧಾರ ಊಹೆ. ಇವನು ಚೋಳ ಚಾಳುಕ್ಯರನ್ನು ಸೋಲಿಸಿ ಅವರ ಜೊತೆ ಮೂರನೆಯ ಶಕ್ತಿಯಾಗಿ ಬೆಳೆದ. ಮುಂದಿನ ಇನ್ನೂರು ವರ್ಷಗಳ ಹೊಯ್ಸಳರ ಆಳಿಕೆಗೆ ಇವನು ಕಾರಣ. ಇವನು ನೀಲಗಿರಿ ಮೇಲೆ ಹೊಯ್ಸಳ ಧ್ವಜ ಹಾರಿಸಿದ. ಚೋಳರ ಭದ್ರಕೋಟೆಯಾಗಿದ್ದ ತಲಕಾಡು ಇವನ ವಶಕ್ಕೆ ಬಂದಿತು. ದಕ್ಷಿಣದ ಕೊಯಮತ್ತೂರಿನಿಂದ ಉತ್ತರದ ಮಲಪ್ರಭಾ ನದಿಯವರೆಗೆ ಇವನ ಸಾಮ್ರಾಜ್ಯ ವ್ಯಾಪಿಸಿತ್ತು. ಜೈನನಾಗಿದ್ದ ಇವನು ರಾಮಾನುಜರ ಪ್ರಭಾವಕ್ಕೆ ಸಿಲುಕಿ ಶ್ರೀವೈಷ್ಣವನಾದ ಎಂಬ ವಾದವೂ ಇದೆ. ಆದರೆ ಅವನು ಬಸದಿಗಳ ಜೊತೆ ವೈಷ್ಣವ ದೇವಾಲಯಗಳನ್ನೂ ನಿರ್ಮಿಸಿದ. ಉದಾಹರಣೆಗೆ ಹಳೇಬೀಡಿನ ವಿಜಯ ಪಾರ್ಶ್ವನಾಥ ಮತ್ತು ತಲಕಾಡಿನ ಕೇಶವ ನಾರಾಯಣ. ಅವನ ಅರಮನೆ ಸಮೀಪವೇ

ಬಸದಿ ಕಟ್ಟಿಸಿದ. ಇವನ ಆಸ್ಥಾನದಲ್ಲಿ ಪಂಪರಾಮಾಯಣ ಬರೆದ ನಾಗಚಂದ್ರ ಜೈನಕವಿ ಇದ್ದ (ಜೈನ ಧರ್ಮದ ಕವಯಿತ್ರಿ ಕಂತಿಯೂ ಇದ್ದಳೆಂದು ಹೇಳಲಾಗಿದೆ). ದೊಡ್ಡ ಗದ್ದವಳ್ಳಿಯ ಸುಂದರ ಮಹಾಲಕ್ಷ್ಮೀ ದೇವಾಲಯ ಇವನ ಕಾಲದ್ದೇ. ಇವನ ಹಲವು ದಂಡನಾಯಕರು ಜೈನರಾಗಿದ್ದರು. ಅವನ ಪತ್ನಿ ರಾಣಿ ಶಾಂತಲೆ ಕರ್ನಾಟಕದ ಸ್ತ್ರೀಯರ ಇತಿಹಾಸದಲ್ಲಿ ಗಣ್ಯ ಸ್ಥಾನವನ್ನು ಪಡೆದವಳು. ಅವಳ ಇಷ್ಟದೈವ ಜಿನ. ತಾಯಿ ಮಾಚಿಕಬ್ಬೆ ಜೈನಳಾಗಿದ್ದರೆ ತಂದೆ ಮಾರಸಿಂಗಮಯ್ಯ ಶಿವಭಕ್ತ –ಇಬ್ಬರೂ ಬಳ್ಳಿಗಾವೆಯವರು. “ಚತುಸ್ಸಮಯ ಸಮುದ್ಧರಣ ಕಾರಿಣಿ” ಎಂದೇ (ಜೈನ, ಶೈವ, ವೈಷ್ಣವ, ಬೌದ್ಧ) ಪ್ರಖ್ಯಾತಳು. ಗೀತ ವಾದ್ಯ ನೃತ್ಯಗಳಲ್ಲಿ ಪ್ರವೀಣೆಯಾಗಿದ್ದ ಅವಳನ್ನು “ಗೀತ ವಾದ್ಯ ನೃತ್ಯ ಸೂತ್ರಧಾರೆ” ಎಂದೇ ಶಾಸನಗಳು ಬಣ್ಣಿಸಿವೆ. ತನ್ನ ಪತಿಯ ಆಡಳಿತದಲ್ಲಿ ಅವಳು ಸಲಹೆ ನೀಡುವ “ವಿವೇಕೈಕ ಬೃಹಸ್ಪತಿ”ಯಾಗಿದ್ದಳು. ಬೇಲೂರಿನ ಚನ್ನಕೇಶವ ದೇಗುಲದ ಪಕ್ಕದ ಕಪ್ಪೆ ಚನ್ನಿಗರಾಯ ದೇವಾಲಯ, ಶ್ರವಣ ಬೆಳೊಳದ ಸವತಿ ಗಂಧವಾರಣ ಬಸದಿ ಅವಳ ಕೊಡುಗೆಗಳು. ಚನ್ನಕೇಶವ ದೇವಾಲಯದ ಶಿಲ್ಪದಲ್ಲಿ ಅವಳ ಮತ್ತು ವಿಷ್ಣುವರ್ಧನನ ಮೂರ್ತಿಗಳನ್ನು ಒಂದೇ ಕಲ್ಲಿನಲ್ಲಿ ಕೆತ್ತಲಾಗಿದೆ. ಎಲ್ಲ ದೃಷ್ಟಿಗಳಿಂದ ವಿಷ್ಣುವರ್ಧನನಿಗೆ ಅನುರೂಪಳಾಗಿದ್ದ ರಾಣಿ. ೧೧೨೧ ರಲ್ಲಿ ಅವಳು ಶಿವಗಂಗೆಯಲ್ಲಿ “ಮುಡುಪಿ”, ಜೈನ ವ್ರತ ತೊಟ್ಟು ಸಂಪೂರ್ಣ ಆಹಾರ ತೊರೆದು ಪ್ರಾಣತ್ಯಾಗ ಮಾಡುತ್ತಾಳೆ -ಕಾರಣ ತಿಳಿಯದು. ಹೊಯ್ಸಳರೆಂದರೆ ಅವರ ವಿಶಿಷ್ಟ ಶೈಲಿಯ ಅತ್ಯಂತ ಸುಂದರ ಕಲಾತ್ಮಕ ಸೂಕ್ಷ್ಮ ಕುಸುರಿಗೆಲಸದ ಶಿಲ್ಪ ದೇವಾಲಯಗಳಾದ ಬೇಲೂರು ಹಳೆಬೀಡು ದೇವಾಲಯಗಳು ಜ್ಞಾಪಕಕ್ಕೆ ಬರುತ್ತವೆ. ಹುಟ್ಟಿನಿಂದ ತುಮಕೂರಿನವನಾದ ಜಕ್ಕಣನು ಬೇಲೂರಿನ ಚನ್ನಕೇಶವ ವಿಗ್ರಹವನ್ನು ಕೆತ್ತಿದನೆಂದೂ ಅದನ್ನು ಸ್ಥಾಪಿಸಿದಾಗ ಅದರಲ್ಲಿನ ದೋಷವನ್ನು ಅವನ ಮಗ ಡಕಣಾಚಾರಿ ತೋರಿಸಿದಾಗ ಶಿಲ್ಪಿ ಜಕ್ಕಣನು ತನ್ನ ಕೈಯನ್ನೇ ಕತ್ತರಿಸಿಕೊಂಡು ತನ್ನ ಹುಟ್ಟೂರು ಕೈದಾಳಕ್ಕೆ ಮರಳಿ ಅಲ್ಲಿ ಚೆನ್ನಿಗರಾಯ ದೇವಾಲಯ ನಿರ್ಮಿಸಿ ಮತ್ತೆ ತನ್ನ ಕೈಯನ್ನು ಹಿಂದಕ್ಕೆ ಪಡೆದನೆಂದೂ ಕತೆಯಿದೆ. ಜಕ್ಕಣ, ಡಂಕಣರು ಜನಸಾಮಾನ್ಯರು ಕಲ್ಪಿಸಿಕೊಂಡ ಶ್ರೇಷ್ಠ ಶಿಲ್ಪಿಗಳು. ಬೇಲೂರಿನಂತಹ ಸುಂದರ ದೇವಾಲಯ ಕಟ್ಟಿದ ಶಿಲ್ಪಿಗೆ ಅಹಂಕಾರ ಮೂಡಿ ಅವನ ಆ ಅಹಂಕಾರವನ್ನು ಅವನ ಮಗ ಹೋಗಲಾಡಿಸಿದನೆಂಬ ಭಾವನೆ ಇಲ್ಲಿ ಕೆಲಸಮಾಡಿರುವಂತಿದೆ. ಯಾವುದೇ ಮಹಾಕವಿ ಅಥವಾ ಮಹಾಕಲಾವಿದನಿಗೆ ಅಹಂಕಾರವಿರಕೂಡದು - ಅವರೇನೂ ಸರ್ವಜ್ಞರಲ್ಲವೆಂಬ ಪರಿಕಲ್ಪನೆ ಆ ಕತೆಯ ಸೃಷ್ಟಿಯ ಹಿನ್ನೆಲೆಯಲ್ಲಿದೆಯೆಂದು ಭಾವಿಸಬಹುದು. ಬೇಲೂರಿನ ಚನ್ನಕೇಶವ ದೇವಾಲಯದಲ್ಲಿ ದಾಸೋಜ, ಜಾವಣರಂತಹ ಶಿಲ್ಪಿಗಳ ಹೆಸರುಗಳು ದೊರಕುತ್ತವೆ.

“ತೈಲಪ ಹೊಯ್ಸಳರಾಳಿದ ನಾಡೆ” ಎಂಬ ಚರಣದಲ್ಲಿ ಹೊಯ್ಸಳವು ವ್ಯಕ್ತಿಯನ್ನು ಸೂಚಿಸದೆ ಇಡೀ ರಾಜವಂಶವನ್ನು ಸೂಚಿಸುತ್ತದೆ ಎಂಬುದನ್ನಿಟ್ಟುಕೊಂಡರೂ ಸಾಂಕೇತಿಕವಾಗಿ ವಿಷ್ಣುವರ್ಧನ ಶಾಂತಲೆಯರ ವಿವರಗಳನ್ನು ಮೇಲೆ ಕೊಡಲಾಗಿದೆ. ವಿಷ್ಣುವರ್ಧನನಷ್ಟೇ ಪ್ರಖ್ಯಾತ ಇಮ್ಮಡಿ ಬಲ್ಲಾಳ ಅಥವಾ ವೀರಬಲ್ಲಾಳ

(೧೨೧೦). ಇವನು ಹೊಯ್ಸಳ ದೊರೆಗಳಲ್ಲೆಲ್ಲ ಅತ್ಯಂತ ಪರಾಕ್ರಮಿ; ತನ್ನ ಸುತ್ತಮುತ್ತಣದ ಅನೇಕ ಬಲಿಷ್ಠ ರಾಜರನ್ನು ಗೆದ್ದು "ಕರ್ನಾಟಕ ಚಕ್ರವರ್ತಿ" ಎಂಬ ಬಿರುದು ಪಡೆದು ೧೧೯೨ರಲ್ಲಿ ತನ್ನ ಹೆಸರಲ್ಲಿ ಶಕವರ್ಷವನ್ನೇ ಆರಂಭಿಸಿದವನು. ತುಂಗಭದ್ರಾನದಿ ಪ್ರದೇಶ ಇವನ ಹತೋಟಿಯಲ್ಲಿತ್ತು. "ಯಶೋಧರ ಚರಿತೆ", "ಅನಂತನಾಥ ಪುರಾಣ"ಗಳ ಕರ್ತೃ ಜನ್ನ ಅವನ ಆಸ್ಥಾನಕವಿ ಮತ್ತು ಅವನಿಂದಲೇ ಕವಿಗೆ "ಕವಿಚಕ್ರವರ್ತಿ" ಬಿರುದು ದೊರಕಿದ್ದು. "ನೇಮಿನಾಥಪುರಾಣ" ಬರೆದ ನೇಮಿಚಂದ್ರ, "ವರ್ಧಮಾನ ಪುರಾಣ" ಬರೆದ ಆಚಣ್ಣ ಇವನ ಆಸ್ಥಾನದಲ್ಲಿದ್ದರು. "ಕ್ಷೇತ್ರಗಣಿತ", "ವ್ಯವಹಾರ ಗಣಿತ"ಗಳ ಕರ್ತೃ ರಾಜಾದಿತ್ಯನಿಗೆ ಇವನ ಪ್ರೋತ್ಸಾಹ ದೊರಕಿತ್ತು. ಕನ್ನಡ ಸಾಹಿತ್ಯದ ಆದ್ಯ ಬ್ರಾಹ್ಮಣ ಕವಿಗಳಲ್ಲೊಬ್ಬನಾದ ರುದ್ರಭಟ್ಟನಿಗೆ (ಕೃತಿ "ಜಗನ್ನಾಥ ವಿಜಯ") ವೀರಬಲ್ಲಾಳನ ಸಚಿವ ಚಂದ್ರಮೌಳಿ ಪೋಷಕನಾಗಿದ್ದ. ಅವನು ಮಡಿದಾಗ ಅವನಿಗಾಗಿ ಕುವರೆ ಲಕ್ಷ್ಮ ತನ್ನ ಸಾವಿರ ಭಟರ ಜೊತೆ ಆತ್ಮಬಲಿ ಮಾಡಿಕೊಂಡು "ಗರುಡ"ರಾದ ಶಿಲ್ಪ ಶಾಸನಗಳು ಹಳೇ ಬೀಡಿನಲ್ಲಿವೆ - "ಗರುಡ" ಅಥವಾ ಲೇಳೆವಾಳಿಗಳು ರಾಜನಿಗೆ ತೀವ್ರ ನಿಷ್ಠರಾಗಿದ್ದು ಅವನು ಸತ್ತರೆ ತಾವೂ ಜೊತೆಯಲ್ಲಿ ಸಾಯುವುದಾಗಿ ಪ್ರತಿಜ್ಞೆ ಮಾಡುತ್ತಿದ್ದರು. ನೃಪಕಾಮನಿಂದಾರಂಭಿಸಿ ನಾಲ್ಕನೇ ವಿರೂಪಾಕ್ಷನವರೆಗಿನ (೧೧-೧೪ ಶ.) ಹೊಯ್ಸಳ ವಂಶದ ಸಾಂಸ್ಕೃತಿಕ ಕೊಡುಗೆ ಸಾಮಾನ್ಯವಾದುದಲ್ಲ.

ಕರ್ನಾಟಕವು ಸಮೃದ್ಧ ನೀರಿನ ಹರಿವಿನ ನದಿಗಳಿಂದ ಸದಾ ಸಸ್ಯ ಶಾಮಲೆ. 'ಪೆರ್ದೊರೆ' ಎಂದು ಹಿಂದೆ, ಈಗ ಹಳ್ಳಿಗರು 'ಹಿರೇಹೊಳೆ' ಎಂದು ಕರೆಯುವ ಕೃಷ್ಣಾನದಿ ಮಹಾರಾಷ್ಟ್ರದಲ್ಲಿ ಜನಿಸಿ ಬೆಳಗಾವಿ, ಬಿಜಾಪುರ, ಕಲ್ಬುರ್ಗಿ, ರಾಯಚೂರು ಜಿಲ್ಲೆಗಳಲ್ಲಿ ಹರಿದು ಆಂಧ್ರಪ್ರದೇಶವನ್ನು ಸೇರುತ್ತದೆ. ಘಟಪ್ರಭ, ಮಲಪ್ರಭ ಅದರ ಮುಖ್ಯ ಉಪನದಿಗಳು. ನಾರಾಯಣಪುರ ಸಮೀಪ ೨೦೦ ಅಡಿ ಎತ್ತರದ ಜಲಪಾತವಿದೆ. ಆಲಮಟ್ಟಿ ನಾರಾಯಣಪುರ ಅದರ ಪ್ರಮುಖ ಅಣೆಕಟ್ಟುಗಳು. ಕೃಷ್ಣಾ, ಮಲಪ್ರಭಾ ನದಿಗಳು ಕೂಡುವ ಜಾಗದಲ್ಲಿ ಬಸವಣ್ಣನವರಿದ್ದ ಕೂಡಲ ಸಂಗಮ ಕ್ಷೇತ್ರವಿದೆ. ಶರಾವತಿಯು ಶಿವಮೊಗ್ಗ ಜಿಲ್ಲೆಯಲ್ಲಿ ಹರಿದು ಜೋಗದ ಬಳಿ ೮೨೯ ಅಡಿ ಎತ್ತರದ ಜಲಪಾತದಿಂದ ಧುಮುಕಿ ಉತ್ತರ ಕನ್ನಡ ಜಿಲ್ಲೆಯ ಮೂಲಕ ಪಶ್ಚಿಮ ಸಮುದ್ರವನ್ನು ಸೇರುತ್ತದೆ. ರಾಜಾ ರೋರರ್ ರಾಕೆಟ್ ಲೇಡಿ ಎಂದು ಹೆಸರಿಸಿರುವ ನಾಲ್ಕು ಸೀಳುಗಳಲ್ಲಿ ಬೀಳುವ ಜೋಗ ಜಲಪಾತದ ದೃಶ್ಯ ನಯನ ಮನೋಹರ. ಅಲ್ಲಿ ವಿದ್ಯುದುತ್ಪಾದನಾ ಕೇಂದ್ರವಿದೆ. ಗಂಗಾಸ್ನಾನ, ತುಂಗಾಪಾನ ಎಂದೇ ಲೋಕೋಕ್ತಿಯಾಗಿರುವ ತುಂಗಾ ನದಿಯು ಶಿವಮೊಗ್ಗ ಜಿಲ್ಲೆಯ ಕೂಡಲಿಯಲ್ಲಿ ಭದ್ರಾ ಸೇರಿ ತುಂಗಭದ್ರೆ ಎನ್ನಿಸಿಕೊಂಡು ದಾವಣಗೆರೆ ಬಳ್ಳಾರಿ ಜಿಲ್ಲೆಗಳಲ್ಲಿ ಹರಿದು ಆಂಧ್ರಪ್ರದೇಶವನ್ನು ಪ್ರವೇಶಿಸುತ್ತದೆ. ಅದರ ದಡದಲ್ಲಿರುವ ಹರಿಹರದ ಹರಿಹರೇಶ್ವರ ದೇವಾಲಯವು ಬಹು ಪ್ರಸಿದ್ಧ. ಹರಿಹರದ ಹಿಂದಿನ ಹೆಸರು ಕೂಡಲೂರು (ಆ ನಗರದ ಸಮೀಪ ಹಿರೇ ಹಳ್ಳವು ತುಂಗಭದ್ರಾ ನದಿಯನ್ನು ಸೇರುತ್ತದೆ.) ಆ ನದಿಯ ಬಲದಂಡೆಯಲ್ಲಿರುವ ಹಂಪಿ ವಿಶ್ವಪ್ರಸಿದ್ಧ. ಹೊಸಪೇಟೆ ಸಮೀಪದ

ತುಂಗಭದ್ರಾ ಜಲಾಶಯ ಹಲವು ಸಾವಿರ ಹೆಕ್ಟೇರುಗಳಿಗೆ ನೀರುಣಿಸುತ್ತದೆ. ಕೊಡಗಿನ ಜನರು ಕುಲದೇವತೆ ಎಂದೇ ಪೂಜಿಸುವ ಕಾವೇರಿಯು ಅಲ್ಲಿಯ ಬ್ರಹ್ಮಗಿರಿ ಬೆಟ್ಟದ ಭಾಗಮಂಡಲದಲ್ಲಿ ಹನಿ ಹನಿಯಾಗಿ ಹುಟ್ಟಿ ಮೈಸೂರು ಜಿಲ್ಲೆಯಲ್ಲಿ ಕವಲೊಡೆದು ದ್ವೀಪವನ್ನು ಸೃಷ್ಟಿಸಿ, ತಿರುಮಕೂಡಲು ನರಸೀಪುರ ಬಳಿ ಕಪಿಲಾ ನದಿಯನ್ನು ಸೇರಿಸಿಕೊಂಡು ತಮಿಳುನಾಡನ್ನು ಪ್ರವೇಶಿಸುತ್ತದೆ. ಆ ದ್ವೀಪದ ಶ್ರೀರಂಗಪಟ್ಟಣ ಸುಪ್ರಸಿದ್ಧ ಐತಿಹಾಸಿಕ ಸ್ಥಳ ಮತ್ತು ಅಲ್ಲಿನ ರಂಗನಾಥಸ್ವಾಮಿ ದೇವಾಲಯದಿಂದ ಪುಣ್ಯಕ್ಷೇತ್ರ ಆಗಿದೆ. ಶಿವನಸಮುದ್ರದ ಬಳಿ ಗಗನಚುಕ್ಕಿ, ಭರಚುಕ್ಕಿ ಎಂಬ ಕವಲಾಗಿ ಒಡೆದು ಸುಂದರ ಜಲಪಾತವನ್ನು ಸೃಷ್ಟಿಸಿದೆ. ಕೃಷ್ಣರಾಜಸಾಗರ ಅದರ ಪ್ರಮುಖ ಜಲಾಶಯವಾಗಿದೆ.

ಭಾರತವು ನಾನಕ, ಕಬೀರರಂತೆಯೇ ಇನ್ನೂ ಹಲವು ಶ್ರೇಷ್ಠ ಸಂತರಿಗೆ ಜನ್ಮವಿತ್ತಿದೆ. ಬಂಗಾಳದ ನಬೋದ್ವೀಪದಲ್ಲಿ ಜನಿಸಿದ ಚೈತನ್ಯನ (೧೫೨೫) ಬಾಲ್ಯದ ಹೆಸರು ವಿಶ್ವಂಭರ. ಅವನ ಮೊದಲ ಎಂಟು ಸೋದರರು ಸತ್ತದ್ದರಿಂದ ಅವನ ತಾಯಿಯು ಯಮ ಬೇವನ್ನು ಮುಟ್ಟಲಾರ ಎಂಬ ನಂಬಿಕೆಯ ಮೇಲೆ ಅವನಿಗೆ “ನಿಮಾಇ” (=ಬೇವಿನ ಮರ) ಎಂಬ ಹೆಸರನ್ನು ಇಟ್ಟಿದ್ದಳು. ಅವನು ಚಿನ್ನದ ಬಣ್ಣದ ಸುಂದರಾಕೃತಿಯವನಾದ್ದರಿಂದ ಗೌರಾಂಗ ಎಂದೂ ಕರೆಯುತ್ತಿದ್ದರು. ನೋಡಲು ಕೃಷ್ಣನಂತಿದ್ದ ಅವನು ಕೃಷ್ಣನ ಪ್ರಸಾದಕ್ಕಾಗಿ ಹಂಬಲಿಸುತ್ತಿದ್ದ. ಬಾಲ್ಯದಲ್ಲೇ ಒಬ್ಬ ಹಿರಿಯ ವಿದ್ವಾಂಸನನ್ನು ವಾದದಲ್ಲಿ ಸೋಲಿಸಿದ. ಮುಂದೆ ವಿದ್ವಾಂಸ ವಲ್ಲಭಾಚಾರ್ಯನ ಮಗಳು ಲಕ್ಷ್ಮಿಯನ್ನು ಮದುವೆಯಾದ. ಹೆಂಡತಿ ಸಾವನ್ನಪ್ಪಿದರೂ ತಾಳ್ಮೆಗೆಡಲಿಲ್ಲ. ವಿಷ್ಣುಪ್ರಿಯಾ ಅವನ ಎರಡನೆಯ ಪತ್ನಿಯಾದಳು. ತೀರ್ಥಯಾತ್ರೆಗಾಗಿ ಗಯಾಕ್ಕೆ ಹೋಗಿ “ವಿಷ್ಣುಪಾದ"ವನ್ನು ಪೂಜಿಸಿದಾಗ ಆದ ಅಪೂರ್ವ ಆಧ್ಯಾತ್ಮಿಕ ಅನುಭವದಿಂದ ಅವನ ಬದುಕೇ ಬೇರೆ ಆಯ್ತು. ಈಶ್ವರಪುರಿ ಗುರುವಿಂದ ಮಂತ್ರೋಪದೇಶ ಪಡೆದು ಗೋಪಿಕಾಸ್ತ್ರೀಯರ ವಿರಹವೇದನೆಯನ್ನು ತನ್ನದನ್ನಾಗಿ ಮಾಡಿಕೊಂಡ. “ನಿಮಾಇ' ಕೃಷ್ಣ ಚೈತನ್ಯವಾಯಿತು. ಅವನ ಹೆಸರು ಚೈತನ್ಯ ಮಹಾಪ್ರಭು ಎಂದಾಯ್ತು. ತನ್ನ ತಾಯಿ ಹೆಂಡತಿಯರ ಒಪ್ಪಿಗೆ ಪಡೆದು ಸನ್ಯಾಸಿಯಾಗಿ, ವೃಂದಾವನಕ್ಕೆ ಹೋಗುವ ವಿಚಾರ ಕೈಬಿಟ್ಟು ಒರಿಸ್ಸಾದ ಜಗನ್ನಾಥಪುರಿಯಲ್ಲಿ (ನೀಲಾಚಲ) ನೆಲಸಿದ. ಪುರಿಯ ಜಗನ್ನಾಥನಲ್ಲಿ ಕೃಷ್ಣ ಕಾಣಿಸಿದ. ಹಲವರು ಅದ್ವೈತಿಗಳು ಅವನಿಂದಾಗಿ ಕೃಷ್ಣ ಭಕ್ತರಾದರು. ಕನ್ಯಾಕುಮಾರಿ, ಉಡುಪಿಯಲ್ಲದೆ ವೃಂದಾವನಕ್ಕೂ ಭೇಟಿ ನೀಡಿದ್ದ. ಅವನು ಭಕ್ತಿಯ ಉತ್ಕರ್ಷದಲ್ಲಿ ರಾಧೆಯಂತೆ ಕೃಷ್ಣ ಪರವಶ ಆಗುತ್ತಿದ್ದ; ತನ್ನನ್ನು ಮರೆತು ಆನಂದದಿಂದ ಕುಣಿಯುತ್ತಿದ್ದ. ಸಂಪೂರ್ಣ ಕಾಮರಹಿತವಾಗಿದ್ದ ಅವನ ಕೃಷ್ಣ ಭಕ್ತಿಯು ನಿರ್ಮಲವಾಗಿತ್ತು. ಅವನ ಬರಹ ಬಹಳ ಇಲ್ಲ- ಶಿಕ್ಷಾಷ್ಟಕ, ಜಗನ್ನಾಥ ಸ್ತೋತ್ರಗಳು ಅವನ ಕೃತಿಗಳು. ಅವನ ಶಿಷ್ಯರು ಈಗಲೂ ಕೃಷ್ಣನಾಮ ಜಪಿಸುತ್ತ ವಾದ್ಯ ಸಮೇತ ಹಾಡುತ್ತ ಆವೇಶದಿಂದ ಕುಣಿಯುತ್ತಾರೆ. ಪರಮಹಂಸರ ಪೂರ್ಣ ಹೆಸರು ರಾಮಕೃಷ್ಣ ಪರಮಹಂಸ (೧೮೮೦). ಬಾಲ್ಯದಿಂದಲೇ ಅವರು ನಿರ್ವಿಕಲ್ಪ ಸಮಾಧಿ ಸ್ಥಿತಿಗೆ

ಏರುತ್ತಿದ್ದರು. ಬಾಲ್ಯದಲ್ಲೇ ತಂದೆ ಕಳೆದುಕೊಂಡು ಅವರು ಉಪನಯನದ ಬಳಿಕ ಮೊದಲು ಆಹಾರವನ್ನು ಮನೆಯ ಸೇವಕಿ ಧನೀ ಎಂಬುವಳ ಮನೆಯಲ್ಲಿ ಸ್ವೀಕರಿಸಿದ್ದು ಸಂಪ್ರದಾಯಸ್ಥರ ವಿರೋಧಕ್ಕೆ ಕಾರಣವಾಗಿತ್ತು. ಬಳೆಗಾರ ಶ್ರೀನಿವಾಸ ಎಂಬಾತ ಆ ಬಾಲಕನ ಸಂತತನವನ್ನು ಗುರುತಿಸಿ ಗುಟ್ಟಾಗಿ ಆರಾಧಿಸುತ್ತಿದ್ದ. ತನ್ನ ಅಣ್ಣನೊಡನೆ ಕೋಲ್ಕತ್ತೆಗೆ ಬಂದು ಅಲ್ಲಿ ಪೌರೋಹಿತ್ಯ ಮಾಡದೆ ಧನಾರ್ಜನೆಯಲ್ಲಿ ನಿರಾಸಕ್ತನಾಗಿದ್ದರು. ಶೂದ್ರಳಾಗಿದ್ದ ರಾಣೀ ರಾಸಮಣಿ ಗಂಗಾತೀರದಲ್ಲಿ ಕಟ್ಟಿಸಿದ್ದ ಕಾಲೀ ದೇವಾಲಯಕ್ಕೆ ಯಾರೂ ಪೌರೋಹಿತ್ಯಕ್ಕೆ ಒಪ್ಪಲಿಲ್ಲ: ರಾಮಕೃಷ್ಣರು ಒಪ್ಪಿ ಒಮ್ಮೆ ಪೂಜಿಸುವಾಗ ನಿಜವಾಗಿಯೂ ಕಾಲೀ ಇದಾಳೆಯೇ ಎಂದು ಪ್ರಶ್ನಿಸಿಕೊಂಡು ಖಡ್ಗದಿಂದ ಆತ್ಮಹತ್ಯೆಗೆ ಪ್ರಯತ್ನಿಸಿದಾಗ ದೇವಿಯ ದರ್ಶನವಾಗಿ ಒಳಗೆ ಆನಂದ ಉಕ್ಕಿ ಹರಿಯಿತು. ಜನ ಅವರನ್ನು ಹುಚ್ಚರೆಂದು ಲೇವಡಿ ಮಾಡಿದರು. ಇಪ್ಪತ್ತಮೂರು ವರ್ಷದ ಅವರು ಬಾಲಕಿ ಶಾರದಾದೇವಿ ಮದುವೆಯಾಗಿ ಬ್ರಹ್ಮಚಾರಿಯಾಗಿ ಉಳಿದರು. ಗುರುವಿನ ಮಾರ್ಗದರ್ಶನವಿಲ್ಲದೆ ಅದ್ವೈತ ಸ್ಥಿತಿಗೆ ಏರಿದರು. ಯೋಗೇಶ್ವರಿ ಎಂಬ ತಾಂತ್ರಿಕ ಯೋಗಿನಿ ಅವರಿಗೆ ತಾಂತ್ರಿಕ ಸಾಧನೆಯಲ್ಲಿ ಮಾರ್ಗದರ್ಶನ ಮಾಡಿದಳು. ರಾಮನ ಭಕ್ತನಾಗಿ ರಾಮನ ದರ್ಶನ ಪಡೆದರು. ಮಧುರ ಭಾವದ ಸಾಧನೆ ಮಾಡಿ ರಾಧಾಳಂತೆ ಕೃಷ್ಣನ ಅನುಭವ ಪಡೆದರು. ಸೂಫಿ ಮಾರ್ಗದಲ್ಲಿ ನಡೆದು ಪ್ರವಾದಿ ಮಹಮ್ಮದನನ್ನು ಆರಾಧಿಸಿದರು. ಕ್ರಿಶ್ಚಿಯನ್ ಧರ್ಮದ ರೀತಿ ನಡೆದುಕೊಂಡು ಏಸುವಿನ ದರ್ಶನ ಪಡೆದರು. ಹೀಗೆ ಎಲ್ಲ ಬಗೆಯ ಸಾಧನೆಗಳನ್ನು ಮಾಡಿ ದಿವ್ಯದರ್ಶನ ಪಡೆದ ಅವರು ಎಲ್ಲ ಧರ್ಮಗಳೂ ಸಮಾನವೆಂಬುದನ್ನು ಅನುಭವದಲ್ಲಿ ಕಂಡುಕೊಂಡರು. ಆನಂದ ಸಾಗರದಲ್ಲಿ ಮೈಮರೆತು ಪತ್ನಿ ಶಾರದಾದೇವಿಯನ್ನು ಮರೆತೇಬಿಟ್ಟರು. ಅವರೊಬ್ಬ ಹುಚ್ಚ ಎಂಬ ಮಾತು ಕೇಳಿದ ಶಾರದಾದೇವಿ ತಾವೇ ದಕ್ಷಿಣೇಶ್ವರಕ್ಕೆ ಬಂದು ಅವರ ಶಿಷ್ಯಳಾಗಿ ಸಾಧನೆ ಮಾಡಿದರೂ ರಾಮಕೃಷ್ಣರು ತಮ್ಮ ಪತ್ನಿಯನ್ನು ಕಾಲೀ ಎಂದೇ ನಂಬಿ ಪೂಜಿಸಿದರು. ಸಾಧನೆಯಿಂದ ಶಾರದಾದೇವಿ ಸಿದ್ಧ ಪುರುಷೆಯಾದರು. ಕೋಲ್ಕತ್ತದ ಬಡಾವಣೆಯಂತಿದ್ದ ದಕ್ಷಿಣೇಶ್ವರಕ್ಕೆ ಆ ಕಾಲದ ಬ್ರಹ್ಮಸಮಾಜದ ಕೇಶವ ಚಂದ್ರಸೇನರು ಭೇಟಿ ಕೊಟ್ಟು ದರ್ಶನ ಪಡೆದರು. ಗಿರೀಶ್ ಚಂದ್ರ ಬೋಸರು ಅವರೊಬ್ಬ "ಮಹರ್ಷಿ"ಯೆಂದೇ ಘೋಷಿಸಿದರು. ಸನಾತನ ಹಿಂದೂಧರ್ಮದ ನಿಜವಾದ ಧ್ಯೇಯವನ್ನು ಆಚರಿಸಿ ಅದೊಂದು ನಿತ್ಯಸತ್ಯದ ಧರ್ಮವೆಂಬುದನ್ನು ಸಾಬೀತು ಮಾಡಿದರು. ಹಿಂದೂ ಧರ್ಮದ ಪುನರುತ್ಥಾನದ ಯುಗ ಒಂದು ರೀತಿಯಿಂದ ಅವರಿಂದ ಆರಂಭ. ಮುಂದೆ ವಿವೇಕಾನಂದರೆಂದು ಪ್ರಸಿದ್ಧರಾದ ನರೇಂದ್ರರಂತಹ ಶಿಷ್ಯರಿಗೆ ಮಾರ್ಗದರ್ಶನ ಮಾಡಿ ಹುರಿದುಂಬಿಸಿದರು. ಅವರು ತಮ್ಮ ಕೊನೆಯ ದಿನಗಳಲ್ಲಿ ಕ್ಯಾನ್ಸರ್ ರೋಗ ಪೀಡಿತರಾದಾಗ ಶಾರದಾಮಣಿ ದೇವಿಯವರು ನರೇಂದ್ರರು ಮತ್ತು ಇತರರು ಅವರ ಸೇವೆ ಮಾಡಿದರು. ನರೇಂದ್ರರಿಗೆ ಇಡೀ ತಮ್ಮ ತಪಸ್ಸನ್ನು ಧಾರೆಯೆರೆದು ಆನಂದ ಬಾಷ್ಪ ಸುರಿಸಿದರು. ತಮ್ಮ ಶಿಷ್ಯರಿಗೆ ಕಾವಿಧಾರಣೆ ಮಾಡಿಸಿ ಕಾಲೀ ನಾಮಸ್ಮರಣೆ ಮಾಡುತ್ತ ೧೮೮೬ರಲ್ಲಿ ಇಹಲೋಕ ಮುಕ್ತರಾದರು. ಅವರ ಸಂದೇಶವನ್ನು ಜಗತ್ತಿನಾದ್ಯಂತ ಸಾರಿದವರು

ನರೇಂದ್ರ ಅಥವಾ ಸ್ವಾಮಿ ವಿವೇಕಾನಂದರು (೧೯೦೦). ಅವರು ಕಲ್ಕತ್ತೆಯ ಅಟೋರ್ನಿ ವಿಶ್ವನಾಥದತ್ತರಿಗೆ ಮಗನಾಗಿ ಹುಟ್ಟಿ ಜ್ಞಾಪಕಶಕ್ತಿಯ ಅತ್ಯಂತ ಪ್ರತಿಭಾಶಾಲಿಯಾಗಿದ್ದ ಅವರು ಮೂಢನಂಬಿಕೆಗಳ ವಿರುದ್ಧ ತಿರಸ್ಕಾರದ ಭಾವನೆಯನ್ನು ಬಡವರ ಬಗ್ಗೆ ತೀವ್ರ ಕನಿಕರ ಮನೋಧರ್ಮವನ್ನು ಬೆಳಸಿಕೊಂಡರು. ನಿರೀಶ್ವರವಾದದ ಬಗ್ಗೆ ಓದಿದರೂ ಬ್ರಹ್ಮಸಮಾಜ ಅವರಿಗೆ ತೃಪ್ತಿ ನೀಡಲಿಲ್ಲ. ಅವರ ಮನದಾಳದ ಪ್ರಶ್ನೆಗಳಿಗೆ ಉತ್ತರ ಯಾರಿಂದಲೂ ದೊರಕಲಿಲ್ಲ. ಆ ಕಾಲಕ್ಕೆ ರಾಮಕೃಷ್ಣರ ಹೆಸರು ಕೋಲ್ಕತ್ತದಲ್ಲಿ ಮನೆಮಾತಾಗಿತ್ತು. ಅವರೊಬ್ಬ ನಿರಕ್ಷರಿ, ನಿಷ್ಫಲ ವ್ಯಕ್ತಿ ಎಂಬ ತಿರಸ್ಕಾರವಿತ್ತು. ಆದರೂ ಬಂಧು ರಾಮಚಂದ್ರ ದತ್ತರ ಸೂಚನೆಯ ಮೇರೆಗೆ ದಕ್ಷಿಣೇಶ್ವರಕ್ಕೆ ಹೋಗಿ ನೇರವಾಗಿ “ಪೂಜ್ಯರೇ, ತಾವು ದೇವರನ್ನು ನೋಡಿರುವಿರಾ?” ಎಂಬ ಪ್ರಶ್ನೆಯನ್ನು ಕೇಳಿದರು. ರಾಮಕೃಷ್ಣರು ಆನಂದಬಾಷ್ಪ ಸುರಿಸುತ್ತ ಆತ್ಮೀಯರಂತೆ ಹೌದು ಎಂದು ಮಾತನಾಡಿಸಿದಾಗ ವಿವೇಕಾನಂದರಿಗೇ ದಿಗ್ಭ್ರಮೆಯಾಯ್ತು: ದೈವೀಪುರುಷನಿಗಾಗಿ ಹುಡುಕಾಟ ಅಲ್ಲಿಗೆ ಕೊನೆಗೂ ಕೊನೆಗೊಂಡಿತ್ತು. ಮುಂದಿನ ಐದು ವರ್ಷ ಅವರ ಮಾರ್ಗದರ್ಶನ ದೊರಕಿತು. ಮಹಾಗುರು ಮಹಾಶಿಷ್ಯ ಇಬ್ಬರೂ ರೂಪುಗೊಂಡರು. ಒಂದೆಡೆ ನಿರಂತರ ಕಾಲೀ ದೇವಿಯ ಸಾನ್ನಿಧ್ಯದ ಅನಕ್ಷರಸ್ಥ ಬ್ರಾಹ್ಮಣ, ಇನ್ನೊಂದು ಕಡೆ ಹರಿತಬುದ್ಧಿಯ ಪಾಶ್ಚಾತ್ಯ ಆಧುನಿಕ ಶಿಕ್ಷಣದ ವ್ಯಕ್ತಿ. ವಿವೇಕಾನಂದರಿಗೆ ಇನ್ನೂ ಮಾನಸಿಕ ತೊಳಲಾಟಗಳಿದ್ದರೂ ರಾಮಕೃಷ್ಣರು ಗೆದ್ದರು- ಅಥವಾ ಗುರುವಿನ ನಿಷ್ಕಪಟ ಪ್ರೇಮ ಗೆದ್ದಿತು. ಒಂದು ದಿನ ಅವರಿಗಾದ ಕಾಲೀ ಕೃಪೆಯ ಅನುಭವ ನರೇಂದ್ರರನ್ನು ನಿಜವಾದ ವಿವೇಕಾನಂದರನ್ನಾಗಿಸಿತು. ೧೮೮೬ರಲ್ಲಿ ಪರಮಹಂಸರು ತಮ್ಮ ಶಿಷ್ಯರಿಗೆ ನರೇಂದ್ರರ ನಾಯಕತ್ವದಲ್ಲಿ ಒಗ್ಗಟಾಗಿ ಕೆಲಸ ಮಾಡಲು ಸಲಹೆ ನೀಡಿ ತಮ್ಮ ಸಮಸ್ತ ತಪಸ್ಸನ್ನು ಧಾರೆಯೆರೆದು ಅದೇ ವರ್ಷ ಅಸ್ತಂಗತರಾದರು. ನರೇಂದ್ರರು ಬಾಡಿಗೆ ಮನೆಯೊಂದರಲ್ಲಿ ಎಲ್ಲರನ್ನೂ ಸೇರಿಸಿ ಸುಮಾರು ಅದೇ ಕಾಲದಲ್ಲಿ ಮೊದಲ “ಮಠ” ಆರಂಭಿಸಿದಾಗ ಶ್ರೀ ರಾಮಕೃಷ್ಣ ಮಠದ ಮೊದಲ “Nucleus" ಅವರೂ ಸೇರಿದಂತೆ ಕಾವಿ ಧರಿಸಿದ ಹನ್ನೆರಡು ಶಿಷ್ಯರು. ಎಲ್ಲರೂ ಸನ್ಯಾಸ ಸ್ವೀಕರಿಸಿದಾಗ ನರೇಂದ್ರರ ಹೆಸರು ವಿಧಿವತ್ತಾಗಿ “ವಿವೇಕಾನಂದ” ಎಂದಾಯ್ತು. ಒಬ್ಬರನ್ನು ಬಿಟ್ಟು ಎಲ್ಲರೂ ಭಾರತ ಪರ್ಯಟನದ ತೀರ್ಥಯಾತ್ರೆಗೆ ಹೊರಟರು. ಪಾಶ್ಚಾತ್ಯ ನಾಗರಿಕತೆಯ ಸುಳಿಗೆ ಸಿಲುಕಿದ್ದ ಭಾರತವು ತನ್ನ ಪರಂಪರೆಯನ್ನು ಮರೆತು ವಿಸ್ಮೃತಿಯಲ್ಲಿ ಮುಳುಗುತ್ತಿರುವಾಗ ತನ್ನ ತಾಯ್ನಾಡನ್ನು ಎಚ್ಚರಿಸುವ ಶಪಥವನ್ನು ವಿವೇಕಾನಂದರು ತೊಟ್ಟರು. ಭಾರತದ ಬೇರೆ ಬೇರೆ ಪ್ರಾಂತಗಳಲ್ಲಿ ಜನಸಾಮಾನ್ಯರ ಮನೆಗಳಲ್ಲಿ, ರಾಜರ ಅರಮನೆಗಳಲ್ಲಿ ಬಡವರ ಗುಡಿಸಲುಗಳಲ್ಲಿ ತಂಗಿ ಹಿಮಾಲಯದಿಂದ ಹಿಡಿದು ಕನ್ಯಾಕುಮಾರಿಯವರೆಗೆ ಇಡೀ ಭಾರತದ ತೀರ್ಥಯಾತ್ರೆ ಮಾಡಿದರು. ಭಾರತೀಯರು ಮೂರ್ಖರಲ್ಲ; “ಧರ್ಮ” ಅವರ ಬೆನ್ನೆಲುಬು ಎಂಬುದರ ಅನುಭವವಾಯಿತು. ಕನ್ಯಾಕುಮಾರಿಯಲ್ಲಿ ಸಮುದ್ರಕ್ಕೆ ಹಾರಿ ಈಜಿ ಅದರ ಮಧ್ಯದ ಬಂಡೆ ಸೇರಿ ಧ್ಯಾನಸ್ಥರಾಗಿ ಉತ್ತರದ ಇಡೀ ಭಾರತವನ್ನು ಅದರ ದುಃಸ್ಥಿತಿಯನ್ನು ಕುರಿತು ಗಾಢ ಚಿಂತನೆಯಲ್ಲಿ ಮಗ್ನರಾದರು. ೧೮೯೩ರಲ್ಲಿ ಅಮೆರಿಕದಲ್ಲಿ ವಿಶ್ವಧರ್ಮ ಸಮ್ಮೇಳನ (Parliament of

Religions) ನಡೆಯುವ ವಿಷಯ ತಿಳಿದು ಅದಕ್ಕೆ ಹೋಗಿ ಬಂದು ದೇಶಸೇವೆ ಕೈಗೊಳ್ಳಲು ನಿರ್ಧರಿಸಿದರು. ಅವರಿಗೆ ಗುರುವಿನ ಕೃಪಾ ಆಶೀರ್ವಾದ, ಆಗ ಇನ್ನೂ ಜೀವಿಸಿದ್ದ ಶಾರದಾಮಣಿ ದೇವಿಯರ ಅನುಜ್ಞೆ ದೊರಕಿತು. ಖೇತ್ರಿರಾಜನಿಂದ ಶಿಷ್ಯರಿಂದ ಧನಸಹಾಯ ಒದಗಿ ಹಡಗಿನಲ್ಲಿ ಶ್ರೀಲಂಕಾ, ಚೀನಾ, ಜಪಾನ್ ಮೂಲಕ ಅಮೆರಿಕಕ್ಕೆ ತೆರಳಿ ಅಲ್ಲಿ ಚಿಕಾಗೋ ನಗರ ಸೇರಿದರು. ಸಮ್ಮೇಳನಕ್ಕೆ ಇನ್ನೂ ಮೂರು ತಿಂಗಳು ಅವಧಿಯಿತ್ತು. ಅಲ್ಲಿ ಸರಿಯಾದ ಪರಿಚಯವಿಲ್ಲದೆ ಕಷ್ಟಪಡಬೇಕಾಯಿತಾದರೂ ದೈವದ ಕೃಪೆಯಿಂದ ಅವರಿಗೆ ಇರಲು ಆಶ್ರಯ ಹೇಗೋ ದೊರಕಿ ೧೧-೨೭.೯.೧೮೯೩ ರಂದು ನಡೆದ ವಿಶ್ವಪ್ರಸಿದ್ಧ ಸಮ್ಮೇಳನದಲ್ಲಿ ಭಾಗವಹಿಸಿದರು. ಮೊದಲ ದಿನ ಅವರು ಸರಸ್ವತಿ ಸ್ತೋತ್ರದೊಂದಿಗೆ ಸಮ್ಮೇಳನದ ಶ್ರೋತೃವರ್ಗವನ್ನು "Brothers and Sisters of America" ಎಂದು ಆತ್ಮೀಯವಾಗಿ ಸಂಬೋಧಿಸಿ ಮಾತನಾಡಲು ಆರಂಭಿಸಿದೊಡನೆ, ಭಾರತದಂತಹ ದಾಸ್ಯ ರಾಷ್ಟ್ರದ ಸ್ಫುರದ್ರೂಪಿ ಉಜ್ವಲ ತೇಜಸ್ಸಿನ ಯುವ ಸನ್ಯಾಸಿಯ ಧೈರ್ಯ  ಸ್ಥೈರ್ಯ ಆತ್ಮವಿಶ್ವಾಸ ಇವುಗಳಿಗೆ ಮಾರುಹೋದ ಇಡೀ ಶ್ರೋತೃವರ್ಗ ಕಿವಿ ಗಡಚಿಕ್ಕುವಂತೆ ಚಪ್ಪಾಳೆ ತಟ್ಟಿ ಸ್ವಾಗತಿಸಿತು. ಪೂರ್ವದ ಬಿರುಗಾಳಿ ಪಶ್ಚಿಮದಲ್ಲಿ ಬೀಸಿದ್ದು ಅದೇ ಮೊದಲು. ಸರ್ವ ಧರ್ಮಗಳ ಸಮಾನತೆ, ವಿಶ್ವಸತ್ಯವನ್ನು ಸಾರಿದ ಅವರು ಇಂತಹ ಮಾತಿನಿಂದ ಆರಂಭಿಸಿದರು- "I thank you in the name of the mother of all religions: and I thank you in the name of the millions and millions of Hindu people of all classes and sections..... I am proud to belong to a religion which has taught the world both tolerance and Universal acceptance. We believe not only in Universal tolerance, but we accept all religions as true.... I am proud to belong to a religion which has taught the world both tolerance and Universal acceptance. I am a Hindu." ಇಂದಿನ ಹಲವರು ತಾವು ಹಿಂದೂ ಎಂದು ಹೇಳಿಕೊಳ್ಳಲು ನಾಚಿಕೆಪಡುತ್ತಿರುವಾಗ, ವಿವೇಕಾನಂದರು ಹತ್ತೊಂಬತ್ತನೇ ಶತಮಾನದಲ್ಲಿ ಅಮೆರಿಕದಲ್ಲಿ ವಿಶ್ವದ ಎಲ್ಲ ಧರ್ಮಗಳ ನಾಯಕರ ಬೃಹತ್ ಸಭೆಯಲ್ಲಿ ತಾವು ಒಬ್ಬ ಹೆಮ್ಮೆಯ ಹಿಂದೂ ಎಂದು ಹೇಳಿಕೊಂಡಿರುವುದು ನಮಗೆಲ್ಲ ಸ್ಫೂರ್ತಿಯಾಗಬೇಕು. (ಗಾಂಧೀಜಿ ಕೂಡ ತಮ್ಮನ್ನು ಒಬ್ಬ "ಸನಾತನಿ ಹಿಂದೂ" ಎಂದು ಕರೆದುಕೊಂಡಿದ್ದಾರೆ.) ಭಿಕ್ಷಾಪಾತ್ರೆಯ ವಿರಾಗಿ ಅಂದಿನ ಸಮ್ಮೇಳನದ ಕೇಂದ್ರವ್ಯಕ್ತಿ ಆದರು. ಮುಂದೆ ಅವರು ಅಮೆರಿಕದಲ್ಲಿ ಸಂಚರಿಸಿ ಹಲವೆಡೆ ಉಪನ್ಯಾಸ ನೀಡಿದಾಗ ಕೆಲವರು ಕ್ರೈಸ್ತ ಮಿಷನರಿಗಳು ಅವರ ತೇಜೋಭಂಗಕ್ಕೆ ಯತ್ನಿಸಿದರು. ಅವರ ಮೇಲೆ ಹಲವು ಅಶ್ಲೀಲ ಆರೋಪಗಳನ್ನು ಹೊರಿಸಲಾಯ್ತು. ಅಮೆರಿಕದ ಸೋದರಿ ನಿವೇದಿತ ಅವರ ಶಿಷ್ಯ ಆದರು. ಅವರು ೧೮೯೭ರಲ್ಲಿ ಇಂಗ್ಲೆಂಡ್ ಮೂಲಕ ವಾಪಸಾದಾಗ ಚೆನ್ನೈನಲ್ಲಿ ಅವರಿಗೆ ಭವ್ಯ ಸ್ವಾಗತ ದೊರಕಿತು. ಅವರು ಭಾರತದ ರಾಷ್ಟ್ರೀಯತೆ ಎತ್ತಿ ಹಿಡಿಯುತ್ತ ಉಪನ್ಯಾಸಗಳನ್ನು ನೀಡಿ ಕೋಲ್ಕತ್ತಕ್ಕೆ ವಾಪಸಾದಾಗಲೂ ಭವ್ಯ

ಸ್ವಾಗತ ದೊರಕಿತು. ಮುಂದೆ ಮತ್ತೆ ಅಮೆರಿಕಕ್ಕೆ ಹೋಗಿ ವೇದಾಂತದ ಬಗ್ಗೆ ಉಪನ್ಯಾಸಗಳನ್ನು ನೀಡಿ, ವಾಪಸಾಗಿ ಭಾರತದ ಉದ್ದಗಲ ಸಂಚರಿಸಿ ಭಾಷಣಗಳನ್ನು ಮಾಡಿದರು.

(ಬೆಂಗಳೂರಿಗೆ ಬಂದಾಗ ಅವರು ಉಳಿದುಕೊಂಡಿದ್ದ ಮೆಜೆಸ್ಟಿಕ್ ಪ್ರದೇಶದ ಮನೆಯ ಮುಂಭಾಗದ ಬಂಡೆಕಲ್ಲನ್ನು ರಾಮಕೃಷ್ಣ ಮಠದಲ್ಲಿ ಇರಿಸಲಾಗಿದೆ. ಶಾರದಾಮಣಿಯವರೂ ಬೆಂಗಳೂರಿನ ರಾಮಕೃಷ್ಣ ಮಠದ ಹಿಂಭಾಗದ ಬಂಡೆಮೇಲೆ ಕುಳಿತು ಧ್ಯಾನಿಸಿದ್ದರು). ಅವರು ತಮ್ಮ ಮೂವತ್ತೊಂಬತ್ತನೇ ವಯಸ್ಸಿನಲ್ಲಿ ಅಕಾಲ ಮರಣಕ್ಕೆ ತುತ್ತಾದರು (೧೯೦೨). ಅದ್ಭುತ ವಾಗ್ಮಿಗಳಾಗಿದ್ದ ಹಾಗೂ ದಯಾಮಯಿ ಆಗಿದ್ದ ಅವರ The Song of the ಸನ್ಯಾಸಿನ್ ಒಂದು ಸ್ಫೂರ್ತಿದಾಯಕ ಗೀತೆ. ಕುವೆಂಪು ಅವರು ಶ್ರೀರಾಮಕೃಷ್ಣ ಪರಮಹಂಸರಿಂದ ಸ್ವಾಮಿ ವಿವೇಕಾನಂದರಿಂದ ಸ್ಫೂರ್ತಿ ಪಡೆದಿದ್ದಾರೆ. ಅವರು ಬರೆದಿರುವ ಅವರ ಜೀವನ ಚರಿತ್ರೆಗಳೂ ಸ್ಫೂರ್ತಿದಾಯಕವಾಗಿವೆ. (ನನಗೂ ಆ ಮಹಾತ್ಮರು ಸ್ಫೂರ್ತಿದಾಯಕರು. ಕೋಲ್ಕತ್ತದ ಅವರ ಸ್ಮಾರಕಗಳಿಗೆ ನಾನು ಹೋಗಿದ್ದೇನೆ ಮಾತ್ರವಲ್ಲ ಚಿಕಾಗೋದಲ್ಲಿ ಸ್ವಾಮಿ ವಿವೇಕಾನಂದರು ಮಾಡಿದ್ದ ಭಾಷಣದ ಜಾಗಕ್ಕೂ ಹೋಗಿದ್ದೇನೆ.) ಕುವೆಂಪು ತಮ್ಮ ನಾಡಗೀತೆಯಲ್ಲಿ ಸ್ಮರಿಸಿರುವ ಭಾರತದ ಕರ್ನಾಟಕದ ಶ್ರೇಷ್ಠರ ಮಾಲಿಕೆಯಲ್ಲಿ ಅವರೇ ಕೊನೆಯವರು. ಕಪಿಲ, ಪತಂಜಲಿ, ಪಂಪ, ರನ್ನ, ರಾಮಕೃಷ್ಣ, ವಿವೇಕಾನಂದರು ಭಾರತೀಯರು ಮಾತ್ರವಲ್ಲ, ಕನ್ನಡಿಗರೂ ಸೇರಿದಂತೆ ಎಲ್ಲ ಭಾರತೀಯರಿಗೂ ಸೇರಿದವರು. ಧನ್ಯೆ ಭಾರತಮಾತೆ; ಅಂತಹ ಭಾರತಮಾತೆಗೆ, ಕರ್ನಾಟಕ ಮಾತೆಗೆ ಜಯವಾಗಲಿ.

## "ಸರ್ವಜನಾಂಗದ ಶಾಂತಿಯ....."

ಕರ್ನಾಟಕವು ಎಲ್ಲ ಜನಾಂಗೀಯರೂ ಧರ್ಮದವರೂ ಸೌಹಾರ್ದದಿಂದ ಬದುಕಿ ಬೆಳೆಯುವ ಶಾಂತಿಯ ತೋಟವಾಗಿದೆ. ಆ ತೋಟ ಫಲವತ್ತಾದ ಮಣ್ಣಿನಿಂದ ಸಮೃದ್ಧ ನೀರಿನಿಂದ ಕೂಡಿದೆ. ಒಂದೊಂದು ಧರ್ಮವೂ ಗಿಡವಾಗಿದ್ದು ಮರವಾಗಿ ಬೆಳೆದು ಭಿನ್ನ ಭಿನ್ನ ಬಗೆಯ ಹೂಗಳನ್ನು ಹಣ್ಣುಗಳನ್ನು ನೀಡಲು ಇಲ್ಲಿ ಅವಕಾಶವಿದೆ. ಭಿನ್ನ ಧರ್ಮದವರೂ ಅನ್ಯದೇಶೀಯರೂ ಇಲ್ಲಿ ಶಾಂತಿಯಿಂದ ಬದುಕುತ್ತಿದ್ದಾರೆ. ಆ ಧರ್ಮದವರು ಯಾರು ಎಂಬುದು ಮುಂದೆ ಬರುತ್ತದೆ. ಕರ್ನಾಟಕದ ಗುಡ್ಡ ಬೆಟ್ಟ ಅರಣ್ಯ ನದಿ ಗದ್ದೆ ಹೊಲ ತೋಟಗಳೂ ಸೇರಿದಂತೆ ಇಲ್ಲಿನ ಸಮಸ್ತವೂ ವಿಶ್ವದ ಸೌಂದರ್ಯಪ್ರಜ್ಞೆಯ ರಸಿಕರನ್ನು ತನ್ನ ಚೆಲುವಿನಿಂದ ಆಕರ್ಷಿಸುತ್ತಿದೆ. ಕರ್ನಾಟಕದ ಚೆಲುವನ್ನು ನೋಡಲು, ಅದರ ಪರಂಪರೆಯ ತಾಣಗಳನ್ನು ನೋಡಲು ಭಾರತದ ದೇಶ ವಿದೇಶಗಳ ರಸಿಕರ ದಂಡೇ ಬರುತ್ತದೆ. ಹಿಂದೂ ಧರ್ಮ ಮೂಲತಃ ಭಾರತದ್ದು; ಕರ್ನಾಟಕದೂ ಹೌದು. ಹಿಂದೆ ವೇದಗಳ ಬಗ್ಗೆ ಬರೆಯುವಾಗ ಹಿಂದೂಧರ್ಮದ ಅಡಿಗಲ್ಲಾದ ವೇದಗಳು

ಪ್ರತಿಪಾದಿಸುವ ಧರ್ಮದ ಉದಾತ್ತ ತತ್ತ್ವಗಳನ್ನು ಸೂಚಿಸಲಾಗಿದೆ. ಅದು ಭಾರತದ ಅತ್ಯಂತ ಪ್ರಾಚೀನ ಧರ್ಮ. ಕ್ರೈಸ್ತ ಧರ್ಮದ ಅನುಯಾಯಿಗಳ ಆಗಮನ ಕರ್ನಾಟಕಕ್ಕೆ ಆದದ್ದು ಹದಿನೈದನೇ ಶತಮಾನದಿಂದ ಈಚೆಗೆ. ಗೋವೆಯ ಪೋರ್ಚುಗೀಸರ ಮೂಲಕ ಮುಂಚೆಯೇ ಕೆಲವು ಕ್ರಿಶ್ಚಿಯನ್ನರು ಬಂದಿದ್ದರು ಎಂಬುದಕ್ಕೆ ದಾಖಲೆಗಳಿವೆ. ಆ ಧರ್ಮವು ಮಾನವ ಸಮಾನತೆ ದಯೆ ಕರುಣೆಗಳನ್ನು ಪ್ರತಿಪಾದಿಸುವ, ದೇವರ ಬಗ್ಗೆ ಪ್ರೀತಿಯನ್ನು ಪ್ರತಿಪಾದಿಸುವ, ಕೊಲೆ ಅಸತ್ಯ ವ್ಯಭಿಚಾರಗಳನ್ನು ವಿರೋಧಿಸುವ ಏಸುವಿನ ತತ್ವಗಳ ಆಧಾರದ ಮೇಲೆ ನಿಂತಿದೆ. ಇ.ಪಿ. ರೈಸ್, ಬಿ.ಎಲ್. ರೈಸ್, ರೆ|| ಕಿಟ್ಟಲ್, ಫ್ಲೀಟ್, ರೆ|| ಉತ್ತಂಗಿ ಚನ್ನಪ್ಪ ಇವರೇ ಮೊದಲಾದವರು ಕರ್ನಾಟಕದ ಶಾಸನಗಳನ್ನು ಸಂಗ್ರಹಿಸಿ, ಇತಿಹಾಸವನ್ನು ರಚಿಸಿ, ಸಾಹಿತ್ಯ ವ್ಯಾಕರಣ ಗ್ರಂಥಗಳನ್ನು ಪ್ರಕಟಿಸಿ ಹೊಸಗನ್ನಡ ಸಾಹಿತ್ಯಕ್ಕೆ ಅರುಣೋದಯವನ್ನು ತಂದರು. ಕ್ರಿ.ಶ. ಏಳನೇ ಶತಮಾನದ ಪ್ರವಾದಿ ಮಹಮ್ಮದನಿಂದ ಆರಂಭವಾದ ಇಸ್ಲಾಂ ಧರ್ಮವು ಸಾವಿರ ವರ್ಷಗಳ ಹಿಂದೆಯೇ ಭಾರತವನ್ನು ಪ್ರವೇಶಿಸಿತು. ಬಿಜಾಪುರದ ಆದಿಲ್ ಶಾಹಿಗಳು ನಿರ್ಮಿಸಿದ ಇಬ್ರಾಹಿಂರೋಜಾ, ಗೋಳಗುಮ್ಮಟಗಳು ಕರ್ನಾಟಕದ ವಾಸ್ತುಶಿಲ್ಪ ರಚನೆಗೆ ನೀಡಿದ ವಿಶಿಷ್ಟ ಕೊಡುಗೆಗಳು. ಹದಿನೇಳನೇ ಶತಮಾನದ ಗೋಳಗುಮ್ಮಟವು ಏಷ್ಯದಲ್ಲೇ ಅತಿ ಎತ್ತರದ, ವಿಶ್ವದಲ್ಲಿ ಎರಡನೆಯ ಎತ್ತರದ ಗುಮ್ಮಟವಾಗಿದ್ದು ಒಳಗೆ ಮೆತ್ತಗೆ ಮಾತನಾಡಿದರೆ ಸಾಕು, ಇನ್ನೊಂದು ತುದಿಯಲ್ಲಿರುವವರಿಗೆ ಕೇಳಿಸುತ್ತದೆ. ಅದನ್ನು "ಪಿಸುಗುಟ್ಟುವ ಗ್ಯಾಲರಿ" ಎಂದೇ ಕರೆಯುತ್ತಾರೆ. ಜೋರಾಗಿ ನಕ್ಕರೆ, ಚಪ್ಪಾಳೆ ತಟ್ಟಿದರೆ ಅದರ ಆರೆಂಟು ಪ್ರತಿಧ್ವನಿಗಳು ಆವರ್ತನಗೊಳ್ಳುತ್ತವೆ. ಬೀದರಿನ ಮದರಸಾವೂ ಕೂಡ ಮುಸ್ಲಿಂ ದೊರೆಗಳ ಕೊಡುಗೆ. ಪಾರಸಿಕರು ೭೦೦ರಲ್ಲಿ ಮೂಲತಃ ಪರ್ಷಿಯಾದಿಂದ (ಇರಾನ್) ಅನ್ಯಧರ್ಮೀಯರ ಧಾಳಿಯಿಂದ ಪಾರಾಗಲು ಭಾರತಕ್ಕೆ ಬಂದು ನೆಲಸಿ ಇಲ್ಲಿನ ಒಟ್ಟು ಜನಜೀವನಕ್ಕೆ ಸಂಪೂರ್ಣ ಹೊಂದಿಕೊಂಡರು. ಜೊರಾಸ್ಟ್ರಿಯನ್ ಬೋಧನೆಯ ಅನುಯಾಯಿಗಳಾದ ಅವರ ಧರ್ಮಗ್ರಂಥ ಜೆಂದ್ ಅವೆಸ್ತ. ನ್ಯಾಯ, ನಿಷ್ಠೆ, ಪ್ರಾಮಾಣಿಕತೆ ಅವರ ಹುಟ್ಟುಗುಣ ಮತ್ತು ಅವರು ವ್ಯವಹಾರ ತಜ್ಞರೂ ಹೌದು. ಅವರ ದೈವ ಅಹುರಮಜ್ದಾನ ಸಂಕೇತವಾಗಿ ದಿವ್ಯಜ್ಯೋತಿಯು ಬೆಳಕಿನ ರೂಪದಲ್ಲಿ ಅವರ ದೇವಾಲಯಗಳಲ್ಲಿ ಸದಾ ಉರಿಯುತ್ತಿರುತ್ತದೆ. ಅವರು ಭಾರತದ ಬಹು ಅಲ್ಪಸಂಖ್ಯಾತರು; ಕರ್ನಾಟಕದಲ್ಲೂ ಅಷ್ಟೇ. ಜೈನಧರ್ಮವು ಉತ್ತರ ಭಾರತದಿಂದ ಎರಡು ಸಾವಿರ ವರ್ಷಗಳ ಹಿಂದೆಯೇ ಭದ್ರಬಾಹು ಮತ್ತು ಅವನ ಶಿಷ್ಯ ಸಂಪ್ರತಿ ಚಂದ್ರಗುಪ್ತನ ಮೂಲಕ ದಕ್ಷಿಣ ಭಾರತಕ್ಕೆ ಬಂದು ಮುಖ್ಯವಾಗಿ ಶ್ರವಣಬೆಳ್ಗೊಳದಲ್ಲಿ ನೆಲಸಿ ಅಲ್ಲಿಂದ ಪ್ರಚಾರವಾಯಿತು. ಕ್ರಿಸ್ತಶಕ ಹನ್ನೆರಡನೆಯ ಶತಮಾನದವರೆಗೆ ಅದು ಕರ್ನಾಟಕದ ಪ್ರಬಲ ಧರ್ಮಗಳಲ್ಲೊಂದಾಗಿತ್ತು. ಕನ್ನಡ ಸಾಹಿತ್ಯದ ಆರಂಭವಾದುದೇ ಜೈನರಿಂದ. ಅಹಿಂಸೆ ಅದರ ಮುಖ್ಯಗುಣ. ಕರ್ನಾಟಕದ ಎಲ್ಲ ರಾಜಮನೆತನಗಳೂ ಆ ಧರ್ಮವನ್ನು ಬೆಂಬಲಿಸಿದ್ದುವು. ಪಂಪ, ರನ್ನ, ಜನ್ನ, ನಾಗಚಂದ್ರರಂತಹ ಕನ್ನಡ ಸಾಹಿತ್ಯದ ಆರಂಭಕಾಲದ ಶ್ರೇಷ್ಠ ಕವಿಗಳೆಲ್ಲ ಜೈನರು. ಚಾವುಂಡರಾಯನಂತಹ ಶ್ರೇಷ್ಠ ಮುತ್ಸದ್ದಿಗಳನ್ನು ಕನ್ನಡಕ್ಕೆ ನೀಡಿದೆ. ಹಿಂದೂ,

ಕ್ರೈಸ್ತ, ಇಸ್ಲಾಂ, ಜೊರಾಷ್ಟ್ರಿಯನ್ ಜೈನಧರ್ಮಗಳೆಲ್ಲ ಕರ್ನಾಟಕದಲ್ಲಿ ಸಾಮರಸ್ಯದಿಂದ ಬದುಕಿವೆ. ಅಲ್ಲಿ ಇಲ್ಲಿ ತೀರ ವಿರಳವಾಗಿ ವೈಯಕ್ತಿಕ ಸಂದರ್ಭಗಳಲ್ಲಿ ಕೆಲ ಧಾರ್ಮಿಕ ಸಂಘರ್ಷಗಳು ನಡೆದಿದ್ದರೂ ಅವು ಅಷ್ಟೇ ಬೇಗ ಶಾಂತವಾಗಿ ಸಾಮರಸ್ಯದಲ್ಲಿ ಕೊನೆಗೊಂಡಿವೆ. ಮಾಗಡಿ ಪ್ರದೇಶದಲ್ಲಿ ಜೈನರಿಗೂ ವೈಷ್ಣವರಿಗೂ ತಿಕ್ಕಾಟಗಳಾದಾಗ, ಬುಕ್ಕನು ಆ ಎರಡೂ ಧರ್ಮಗಳ ಮುಖಂಡರನ್ನು ಕರೆಯಿಸಿ ಶಾಂತಿ ಸಂಧಾನವನ್ನು ನಡೆಸಿದ ವಿಷಯವಿರುವ ಕಲ್ಯ, ಶ್ರವಣಬೆಳ್ಗೊಳ ಶಾಸನಗಳು ಪ್ರಸಿದ್ಧ. ಒಟ್ಟಿನಲ್ಲಿ ಕರ್ನಾಟಕವು ಎಲ್ಲ ಜನಾಂಗಗಳೂ ಸ್ನೇಹದಿಂದ ಬದುಕಿದ ಶಾಂತಿಯ ತೋಟವಾಗಿದೆ. ಇದಕ್ಕೆ ಒಂದು ಕಾರಣ, ಜನಕನನ್ನು ಹೋಲುವ ದೊರೆಗಳಿದ್ದುದು. ಜನಕ ಸೀತೆಯ ಸಾಕು ತಂದೆ, ಮಿಥಿಲೆಯ ದೊರೆ. ಜ್ಞಾನವನ್ನು ಸಂಪಾದಿಸಿದರೂ ಕ್ಷತ್ರಿಯನು ತನ್ನ ಕರ್ತವ್ಯವಾದ ಸಮ್ಯಕ್ ಪ್ರಜಾಪರಿಪಾಲನೆಯನ್ನು ಮಾಡಬೇಕೆಂದು ನಂಬಿದ್ದ ರಾಜರ್ಷಿ. ಅವನು ಪಂಚಮುಖ, ಯಾಜ್ಞವಲ್ಕ್ಯ, ಅಶ್ಮ ಮೊದಲಾದ ಮುನಿಗಳ ಜೊತೆ ವಿದ್ವಾಂಸರ ಜೊತೆ ಧರ್ಮ, ಅಧ್ಯಾತ್ಮಗಳ ಚರ್ಚೆ ಮಾಡಿದವನು. ಶುಕಮುನಿಗೆ ಜ್ಞಾನೋಪದೇಶ ಮಾಡಿದವನು. ತನ್ನ ರಾಜಧಾನಿ ಮಿಥಿಲೆ ಸುಟ್ಟಾಗಲೂ ಚಿತ್ತ ಸ್ಥೈರ್ಯವನ್ನು ಕಳೆದುಕೊಳ್ಳದೆ ತನ್ನ ಕರ್ತವ್ಯವನ್ನು ನಿರ್ವಹಿಸಿದ ಸ್ಥಿತಪ್ರಜ್ಞ; ಅವನನ್ನು ಹೋಲುವ ಶ್ರೇಷ್ಠ ರಾಜರು ಆಳಿದ ನಾಡು ಕರ್ನಾಟಕ. ಮಯೂರವರ್ಮ, ಇಮ್ಮಡಿ ಪುಲಿಕೇಶಿ, ಇಮ್ಮಡಿ ವಿಕ್ರಮಾದಿತ್ಯ (೭೪೦), ಇಮ್ಮಡಿ ತೈಲಪ, ಆರನೆಯ ವಿಕ್ರಮಾದಿತ್ಯ, ವಿಷ್ಣುವರ್ಧನ, ಕೃಷ್ಣದೇವರಾಯ, ನಾಲ್ಮಡಿ ಕೃಷ್ಣರಾಜ ಒಡೆಯರ್ ಇವರು ಅಂತಹ ಶ್ರೇಷ್ಠ ದೊರೆಗಳಲ್ಲಿ ಕೆಲವರು. ಇವರಲ್ಲಿ ಬಾದಾಮಿ ಚಾಲುಕ್ಯ ಚಕ್ರವರ್ತಿ ಇಮ್ಮಡಿ ವಿಕ್ರಮಾದಿತ್ಯನ ಬದುಕಿನ ಒಂದು ಘಟನೆ ಸ್ಮರಣಾರ್ಹ. ಅವನಿಗಿಂತ ಹಿಂದೆ ಕಂಚಿಯ ಪಲ್ಲವರು ಬಾದಾಮಿಯನ್ನು ವಶಪಡಿಸಿಕೊಂಡು ಅದನ್ನು ಸುಟ್ಟಿದ್ದರು. ವಿಕ್ರಮಾದಿತ್ಯನು ಕಂಚಿಯ ಪಲ್ಲವರನ್ನು ಸೋಲಿಸಿದಾಗ ಕಂಚಿಯನ್ನು ಸುಟ್ಟು ಸೇಡು ತೀರಿಸಿಕೊಳ್ಳಬಹುದಿತ್ತು. ಆದರೆ ಕಂಚಿಯ ಒಂದು ಶಾಸನ ಹೇಳುತ್ತದೆ- "....ಕಂಚಿಯಾನ್ ಕೊಂಡು ರಾಜಸಿಂಹೇಶ್ವರದ ಧನಮಾನ್ ಕಂಡು ಮಗುಳು ದೇವರ್ಗೆ ಬಿಟ್ಟಾರ್"; ಎಂದರೆ ಕಂಚಿಯನ್ನು ಸುಡುವ ಬದಲು, ಅಲ್ಲಿಯ ರಾಜಸಿಂಹೇಶ್ವರ ದೇವಾಲಯದ ಐಶ್ವರ್ಯವನ್ನು ಲೂಟಿ ಮಾಡದೆ ಆ ದೇವಾಲಯದ ಹಣವನ್ನು ವಾಪಸ್ ದೇವಾಲಯಕ್ಕೆ ನೀಡುತ್ತಾನೆ. "ಭಟಾರರಾ ಧರ್ಮಸ್ಥಿತಿ"ಯನ್ನು ಶಾಸನವು ಹೊಗಳಿದೆ. ಸೇಡಿಗೆ ಸೇಡು ತೀರಿಸಿಕೊಳ್ಳದೆ ಕ್ಷಮೆ ದಯೆ ಧರ್ಮವನ್ನು ವಿಕ್ರಮಾದಿತ್ಯ ತೋರಿದನು. ಹಾಗೆಯೇ, ಕರ್ನಾಟಕವು ಶ್ರೇಷ್ಠ ಗಾಯಕರನ್ನೂ ವೈಣಿಕರನ್ನೂ ಕಂಡಿದೆ. ಕದಂಬರ ಕಾಕುಸ್ಥವರ್ಮನ ಕಾಲದಲ್ಲಿ ಒಂದೊಂದು ಮನೆಯೂ ಮಧುರ ಸಂಗೀತ ನಿನಾದದಿಂದ ಶೋಭಿಸುತ್ತಿತ್ತೆಂದು ಶಾಸನಗಳು ವರ್ಣಿಸಿವೆ ("ಸಂಗೀತವಲ್ಗು ನಿನದೇಷು ಗೃಹೇಷು"). ಶಾಂತಲೆಯು "ಸಂಗೀತ ಸರಸ್ವತಿ"ಯೆಂದೇ ಪ್ರಸಿದ್ಧಳಾಗಿದ್ದಳು. ದೇವಾಲಯಗಳ ಗರ್ಭಗುಡಿಯ ರಂಗಸ್ಥಳದಲ್ಲಿ ನಡೆಯುತ್ತಿದ್ದ ಗೀತ, ವಾದ್ಯ, ನೃತ್ಯಗಳಿಗೆ ದತ್ತಿ ನೀಡಿರುವ ಸಾವಿರಾರು ಶಾಸನಗಳು ದೊರಕುತ್ತವೆ. ಹಂಪಿಯ ವಿರೂಪಾಕ್ಷನ 'ಆಸ್ಥಾನ ಮಂಟಪದಲ್ಲಿ' ಎಂದರೆ ಗರ್ಭಗುಡಿಯ ಮುಂಭಾಗದ ರಂಗಮಂಟಪದಲ್ಲಿ ಬಗೆ ಬಗೆಯ

ಗಾಯನ, ವಾದ್ಯ, ನೃತ್ಯಗಳು ನಡೆಯುತ್ತಿದ್ದುದರ ಬಗ್ಗೆ ವಿಸ್ತೃತ ದಾಖಲೆಗಳಿವೆ. ದೇವತಾಮೂರ್ತಿಯ ಗರ್ಭಗುಡಿಯ ಒಳಗಿನ ಸೇವೆಗೆ "ಅಂಗಭೋಗ" ಎಂದು, ಹೊರಭಾಗದ ಮಂಟಪದ ಸೇವೆಗೆ "ರಂಗಭೋಗ" ಎಂದೂ ಕರೆಯುತ್ತಿದ್ದರು. ಸಂಗೀತ ಪ್ರಿಯರಾಗಿದ್ದ ಹಲವು ಕನ್ನಡಿಗರು ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದ ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಭೂಲೋಕಮಲ್ಲನ ವಿಶ್ವಕೋಶ ಸದೃಶ ಸಂಸ್ಕೃತ "ಮಾನಸೋಲ್ಲಾಸ"ದಲ್ಲಿ ಸಂಗೀತ, ವಾದ್ಯಗಳ ವಿಶ್ಲೇಷಣೆ ಇದೆ. ಆರನೇ ವಿಕ್ರಮಾದಿತ್ಯನ ರಾಣಿ (೧೧೦೦) ಕೇತಲದೇವಿ "ದೇಶಭಾಷಾ ಸಂಗೀತ ವಿದ್ಯಾಧರಿ"ಯಾಗಿದ್ದಳು. ಜಗದೇಕಮಲ್ಲನ "ಸಂಗೀತ ಚೂಡಾಮಣಿ", ಶಾರ್ಙ್ಗದೇವನ "ಸಂಗೀತ ರತ್ನಾಕರ", ವಿದ್ಯಾರಣ್ಯರ "ಸಂಗೀತ ಸಾರ" (ಇದು ಅಲಭ್ಯ) ಇವು ಅವುಗಳಲ್ಲಿ ಕೆಲವು. ನಿಜಗುಣಶಿವಯೋಗಿಯ ಕನ್ನಡ "ವಿವೇಕ ಚೂಡಾಮಣಿ" ಸಂಗೀತ ಶಾಸ್ತ್ರದ ಬಗ್ಗೆ ಹಲವು ಅಮೂಲ್ಯ ಮಾಹಿತಿ ನೀಡುತ್ತದೆ. ಅವರು ರಚಿಸಿರುವ ಕೀರ್ತನೆಗಳು ಪ್ರಸಿದ್ಧ. ಹರಿದಾಸರ ಕಾಲದಲ್ಲಿ ಸಂಗೀತವು ಕರ್ನಾಟಕದಲ್ಲಿ ಎಷ್ಟು ಬೆಳೆದಿತ್ತೆಂದರೆ, ದಕ್ಷಿಣಾದಿ ಸಂಗೀತವು "ಕರ್ನಾಟಕ ಸಂಗೀತ" ಎಂದೇ ಪ್ರಸಿದ್ಧವಾಯ್ತು. ಪುರಂದರದಾಸರು ಕೀರ್ತನೆಗಳನ್ನು ರಚಿಸಿರುವುದಲ್ಲದೆ ಸ್ವತಃ ಶ್ರೇಷ್ಠ ಗಾಯಕರೂ ಆಗಿದ್ದರು. ಮಾಗಡಿ ಕೆಂಪೇಗೌಡ, ಕಂಠೀರವ ನರಸರಾಜ ಒಡೆಯರು, ಚಿಕ್ಕದೇವರಾಜ ಒಡಯರು, ಜಯ ಚಾಮರಾಜ ಒಡೆಯರು ಸಂಗೀತ ಪ್ರಿಯರಾಗಿದ್ದರು. ವಚನಕಾರ ಸಕಲೇಶ ಮಾದರಸ (೧೧೪೦) ಹಲವು ಬಗೆಯ ವೀಣೆಗಳನ್ನು ನುಡಿಸುವ ವೈಣಿಕನಾಗಿದ್ದ. ಸೋದೆ ದೊರೆ ಸದಾಶಿವನಾಯಕ (೧೬೯೧) ಶ್ರೇಷ್ಠ ಗಾಯಕ, ನರ್ತಕ. ಆಧುನಿಕ ಕಾಲಕ್ಕೆ ಬಂದರೆ ವೀಣೆ ಶೇಷಣ್ಣ, ವೀಣೆ ಸುಬ್ಬಣ್ಣ, ಮೈಸೂರು ವಾಸುದೇವರಾಯರು, ಟಿ. ಚೌಡಯ್ಯ, ಬಿಡಾರಂ ಕೃಷ್ಣಪ್ಪ ಇವರು ಗಾಯನ, ವಾದನ (ವೀಣೆ, ಪಿಟೀಲು) ಕಲೆಗಳಲ್ಲಿ ಭಾರತದ ಅಗ್ರಗಣ್ಯರಲ್ಲಿ ಕೆಲವರು. ಇಂಥವರು ಹಾಡುತ್ತ, ವಾದನ ನುಡಿಸುತ್ತ ಜನರನ್ನು ಹರ್ಷಿತಗೊಳಿಸಿ ತಾವೂ ಆನಂದದಿಂದ ವಿಹರಿಸುವ ಆರಾಮ ಅಥವಾ ಸುಂದರ ಉದ್ಯಾನ ಕರ್ನಾಟಕ. ಕನ್ನಡ ತಾಯಿಯ ಮಕ್ಕಳ 'ದೇಹ'ವು ವಾಸ್ತವವಾಗಿ ಕನ್ನಡ ನುಡಿ ಕುಣಿದಾಡುವ "ಗೇಹ' (ಮನೆ). ಕನ್ನಡ ನುಡಿ ವಾಸವಾಗಿರುವುದು ಕನ್ನಡ ಜನರ ದೇಹದಲ್ಲಿ: ಅವರನ್ನು ಬಿಟ್ಟರೆ ಕನ್ನಡಕ್ಕೆ ಇರಲು ಜಾಗ ಬೇರಿಲ್ಲ. ಬಹಳ ಖುಷಿಯಿಂದ ಕನ್ನಡವು ಕುಣಿದಾಡುತ್ತ ಕನ್ನಡಿಗರ ದೇಹದಲ್ಲಿದೆ- ಆ ದೇಹಕ್ಕೆ ಆ ನುಡಿ ಚೈತನ್ಯ ತರುತ್ತದೆ. ಕನ್ನಡ ತಾಯಿಯ ಮಕ್ಕಳ ದೇಹವೇ ಕನ್ನಡ ತಾಯಿಯ ಪ್ರಾಣ, ಜೀವ ಜೀವಾಳ. ಅಂತಹ ಕರ್ನಾಟಕ ಮಾತೆಗೆ ಜಯವಾಗಲಿ; ಅವಳನ್ನು ಹೆತ್ತ ಭಾರತ ಮಾತೆಗೆ ಜಯವಾಗಲಿ.

## ಸರ್ಕಾರಕ್ಕೆ ಸಲಹೆ

ಈಗಿನ "ನಾಡಗೀತೆ"ಯು ಕುವೆಂಪು ಬರೆದ ಕವನದ ಪೂರ್ಣಪಾಠ. ಎಲ್ಲರಿಗೂ ಆಗಿರುವ ಅನುಭವವೆಂದರೆ ಆ ನಾಡಗೀತೆಯ ಇಡೀ ಪಾಠವನ್ನು ಎಲ್ಲರೂ ನೆನಪಿಟ್ಟುಕೊಳ್ಳುವುದು ಕಷ್ಟವಾಗಿದೆ. ಒಬ್ಬ ಜನಪ್ರಿಯ ಹಾಡುಗಾರರನ್ನು ಕೇಳಿದಾಗ ಅವರೂ ಅದೇ ಮಾತನ್ನು ಹೇಳಿದರು. ನಾಡಗೀತೆ ಹಾಡುವಾಗ ಅದರ ಅಚ್ಚಾದ ಅಥವಾ ಕೈ ಬರಹದ ಪ್ರತಿ ತಮ್ಮಲ್ಲಿರುತ್ತದೆಯೆಂದೂ ಹೇಳಿದರು. ನಾಡಗೀತೆಯ ಪದ್ಯ ಖಂಡಗಳ ಆನುಪೂರ್ವಿಯೂ ಹಾಡುವಾಗ ಅಸ್ತವ್ಯಸ್ತವಾಗಬಹುದು.

ಸಭೆಗೆ ಮುನ್ನ ಹಾಡುವ ಪ್ರಾರ್ಥನಾಗೀತೆ ಸಮಯದಲ್ಲಿ ಯಾರೂ ಎದ್ದು ನಿಲ್ಲುವುದಿಲ್ಲ. ಆದ್ದರಿಂದ ಅದು ದೀರ್ಘವಾಗಿದ್ದರೂ ಚಿಂತೆಯಿಲ್ಲ. ಆದರೆ ನಾಡಗೀತೆಯನ್ನು ಹಾಡುವಾಗ ಅದನ್ನು ಎಲ್ಲರ ಜೊತೆ ಹಾಡದಿದ್ದರೂ ಕಡ್ಡಾಯವಾಗಿ ಎಲ್ಲರೂ ಎದ್ದು ನಿಂತು ಗೌರವ ಸಲ್ಲಿಸಬೇಕು ಎಂದು ಆದೇಶವಿದೆ. ಕರ್ನಾಟಕ "ನಾಡಗೀತೆ" ಹಾಡಲು ಕನಿಷ್ಠ ನಾಲ್ಕು ನಿಮಿಷ ಬೇಕು. ಅಷ್ಟು ಹೊತ್ತು ಎಲ್ಲರೂ ಎದ್ದು ನಿಲ್ಲುವುದು ಕಷ್ಟ. ವಯಸ್ಕರಿಗೆ ಅನಾರೋಗ್ಯದವರಿಗೆ ಇನ್ನೂ ಕಷ್ಟ. ಈಗಿನ "ನಾಡಗೀತೆ" ಮುಗಿಯುವುದನ್ನೇ ಎಲ್ಲರೂ ಕಾಯುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು "ನಾಡಗೀತೆ"ಯ ಆರಂಭದ ಪಲ್ಲವಿ ಉಳಿಸಿಕೊಂಡು ಉಳಿದ ಆರು ಪದ್ಯ ಖಂಡಗಳಲ್ಲಿ ಒಂದನ್ನೋ ಹೆಚ್ಚೆಂದರೆ ಎರಡನೋ ಆರಿಸಿ ಅಷ್ಟನ್ನು "ನಾಡಗೀತೆ"ಯಾಗಿ ಘೋಷಿಸುವ ಅಗತ್ಯವಿದೆ. (೧೧.೧೨.೨೦೦೩ರ ಮೊದಲ ಆದೇಶದ ಒಂದು ಪದ್ಯ ಖಂಡ ಬಿಡಬಹುದು. ಕುವೆಂಪು ಅವರು ಬರೆದ ಕವನದ ಪಾಠವನ್ನು ಮಾರ್ಪಡಿಸುವ ಹಕ್ಕು ಯಾರಿಗೂ ಇಲ್ಲ.)

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಷ್ಟ್ರಕವಿ ಜ್ಞಾನಪೀಠ ಪುರಸ್ಕೃತರಾದ ಡಾ: ಕುವೆಂಪು ರವರ "ಜಯ ಭಾರತ ಜನನಿಯ ತನುಜಾತೆ" ಕವನವನ್ನು "ನಾಡಗೀತೆ"ಯಾಗಿ ಘೋಷಿಸುವ ಕುರಿತು.

ಓದಲಾಗಿದೆ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶಕರ ವ್ಯವಹಾರ ಕೊನೆಗೊಂಡ ಅ.ಸ.ಪತ್ರ ಸಂಖ್ಯೆ:ಕಸನಿ:42:

ಉತ್ಸವ: 2003-04 ದಿನಾಂಕ:11.12.2003

ಪ್ರಸ್ತಾವನೆ :

ರಾಷ್ಟ್ರಕವಿ ಜ್ಞಾನಪೀಠ ಪುರಸ್ಕೃತರಾದ ಡಾ:ಕುವೆಂಪುರವರ ಜನ್ಮ ಶತಮಾನೋತ್ಸವವನ್ನು ಆಚರಿಸಲು- ಸರ್ಕಾರವು ನಿರ್ಧರಿಸಿರುವ ಹಿನ್ನಲೆಯಲ್ಲಿ ಕುವೆಂಪುರವರು ರಚಿಸಿರುವ " ಜಯ ಭಾರತ ಜನನಿಯ ತನುಜಾತೆ" ಕವನವನ್ನು 'ನಾಡ ಗೀತೆ' ಯಾಗಿ ಘೋಷಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಸಂಕಇ 207 ಕಸದ 2003,ದಿ:7.1.2004

ರಾಷ್ಟ್ರಕವಿ ಜ್ಞಾನಪೀಠ ಪುರಸ್ಕೃತರಾದ ಡಾ: ಕುವೆಂಪು ಅವರ ಜನ್ಮ ಶತಮಾನೋತ್ಸವವನ್ನು ದಿ:29-12-2003 ರಿಂದ 28-12-2004 ರವರೆಗೆ ಆಚರಿಸಲಾಗುತ್ತಿದ್ದು, ಈ ಹಿನ್ನಲೆಯಲ್ಲಿ ರಾಷ್ಟ್ರಕವಿ ಡಾ: ಕುವೆಂಪು ರವರು ರಚಿಸಿರುವ "ಜಯಭಾರತ ಜನನಿಯ ತನುಜಾತೆ" ಕವನವನ್ನು 'ನಾಡ ಗೀತೆ' ಯಾಗಿ ಘೋಷಿಸಲು ಸರ್ಕಾರವು ಹರ್ಷಿಸು ತ್ತದೆ. ಈ ನಾಡಗೀತೆಯನ್ನು ಹಾಡುವಾಗ ಈ ಕೆಳಕಂಡ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವುದು.

ಅ. ಜಯ ಭಾರತ ಜನನಿಯ ತನುಜಾತೆ ಕವನದ ಅನುಬಂಧ-1ರಲ್ಲಿ ವಿವರಿಸಿದ ಆಯ್ದ ಭಾಗವನ್ನು ನಾಡಗೀತೆಯಾಗಿ ಪರಿಗಣಿಸಿ ಅಳವಡಿಸಿಕೊಳ್ಳುವುದು.

ಆ. ಈ ಹಾಡಿನ ಪ್ರಾರಂಭದಿಂದ ಗೀತೆಯು ಮುಗಿಯುವ ತನಕ ಎದ್ದುನಿಂತು ಗೌರವವನ್ನು ಸಲ್ಲಿಸುವುದು.

ಇ. ಎಲ್ಲಾ ಶಾಲೆಗಳಲ್ಲಿ ನಾಡಗೀತೆಯನ್ನು ದೈನಂದಿನ ಚಟುವಟಿಕೆಗಳು ಆರಂಭವಾಗುವ ಮುನ್ನ ಹಾಗೂ ಎಲ್ಲಾ ಸಾಂಸ್ಕೃತಿಕ ಸಾಹಿತ್ಯಕ ಹಾಗೂ ಇತರೆ ಅಧಿಕೃತ ಕಾರ್ಯಕ್ರಮಗಳಲ್ಲಿ ಹಾಡುವುದು.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, (ರಾಜಕೀಯ) ಟಿಪ್ಪಣಿ ಸಂಖ್ಯೆ: ಸಿಆಸುಇ 68 ರಾರಾಆ 2003, ದಿನಾಂಕ:25.11.2003 ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಪತ್ರ ಸಂಖ್ಯೆ: ಸಂವ್ಯಸಾಇ 2059 ಕಾ:2003 ದಿನಾಂಕ:16.12.2003ರಲ್ಲಿ ನೀಡಿರುವ ಅಭಿಪ್ರಾಯದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಹಾಗೂ ಅವರ ಹೆಸರಿನಲ್ಲಿ.

(ಉಷಾ ಗಣೇಶ್)

ಸರ್ಕಾರದ ಪ್ರಧಾನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ

ಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು

2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು

3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು

4. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ಬೆಂಗಳೂರು

5. ರಾಜ್ಯಪಾಲರ ಕಾರ್ಯದರ್ಶಿ, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜ ಭವನ, ಬೆಂಗಳೂರು

6. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಕರ್ನಾಟಕ ವಿದಾನ ಪರಿಷತ್ತು, ಬೆಂಗಳೂರು

7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು

8. ಮಹಾ ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

9. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು

10.ಎಲ್ಲಾ ಜಿಲ್ಲಾಧಿಕಾರಿಗಳು

11.ಜಿಲ್ಲಾ ಪಂಚಾಯತ್‌ನ ಎಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು

12.ಎಲ್ಲಾ ನಿಗಮ / ಮಂಡಳಿಗಳು / ಸಾರ್ವಜನಿಕ ಉದ್ದಿಮೆಗಳ ಮುಖ್ಯಸ್ಥರುಗಳು

13.ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು

14.ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

15.ಅಧ್ಯಕ್ಷರು, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳ್ಳಿ, ಶಿವಮೊಗ್ಗ ಜಿಲ್ಲೆ.

16.ನಿರ್ದೇಶಕರು, ವಾರ್ತಾ ಇಲಾಖೆ, 2ನೇ ಮಹಡಿ, ಶಿವಾಜಿನಗರ, ಬೆಂಗಳೂರು

17.ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು

ಸರ್ಕಾರದ ಆದೇಶ ಸಂಖ್ಯೆ, ಸಂಕಇ 207 ಕಸಧ:2003, ದಿನಾಂಕ 7-1-2004

ಅನುಬಂಧ-1

ಜಯ ಹೇ ಕರ್ನಾಟಕ ಮಾತೆ !

ಜಯ್ ಭಾರತ ಜನನಿಯ ತನುಜಾತೆ,

ಜಯ ಹೇ ಕರ್ನಾಟಕ ಮಾತೆ !

ಜಯ್ ಸುಂದರ ನದಿ ವನಗಳ ನಾಡೆ,

ಜಯ ಹೇ ರಸಋಷಿಗಳ ಬೀಡೆ

ಜನನಿಯ ಜೋಗುಳ ವೇದದ ಘೋಷ,

ಜನನಿಗೆ ಜೀವವು ನಿನ್ನಾವೇಶ.

ಹಸುರಿನ ಗಿರಿಗಳ ಸಾಲೆ

ನಿನ್ನಯ ಕೊರಳಿನ ಮಾಲೆ.

ಕಪಿಲ ಪತಂಜಲ ಗೌತಮ ಜಿನನುತ

ಭಾರತ ಜನನಿಯ ತನುಜಾತೆ,

ಜಯ ಹೇ ಕರ್ಣಾಟಕ ಮಾತೆ !

ಸರ್ವ ಜನಾಂಗದ ಶಾಂತಿಯ ತೋಟ,

ರಸಿಕರ ಕಂಗಳ ಸೆಳೆಯುವ ನೋಟ,

ಹಿಂದೂ ಕ್ರೈಸ್ತ ಮುಸಲ್ಮಾನ

ಪಾರಸಿಕ ಜೈನರುದ್ಯಾನ.

ಜನಕನ ಹೋಲುವ ದೊರೆಗಳ ಧಾಮ

ಗಾಯಕ ವೈಣಿಕರಾರಾಮ !

ಕನ್ನಡನುಡಿ ಕುಣಿದಾಡುವ ಗೇಹ,

ಕನ್ನಡ ತಾಯಿಯ ಮಕ್ಕಳ ದೇಹ !

ಜಯ್ ಭಾರತ ಜನನಿಯ ತನುಜಾತೆ,

ಜಯಹೇ 'ಕರ್ಣಾಟಕ ಮಾತೆ !

ಜಯ್ ಸುಂದರ ನದಿ ವನಗಳ ನಾಡೆ,

ಜಯ ಹೇ ರಸಋಷಿಗಳ ಬೀಡೆ.

- ರಾಷ್ಟ್ರಕವಿ ಕುವೆಂಪು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ರಾಷ್ಟ್ರಕವಿ ಜ್ಞಾನಪೀಠ ಪುರಸ್ಕೃತರಾದ ಡಾ', ಕುವೆಂಪುರವರ “ಜಯ ಭಾರತ ಜನನಿಯ ತನುಜಾತೆ”

ಕವನವನ್ನು ‘ನಾಡ ಗೀತೆ' ಎಂದು ಘೋಷಿಸುವ ಕುರಿತು.

ಪರಿಷ್ಕೃತ ಆದೇಶವನ್ನು ಹೊರಡಿಸುವ ಬಗ್ಗೆ,

ಓದಲಾಗಿದೆ: 1.ಸರ್ಕಾರದ ಆದೇಶ ಸಂಖ್ಯೆ: ಸಂಕಇ207 ಕಸಧ2003

ದಿನಾಂಕ:7.1.2004,

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1}ರ ಆದೇಶದಲ್ಲಿ ರಾಷ್ಟ್ರಕವಿ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ: ಕುವೆಂಪು ರಚಿತ "ಜಯಭಾರತ ಜನನಿಯ ತನುಜಾತೆ” ಕವನವನ್ನು “ನಾಡಗೀತೆ' ಯಾಗಿ ಘೋಷಿಸಲು ಸರ್ಕಾರವು ಆದೇಶವನ್ನು ಹೊರಡಿಸಿದೆ.

ಈ ಬಗ್ಗೆ ಹಲವು ಸಂಘ ಸಂಸ್ಥೆಗಳು, ಗಣ್ಯ ವ್ಯಕ್ತಿಗಳು, ಸರ್ಕಾರಕ್ಕೆ ಮನವಿ ಸಲ್ಲಿಸಿರುವ ಹಾಗೂ ಸಾರ್ವಜನಿಕರ ಪ್ರತಿಕ್ರಿಯೆಯ ಹಿನ್ನೆಲೆಯಲ್ಲಿ ಪುನರ್ ಪರಿಶೀಲಿಸಲು ನಿರ್ಧರಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಸಂಕಇ 207 ಕಸಧ 2003,ದಿ:23.2.2004

ಸರ್ಕಾರದ ಆದೇಶ ಸಂ: ಸಂಕಇ 207 ಕಸಧ 2003, ದಿನಾಂಕ:7.1.2004ನ್ನು ಭಾಗಶ: ಮಾರ್ಪಡಿಸಿ ಅನುಬಂಧದಲ್ಲಿರುವಂತೆ ರಾಷ್ಟ್ರಕವಿ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ: ಕುವೆಂಪು ರಚಿತ "ಜಯಭಾರತ ಜನನಿಯ ತನುಜಾತೆ' ಕವನದ ಪೂರ್ಣ ಪಾತವನ್ನು 'ನಾಡಗೀತೆ' ಯಾಗಿ ಘೋಷಿಸಲು ಸರ್ಕಾರವು ಹರ್ಷಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಹಾಗೂ

ಅವರ ಹೆಸರಿನಲ್ಲಿ,

(ಸಿ.ಎಸ್.ಎಸ್.ಶರ್ಮ),

ಸರ್ಕಾರದ ಉಪ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ,

ಸಂಚಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ

ಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
4. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ಬೆಂಗಳೂರು
5. ರಾಜ್ಯಪಾಲರ ಕಾಂತರ್ುದರ್ಶಿ, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
6. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ / ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
8. ಮಹಾ ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
9. ನಿಬಂಧಕರು, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು
10. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು
11. ಎಲ್ಲಾ ಜಿಲ್ಲಾಧಿಕಾರಿಗಳು
12. ಜಿಲ್ಲಾ ಪಂಚಾಯತ್‌ನ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
13. ಎಲ್ಲಾ ನಿಗಮ/ಮಂಡಳಿಗಳ/ಸಾರ್ವಜನಿಕ ಉದ್ದಿಮೆಗಳ ಮುಖ್ಯಸ್ಥರುಗಳು
14. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು
15. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
16. ಅಧ್ಯಕ್ಷರು, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳ್ಳಿ, ಶಿವಮೊಗ್ಗ ಜಿಲ್ಲೆ

17. ನಿರ್ದೇಶಕರು, ವಾರ್ತಾ ಇಲಾಖೆ, 2ನೇ ಮಹಡಿ, ಶಿವಾಜಿನಗರ, ಬೆಂಗಳೂರು

18. ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು

ಸರ್ಕಾರದ ಆದೇಶ ಸಂಖ್ಯೆ: ಸಂಕಇ 207 ಕಸಧ 2003, ದಿನಾಂಕ:23.2.2004,

ಅನುಬಂಧ

ಜಯ ಹೇ ಕರ್ನಾಟಕ ಮಾತೆ !

ಜಯ್ ಭಾರತ ಜನನಿಯ ತನುಜಾತೆ,

ಜಯ್ ಸುಂದರ ನದಿ ವನಗಳ ನಾಡೆ,

ಜಯ ಹೇ ರಸಋಷಿಗಳ ಬೀಡೆ !

ಭೂದೇವಿಯ ಮಕುಟದ ನವಮಣಿಯೆ,

ಗಂಧದ ಚಂದದ ಹೊನ್ನಿನ ಗಣಿಯೆ ;

ರಾಘವ ಮಧುಸೂಧನರವತರಿಸಿದ

ಭಾರತ ಜನನಿಯ ತನುಜಾತೆ,

ಜಯ ಹೇ ಕರ್ನಾಟಕ ಮಾತೆ !

ಜನನಿಯ ಜೋಗುಳ ವೇದದ ಘೋಷ,

ಜನನಿಗೆ ಜೀವವು ನಿನ್ನಾವೇಶ,

ಹಸುರಿನ ಗಿರಿಗಳ ಸಾಲೆ

ನಿನ್ನಯ ಕೊರಳಿನ ಮಾಲೆ,

ಕಪಿಲ ಪತಂಜಲ ಗೌತಮ ಜಿನನುತ

ಭಾರತ ಜನನಿಯ ತನುಜಾತೆ,

ಜಯ ಹೇ ಕರ್ನಾಟಕ ಮಾತೆ !

ಶಂಕರ ರಾಮಾನುಜ ವಿದ್ಯಾರಣ್ಯ

ಬಸವೇಶ್ವರ ಮಧ್ವರ ದಿವ್ಯಾರಣ್ಯ

ರನ್ನ ಷಡಕ್ಷರಿ ಪೊನ್ನ

ಪಂಪ ಲಕುಮಿಪತಿ ಜನ್ನ

ಕುಮಾರವ್ಯಾಸರ ಮಂಗಳಧಾಮ

ಕವಿಕೋಗಿಲೆಗಳ ಪುಣ್ಯಾರಾಮ !

ನಾನಕ ರಾಮಾನಂದ ಕಬೀರರ

ಭಾರತ ಜನನಿಯ ತನುಜಾತೆ,

ಜಯ ಹೇ ಕರ್ನಾಟಕ ಮಾತೆ !

ತೈಲಪ ಹೊಯ್ಸಳರಾಳಿದ ನಾಡೆ,

ಡಂಕಣ ಜಕಣರ ನೆಚ್ಚಿನ ಬೀಡೆ;

ಕೃಷ್ಣ ಶರಾವತಿ ತುಂಗಾ

ಕಾವೇರಿಯ ವರ ರಂಗ,

ಚೈತನ್ಯ ಪರಮಹಂಸ ವಿವೇಕರ

ಭಾರತ ಜನನಿಯ ತನುಜಾತೆ,

ಜಯ ಹೇ ಕರ್ನಾಟಕ ಮಾತೆ !

ಸರ್ವಜನಾಂಗದ ಶಾಂತಿಯ ತೋಟ,

ರಸಿಕರ ಕಂಗಳ ಸೆಳೆಯುವ ನೋಟ

ಹಿಂದೂ ಕ್ರೈಸ್ತ ಮುಸಲ್ಮಾನ

ಪಾರಸಿಕ ಜೈನರುದ್ಯಾನ,

ಜನಕನ ಹೋಲುವ ದೊರೆಗಳ ಧಾಮ,

ಗಾಯಕ ವೈಣಿಕರಾರಾಮ !

ಕನ್ನಡನುಡಿ ಕುಣಿದಾಡುವ ಗೇಹ !

ಕನ್ನಡ ತಾಯಿಯ ಮಕ್ಕಳ ದೇಹ !

ಜಯ್ ಭಾರತ ಜನನಿಯ ತನುಜಾತೆ,

ಜಯಹೇ ಕರ್ನಾಟಕ ಮಾತೆ !

ಜಯ್ ಸುಂದರ ನದಿವನಗಳ ನಾಡೆ,

ಜಯ ಹೇ ರಸಋಷಿಗಳ ಬೀಡೆ !

- ರಾಷ್ಟ್ರಕವಿ ಕುವೆಂಪು

(ಸಿ.ಎಸ್.ಎಸ್.ಶರ್ಮ.)

ಸರ್ಕಾರದ ಉಪ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

* * * *